"ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು"

(ಕ.ರಾ.ಶಿ.ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ.
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಬಿರಾದಾರ ಸರೋಜಾ ವಿಶ್ವನಾಥ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು,
ಕ.ರಾ.ಶಿ. ಸಂಸ್ಥೆಯ
ಸ್ನಾತ್ತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ.

ಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬
ಸೆಪ್ಟೆಂಬರ್ - ೨೦೦೯

748

"ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು"

(ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಬಿರಾದಾರ ಸರೋಜಾ ವಿಶ್ವನಾಥ

ಸಂಶೋಧನ ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

ಸೆಪ್ಟೆಂಬರ್-೨೦೦೯

ಪ್ರಮಾಣ ಪತ್ರ

"ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು" ಎಂಬ ನಿಬಂಧವನ್ನು ಡಾ. ಜಗನ್ನಾಥ ಹೆಬ್ಬಾಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ, ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ.
ದಿನಾಂಕ: 26/9/2009

ಸರೋಜಾ.ಬಿ.ವಿ.
ಬಿರಾದಾರ ಸರೋಜಾ ವಿಶ್ವನಾಥ
ಎಂ.ಫಿಲ್. ವಿದ್ಯಾರ್ಥಿನಿ
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ
ಸಂಶೋಧನ ಕೇಂದ್ರ, ಬೀದರ.

ಮಾರ್ಗದರ್ಶಕರ ಪ್ರಮಾಣ ಪತ್ರ

"ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಬಿರಾದಾರ ಸರೋಜಾ ವಿಶ್ವನಾಥ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಬೀದರ.

ದಿನಾಂಕ:

ಡಾ. ಜಗನ್ನಾಥ ಹೆಬ್ಬಾಳೆ
ಮಾರ್ಗದರ್ಶಕರು, ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ
ಕನ್ನಡ ಸಂಶೋಧನ ಕೇಂದ್ರ, ಬೀದರ.

ಪರಿವಿಡಿ

ಅಧ್ಯಾಯ-೧
ಪೀಠಿಕೆ: ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-1

ಪೀಠಿಕೆ: ಉದ್ದೇಶ ಮತ್ತು ವ್ಯಾಪ್ತಿ

ಕರ್ನಾಟಕದ ಕಿರಿಟವೆಂದೇ ಖ್ಯಾತಿವೆತ್ತ ಬೀದರ ಜಿಲ್ಲೆ ಹೈದ್ರಾಬಾದ ಕರ್ನಾಟಕ ಭಾಗದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಈ ಜಿಲ್ಲೆಯ ಹಲವಾರು ಶತಮಾನಗಳಿಂದಲೂ ತನ್ನ ವಿಶಿಷ್ಟವಾದ ಚರಿತ್ರೆಯನ್ನು ಕಟ್ಟಿಕೊಂಡು ಬಂದಿದೆ. ಮುಖ್ಯವಾಗಿ ಈ ಜಿಲ್ಲೆ ಕರ್ನಾಟಕದ ಅಂಚಿನಲ್ಲಿರುವುದರಿಂದ ಇದಕ್ಕೆ ಎರಡು ರಾಜ್ಯಗಳ ಸಂಪರ್ಕ ಏರ್ಪಟ್ಟಿದೆ. ಜಿಲ್ಲೆಯ ಬಲಭಾಗಕ್ಕೆ ಆಂಧ್ರಪ್ರದೇಶವಿದ್ದರೆ ಎಡ ಭಾಗಕ್ಕೆ ಮಹಾರಾಷ್ಟ್ರವಿದೆ. ಇಂತಹ ತ್ರಿವೇಣಿ ಸಂಗಮದ ಸ್ಥಳದಲ್ಲಿರುವ ಬೀದರ ಜಿಲ್ಲೆ ಭೌಗೋಳಿಕವಾಗಿಯೂ ಸಂಪದ್ಭರಿತವಾಗಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಎರಡು ಜಲಾಶಯಗಳು ರೈತರ ಬಾಳಿಗೆ ಹಸಿರನ್ನು ನೀಡಿವೆ. ಒಂದು ಕಾರಂಜಾ ಜಲಾಶಯ ಮತ್ತೊಂದು ಮಾಂಜ್ರಾ ಜಲಾಶಯ ಇವುಗಳೊಂದಿಗೆ ಹಲವಾರು ಭಾಷೆ ಮತ್ತು ಧರ್ಮಗಳನ್ನು ಒಳಗೊಂಡ ಈ ಜಿಲ್ಲೆ ಭಿನ್ನವೆನಿಸಿದೆ. ಕನ್ನಡವೇ ಇಲ್ಲಿಯ ಸಾಮಾನ್ಯ ಆಡುಭಾಷೆಯಾದರೂ ಇದರ ಜೊತೆಗೆ ಉರ್ದು, ಮರಾಠಿ, ತೆಲುಗು ಮುಂತಾದ ಭಾಷೆಗಳು ಇಲ್ಲಿ ಸರಾಗವಾಗಿ ಚಲಾವಣೆಯಲ್ಲಿವೆ. ಭಾಷೆಗಳ ಕಲಿಸುಮೇಲೋಗರದಂತೆಯೇ ಇಲ್ಲಿಯ ಧರ್ಮ-ಜಾತಿಗಳು ಕೂಡಾ ತುಂಬಾ ಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಹಿಂದು, ಮುಸ್ಲಿಂ, ಕ್ರೈಸ್ತ, ಸಿಖ್ಖ, ಬೌದ್ಧ ಮುಂತಾದ ಧರ್ಮಗಳು ಇಲ್ಲಿನ ಸಂಸ್ಕೃತಿಯನ್ನು ಸಾರುವ ಜೀವನಾಡಿಗಳಂತೆ ಕೆಲಸ ಮಾಡುತ್ತಿವೆ.

ಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಬೀದರ ಜಿಲ್ಲೆಯ ಕೊಡುಗೆ ಅಪೂರ್ವವಾಗಿದೆ. ಬೀದರ ಎನ್ನುವ ಪದ 'ಬೀದರ' ಎನ್ನುವ ಶಬ್ದದಿಂದ ಹುಟ್ಟಿಕೊಂಡಿದೆ. ಎನ್ನುವ ಅಭಿಪ್ರಾಯವಿದೆ. ಹಾಗಾದರೆ ಬಿದರಿ ಎನ್ನು ಪದದ ಮೂಲವೇನು? ಎಂಬ ಪ್ರಶ್ನೆ ಬರುತ್ತದೆ. ಇದು ಬಿದಿರು ಹೆಚ್ಚಾಗಿ ಬೆಳೆಯುವ ಪ್ರದೇಶವಾದುದರಿಂದ ಈ ಜಿಲ್ಲೆಗೆ ಎಂಬ ಹೆಸರು ಬಂದಿರುವ ಸಾಧ್ಯತೆಯೂ ಇದೆ. ಜೊತೆಗೆ ಇಲ್ಲಿಯ ವಿಶಿಷ್ಟ ಕಲೆಯಾದ 'ಬಿದರಿ ಕಲೆ' ಇದು ಜಗತ್ತು ಸಿದ್ಧಿಯನ್ನು ತಂದುಕೊಟ್ಟಿರುವುದನ್ನು ಕಾಣುತ್ತೇವೆ. ಹೀಗೆ ಬೀದರ ಎಂಬ ಹೆಸರಿನ ಹಿಂದೆ ಅನೇಕ ತೆರನಾದ ಹಿನ್ನೆಲೆಗಳನ್ನಿರುವುದು ಕಂಡು ಬರುತ್ತದೆ. ಕಲೆಯಂತೆಯೇ ಇಲ್ಲಿ ಹುಟ್ಟಲಾದ ಸಾಹಿತ್ಯವು ಜಗತ್ಪ್ರಸಿದ್ಧಿ ಪಡೆದಿರುವುದನ್ನು

ಕಾಣಬಹುದು. ವಚನ ಸಾಹಿತ್ಯ ಉಗಮಗೊಂಡಿದ್ದೇ ಈ ನೆಲದಲ್ಲಿ ವಚನಗಳ ರಚನೆಯಿಂದಾಗಿ ಈ ನೆಲದಲ್ಲಿ ವೈಚಾರಿಕ ಕ್ರಾಂತಿಯಾಗಿದೆ.

ಗಡಿನಾಡಿನ ಗರ್ಭದಲ್ಲಿದ್ದುಕೊಂಡರೂ ಬೀದರ ಜಿಲ್ಲೆಯ ಜಗತ್ಪ್ರಸಿದ್ಧಿ ಪಡೆಯುವ ಮಟ್ಟಕ್ಕೆ ಬೆಳೆದಿರುವುದಕ್ಕೆ ಈ ಜಿಲ್ಲೆಯ ಸತ್ವ ಮತ್ತು ಸಂಸ್ಕೃತಿಗಳು ಮುಖ್ಯವಾಗುತ್ತವೆ. ಗಡಿನಾಡಿ ಅಂಚಿನಲ್ಲಿರುವ ಬೀದರ ಜಿಲ್ಲೆಯ ಹಲವಾರು ಧರ್ಮಗಳ ಗುಡಿ- ಗುಂಡಾರಗಳನ್ನು ಹೊತ್ತು ನಿಂತಿದೆ. ಇಲ್ಲಿನ ಜನರಲ್ಲಿರುವ ಮುಗ್ಧಭಕ್ತಿಯ ಮೊಳಕೆ ಚಿಗುರೊಡೆದು ದೇವಾಲಯಗಳಲ್ಲಿ ಅದರ ದಟ್ಟನೆಯ ನೆರಳು ಚಾಚಿಕೊಂಡಿದೆ. ಇಲ್ಲಿನ ಬಹುಪಾಲು ಜನರು ಹೆಚ್ಚಾಗಿ ಕೃಷಿಯನ್ನೇ ಆಶ್ರಯಿಸಿದರೂ ಆಧುನಿಕತೆಯ ಸೋಂಕಿನಿಂದಾಗಿ ಹಲವಾರು ತೆರನಾದ ವ್ಯಾಪಾರ ವ್ಯವಹಾರಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಮಳೆಯನ್ನೇ ಆಶ್ರಯಿಸಿದ ರೈತಾಪಿವರ್ಗ ಒಂದೆಡೆಯಾದರೆ, ಇನ್ನೊಂದೆಡೆಯಲ್ಲಿ ವ್ಯಾಪಾರ ವಾಣಿಜ್ಯ ವ್ಯವಹಾರದೊಂದಿಗೆ ಜೀವನ ದೂಡುವ ಜನ ಇಲ್ಲಿದ್ದಾರೆ. ಹೀಗೆ ಭಿನ್ನ ಪರಿಸರದ ವಾತಾವರಣ ಇಲ್ಲಿಯ ಜನರ ಉಸಿರಾದರೂ ಭಕ್ತಿಯ ಪ್ರಶ್ನೆ ಬಂದಾಗ ಇವರೆಲ್ಲಾ ಒಂದಾಗುತ್ತಾರೆ. ದೇವರ ಕುರಿತಿರುವ ಭಯಭಕ್ತಿಗಳು ಇವರನ್ನು ಸನ್ಮಾರ್ಗಿಗಳಾಗಿ ರೂಪಿಸುವಲ್ಲಿ ಮುಖ್ಯಪಾತ್ರ ವಹಿಸಿವೆ. ಸನ್ಮಾರ್ಗವೇ ಮುಕ್ತಿಗೆ ದಾರಿ ಎನ್ನುವುದನ್ನು ಅರಿತು ಇಲ್ಲಿಯ ಜನರು ಪರಿಶುದ್ಧ ಜೀವನವನ್ನು ನಡೆಸುತ್ತಾ, ಸತ್ಯಶುಧ ಕಾಯಕವನ್ನು ಮಾಡುತ್ತಾ ಬಂದವರಾಗಿದ್ದಾರೆ.

ಕಾಯಕಶೀಲರಾದ ಜನರಲ್ಲಿ ಸಹಜವಾಗಿಯೇ ಭಕ್ತಿ-ಶ್ರದ್ಧೆಗಳು ಮನೆಮಾಡುತ್ತವೆ. ಭಕ್ತಿಯ ಮೂಲಕವಾಗಿಯೇ ಮಾನವನು ದೇವರನ್ನು ಸೃಷ್ಟಿಸಿರುವುದು. ಪ್ರಕೃತಿಯಲ್ಲಿಯೂ ಒಂದು ಅಗೋಚರ ಶಕ್ತಿಯಿರುವುದನ್ನು ಗುರುತಿಸಿದ ಮಾನವ ಅದಕ್ಕೆ ಶರಣಾಗತನಾಗಿ ಬದುಕುವುದನ್ನು ಕಲೆತನು. ಹಾಗೆಯೇ ಇಲ್ಲಿಯಜನರ ಭಕ್ತಿಯ ದ್ಯೋತಕವಾಗಿ ಅನೇಕ ದೇವಾಲಯಗಳು, ಗುಡಿ- ಗುಡಾರಗಳು ಸೃಷ್ಟಿಯಾಗಿವೆ. ಹೀಗಿ ಸೃಷ್ಟಿಯಾದ ದೇವಾಲಯಗಳನ್ನು ಪುಣ್ಯಕ್ಷೇತ್ರಗಳೆಂದು ಕರೆಯಲಾಯಿತು.

ಮಾನವ ಮಾಡುವ ಕಾರ್ಯಗಳಿಂದಲೇ ಆತನಿಗೆ ಫಲಗಳು ದೊರೆಯುವುದು. ಒಳ್ಳೆಯ ಕಾರ್ಯಗಳು ಮಾಡಿದಾಗ ಸಿಗುವ ಫಲ ಅದು ಸತ್ಫಲವೆನಿಸಿಕೊಳ್ಳುತ್ತದೆ. ಅದರಿಂದ ಮಾನವನು ಆತ್ಮ ತೃಪ್ತಿಯನ್ನು ಹೊಂದಲು ಸಾಧ್ಯವಾಗುತ್ತದೆ. ಮಾನವನ ಸಕಲಕಾರ್ಯಗಳ ಅಂತಿಮ ಫಲ

ಆತ್ಮತೃಪ್ತಿಯಾಗಿದ್ದರೂ ಅದು ಸನ್ಮಾರ್ಗದಿಂದ ಸಾಧಿಸಿದ ಸಾಧನೆಯಾದರೆ, ಸಿದ್ಧಿಯಾದರೆ ಅದರಿಂದ ದೊರಕುವ ಶಾಂತಿ-ಸಮಾಧಾನಗಳು ಚಿರಕಾಲವಾಗಿರುತ್ತದೆ. ಇಂತಹ ಚಿರಕಾಲದ ಶಾಂತಿ-ಸಂತೃಪ್ತಿಯನ್ನು ಪಡೆದುಕೊಳ್ಳುವ ಉದ್ದೇಶದಿಂದಲೇ ಹಲವಾರು ದೇವಾಲಯಗಳ ನಿರ್ಮಾಣವಾಗಿರುವುದು ಕಾಣಬಹುದಾಗಿದೆ.

ಯಾವುದೇ ಧರ್ಮ ಜಾತಿಯ ಮತಪಂಥಗಳಿದ್ದರೂ ಬಹುಮುಖ್ಯವಾಗಿ ದೇವರನ್ನು ಒಲಿಸಿಕೊಳ್ಳುವುದಕ್ಕಾಗಿ ಅವನ ಪ್ರೀತಿಗೆ ಪಾತ್ರರಾಗುವುದಕ್ಕಾಗಿ ಹಂಬಲಿಸುತ್ತಲಿರುವತ್ತವೆ. ಅಂತೆಯೇ ಬೀದರ ಜಿಲ್ಲೆಯ ಕೂಡಾ ಈ ಮಾತಿನಿಂದ ಹೊರತಾದುದಲ್ಲ ಜಿಲ್ಲೆಯಾದ್ಯಂತ ನಿರ್ಮಾಣವಾಗಿರುವ ದೇವಾಲಯಗಳನ್ನು ಅಧ್ಯಯನಕ್ಕೆ ಒಳಪಡಿಸಿದಲ್ಲ ಅವುಗಳ ನಿರ್ಮಾಣದ ಆಂತರ್ಯದಲ್ಲಿರುವ ಮತಿತಾರ್ಥ ತಿಳಿಯುತ್ತದೆ.

ದೇವರನ್ನು ಒಂದೆಡೆ ಪ್ರತಿಷ್ಠಾಪಿಸುವುದಾಗಲಿ ಇಲ್ಲವೇ ದೇವರೇ ಅಲ್ಲಿ ಉದ್ಭವವಾಗಲಿ ಒಟ್ಟಿನಲ್ಲಿ ದೇವರಿಂದ ದೇವಾಲಯಗಳು ನಿರ್ಮಾಣವಾಗಿವೆ. ಪಾಪಕ್ಷಯ-ಪುಣ್ಯ ಸಂಪಾದನೆ ಕಾರ್ಯವು ಈ ದೇವಾಲಯಗಳಿಂದ ಜರುಗುತ್ತದೆಂಬ ಭಾವನೆ ಬಲವಾಗಿದೆ. ಪುಣ್ಯ ಮತ್ತು ಪಾಪಗಳು ಮಾನವನ ಕರ್ಮದಿಂದ ಬರುವ ಫಲಗಳೆಂದು ಹೇಳಲಾಗಿದೆ. ಮಾನವ ಜಾತಿಗೆ ಮಾತ್ರ ಈ ಅರ್ಥಗಳನ್ನು ಟಂಕಿಸುವಲ್ಲಿ ಮಾನವನ ದುರಹಂಕಾರಿ ವರ್ತನೆಯ ನಿಗ್ರಹಕ್ಕಾಗಿಯೇ ಇದನ್ನು ಹುಟ್ಟುಹಾಕಿದಂತಿದೆ. ಪ್ರಾಣಿವರ್ಗದಲ್ಲಿಯೇ ಶ್ರೇಷ್ಠನಾಗಿರುವ ಮಾನವ ತನ್ನ ಬುದ್ಧಿಮತ್ತೆಯಿಂದ ಏನೆಲ್ಲವನ್ನು ಮಾಡುವ ಶಕ್ತಿ ಹೊಂದಿದ್ದಾನೆ. ಆದರೆ ಪ್ರಕೃತಿಯ ಒಂದಂಶವಾಗಿ ಹುಟ್ಟಿಬೆಳೆದಿರುವ ಮಾನವ ತನ್ನ ಶಕ್ತಿಗೆ ಮೀರಿದ ಕೆಲಸ ಕಾರ್ಯಗಳು ಬಂದಾಗ ದೇವರ ಮೊರೆಹೊಗುತ್ತಾನೆ. ಆ ಮೂಲಕ ತನಗೊದಗಿದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ.

ಬೀದರ ಜಿಲ್ಲೆಯಲ್ಲಿ ಬರುವ ಪುಣ್ಯಕ್ಷೇತ್ರಗಳನ್ನು ಗಮನಿಸುವ ಪೂರ್ವದಲ್ಲಿ ಪುಣ್ಯಕ್ಷೇತ್ರವೆಂದರೇನು ಎನ್ನುವ ಕುರಿತು ಚರ್ಚಿಸುವುದು ಮುಖ್ಯವೆನಿಸುತ್ತದೆ. ಈಗಾಗಲೇ ಚರ್ಚಿಸಿ ಹೇಳಲಾಗಿದೆ. ಹಾಗಾದರೆ ಸತ್ಕರ್ಮ ಮತ್ತು ಸನ್ಮಾರ್ಗಗಳೆಂದರೇನು ಎನ್ನುವ ಪ್ರಶ್ನೆ ಮಾಡುತ್ತದೆ. ತಾನು ಮಾಡುವ ಕಾಯಕ ಯಾವುದಾಗಿದ್ದರೂ ಅದರಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆಗಳನ್ನು ಬೆಳೆಯಿಸಿಕೊಳ್ಳಬೇಕೆಂಬ ಆಶಯವಿದೆ. ಜೊತೆಗೆ ಆ ಕಾರ್ಯ ಸತ್ಯಶುದ್ಧ ಭಾನವೆಯಿಂದ ಹಂಬಲದಿಂದ ಕಾಯಕವನ್ನು ಮಾಡಬೇಕು. ತನಗಲ್ಲದೇ ಬೇರೊಬ್ಬರಿಗೆ ಉಪಕಾರವಾಗದ ಬದುಕು ನಿಜವಾದ ಬದುಕಾಗಲಾರದೆಂಬ ಭಾವ ಸತ್ಕರ್ಮದಲ್ಲಿ ಅಡಗಿದೆ. ನಿತ್ಯವು ಕರ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವುದು ಇಲ್ಲಿಯ ವಿಶೇಷ ಸನ್ಮಾರ್ಗವು ಸತ್ಕರ್ಮದ ದಿಕ್ಸೂಚಿ ಒಳ್ಳೆಯ ಕೆಲಸ ಮಾಡಬೇಕಾದರೆ ಅದಕ್ಕೊಪ್ಪುವ ಮಾರ್ಗದಲ್ಲಿಯೇ ನಡೆಯಬೇಕಾಗುತ್ತದೆ. ನಡೆ-ನುಡಿಗಳನ್ನು ಶುದ್ಧವಾಗಿಟ್ಟಿಕೊಂಡು ನಿತ್ಯಜ್ಞಾನಿಯಾಗಬೇಕಾದ ಮಾರ್ಗವೇ ಸನ್ಮಾರ್ಗ ಇಡೀ ಜಗತ್ ಸೃಷ್ಟಿಯೇ ದೇವರಿಂದ ನಿರ್ಮಾಣವಾದಂತಹ ಸಂದರ್ಭದಲ್ಲಿ ಸೃಷ್ಟಿಕರ್ತನಿಗೆ ಶರಣಾಗತನಾಗಿ ಬದುಕಬೇಕಾದಂಥದ್ದು. ಪ್ರತಿಯೊಂದು ಜೀವಿಯ ಆದ್ಯಕರ್ತವ್ಯ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ದೇವರು ಇಡೀ ಮಾನವ ಕುಲಕೋಟಿಗೆಲ್ಲಾ ಶ್ರೀರಕ್ಷೆಯಾಗಿದ್ದಾನೆ. ಇಂಥ ಅಭಯ ನೀಡುವ ದೇವರ ಕುರಿತು ಮಾನವರು ನಿರ್ಮಿಸಿಕೊಂಡ ದೇವಾಲಯಗಳೆಲ್ಲಾ "ಪುಣ್ಯಕ್ಷೇತ್ರ"ಗಳಾಗಿ ಕಾಣಿಸಿಕೊಳ್ಳುತ್ತವೆ.

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಪುಣ್ಯಕ್ಷೇತ್ರಗಳ ಕಲ್ಪನೆ ತುಂಬಾ ವಿಶಾಲ ಅರ್ಥವ್ಯಾಪಿಯನ್ನು ಹೊಂದಿದೆ. ದೇವರ ಆಲಯವಾದ ದೇವಾಲಯ ಭಕ್ತರ ಪವಿತ್ರವಾದ ಸ್ಥಳ. ದೇವರಲ್ಲಿಗೆ ಹೋಗುವುದೆಂದರೆ ಪಾವನವಾಗುವುದು ಎಂದರ್ಥ. ಸದಾಚಾರ ಮತ್ತು ಪರೋಪಕಾರಗಳಿಂದ ಮಾತ್ರ ಪಾವಿತ್ರ್ಯತೆಯನ್ನು ಹೊಂದಲು ಸಾಧ್ಯವಾಗುತ್ತದೆ. ದೇವರು ಕರುಣಾಮಯಿಯಾದುದರಿಂದಲೇ ಅವನಲ್ಲಿಗೆ ಹೋಗುವ ಭಕ್ತರಿಗೆ ಸದಾಕಾಲ ಶುಭವನ್ನು - ಮಂಗಳಸೌಖ್ಯವನ್ನು - ಸನ್ಮಂಗಲವನ್ನುಂಟು ಮಾಡುತ್ತಾನೆ. ಎಂಬ ನಂಬಿಕೆಯಿದೆ. ಇಂತಹ ಧರ್ಮಿಷ್ಠವಾದ ಸದ್ಗುಣಗಳ ಆಗರದಂತಿರುವ

ಪಾವನಮೂರ್ತಿಯಲ್ಲಿ ಭಕ್ತ ಸಮೂಹ ತನ್ನಿಂದ ತಾನೇ ಹರಿದು ಬರುತ್ತದೆ. ಹೀಗೆ ಜನರು ಹರಿದುಹೋಗುವ ಸ್ಥಳಗಳಿಗೆಲ್ಲಾ "ಪುಣ್ಯಕ್ಷೇತ್ರ"ಗಳೆಂದು ಕರೆಯುವ ವಾಡಿಕೆಯಿದೆ. ಹಾಗಾದರೆ "ಈಶಾವಾಸ್ಯಮಿದಂ ಜಗತ್‌ಸರ್ವಂ ಎಂಬ ಅರ್ಥವಾದರೂ ಏನು ಹೇಳುತ್ತದೆಂಬ ಕಲ್ಪನೆ ಮೂಡಬಹುದು. ಸೃಷ್ಟಿಯ ಕರ್ತನೇ ದೇವರಿದ್ದಾಗ ಆತ ನಿಜವಾಗಿಯೂ ಸರ್ವಾಂತರ್ಯಾಮಿ" ಎಂದೇ ಹೇಳಬೇಕು. ಅನುತ್ರಣುವಿನಲ್ಲೂ ದೇವರನ್ನು ಕಾಣಲು ಸಾಧ್ಯವಿರುವಾಗ ಮತ್ತ್ಯಾಕೆ ದೇವಸ್ಥಾನಗಳ ಪುಣ್ಯಕ್ಷೇತ್ರ, ದೇವಾಲಯಗಳ ಅಗತ್ಯ ಎಂಬ ಭಾವ ಬರುವುದು ಸಹಜ. ಆದರೆ ಸತ್ಕರ್ಮ ಮತ್ತು ಕುಕರ್ಮಿಗಳಿಬ್ಬರೂ ಈ ಒಂದೇ ಜಗತ್ತಿನಲ್ಲಿ ಬದುಕುತ್ತಿರುವುದರಿಂದ ಸನ್ಮಾರ್ಗದ ದಾರಿ ಪ್ರತ್ಯೇಕವಾಗುವ ಅಗತ್ಯ ಉಂಟಾಯಿತು. ಕುಕರ್ಮಿಯಾದವನು ಸನ್ಮಾರ್ಗದ ದಾರಿ ನೋಡುವ ಮೂಲಕ ಬದಲಾವಣೆ ಹೊಂದುತ್ತ ಬಂದಿದ್ದಾನೆ. ಆ ಒಂದು ಕಾರಣಕ್ಕಾಗಿಯೇ ದೇವಾಲಯಗಳು ನಿರ್ಮಾಣವಾಗಿ ಸನ್ಮಾರ್ಗ, ಸದಾಚಾರ, ಸದ್ಭಾವಗಳನ್ನು ಬೆಳೆಸುವ ಟಂಕಶಾಲೆಗಳಾಗಿ ಮಾರ್ಪಟ್ಟಿದೆ. ಈ ಒಂದು ಕಾರಣಕ್ಕಾಗಿ ದೇವಾಲಯಗಳೆಲ್ಲಾ ಪವಿತ್ರ ಭಾವನೆಯನ್ನು ಹುಟ್ಟಿಸುವಂತೆ ವಾತಾವರಣ ನಿರ್ಮಿಸಿಕೊಟ್ಟಿವೆ. ಹೀಗಾಗಿ ಪಾವಿತ್ರ್ಯ ಮತ್ತು ನಿರ್ಮಲ ಮನಸ್ಸನ್ನು ಸೃಷ್ಟಿಮಾಡುವ ದೇವಾಲಯಗಳೆಲ್ಲಾ "ಪುಣ್ಯಕ್ಷೇತ್ರ"ಗಳೆಂದು ಕರೆಯಿಸಿಕೊಂಡಂತಿವೆ.

ಈ ಎಲ್ಲಾ ಲಕ್ಷಣಗಳ ಆಗರದಂತಿರುವ ಪುಣ್ಯಕ್ಷೇತ್ರಗಳು ಜಿಲ್ಲೆಯ ಹಲವು ಭಾಗಗಳಲ್ಲಿ ಕಾಣಿಸುತ್ತವೆ. ಬೀದರ ಜಿಲ್ಲೆಯಾದ್ಯಂತ ಹಲವಾರು ದೇವಾಲಯಗಳು ಗುಡಿ-ಗುಂಡಾರಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಹಲವಾರು ದೇವಾಲಯಗಳು ಪೌರಾಣಿಕ ಹಿನ್ನೆಲೆಯನ್ನು ಹೊತ್ತು ನಿಂತಿದ್ದರೆ ಇನ್ನೂ ಕೆಲವು ದೈವಿಕ ಶಕ್ತಿಯ ನೆಲೆಯನ್ನು ವ್ಯಕ್ತಿ ಮಹಿಮೆ, ಸ್ಥಳ ಮಹಿಮೆ, ಐತಿಹಾಸಿಕ ಹಿನ್ನೆಲೆಯನ್ನು ಹೊತ್ತು ನಿಂತವುಗಳಾಗಿವೆ. ಬೀದರ ಜಿಲ್ಲೆಯ ತುಂಬಾ ಘಟ್ಟಪ್ರದೇಶದಿಂದ ಕೂಡಿರುವುದರಿಂದ ಬಹುಪಾಲ ದೇವಾಲಯಗಳೆಲ್ಲಾ ನಿಸರ್ಗದ ಮಡಿಲಿನಲ್ಲಿಯೇ ರೂಪುಗೊಂಡಿರುವುದನ್ನು ಕಾಣಬಹುದು. ಆನರ ವಾಸಸ್ಥಳಗಳಿಂದ ದೂರದಲ್ಲಿ ಈ ದೇವಾಲಯಗಳು ನಿರ್ಮಾಣಗೊಂಡಿವೆ. ಆದರೆ ಇಂದಿನ ಅತಿಯಾದ ಜನದಟ್ಟಣೆಯ ಕಾರಣದಿಂದ ಈ ದೇವಾಲಯಗಳು ಊರುಗಳಲ್ಲಿರುವಂತೆ ಭಾಸವಾಗುತ್ತವೆ. ಆದರೆ

ಪ್ರಥಮದಲ್ಲಿ ಈ ಎಲ್ಲಾ ದೇವಾಲಯಗಳು ಊರಿನಿಂದ ದೂರದಲ್ಲಿಯೇ ನಿರ್ಮಾಣವಾಗಿರುವುದು ಗಮನಿಸತಕ್ಕ ಸಂಗತಿ.

ಮುಖ್ಯವಾಗಿ ಬೀದರ ಜಿಲ್ಲೆಯಲ್ಲಿ ಬರುವ ಪೌರಾಣಿಕ ದೇವಾಲಯಗಳೆಂದರೆ ಚಾಂಗ್ಲೇರಾ ಮತ್ತು ಹುಮನಾಬಾದಗಳಲ್ಲಿರುವ ವೀರಭದ್ರೇಶ್ವರ ದೇವಾಲಯ, ರಾಂಪೂರದ ರಾಮಲಿಂಗೇಶ್ವರ ದೇವಾಲಯ, ಹಳ್ಳಿಖೇಡ (ಬಿ) ದ ರಾಮಲಿಂಗೇಶ್ವರ ದೇವಾಲಯ ಹೊನ್ನಿಕೇರಿಯ ಸಿದ್ದೇಶ್ವರ ದೇವಾಲಯ, ಬೀದರನ ನರಸಿಂಹ ಝರಾ, ಪಾಪನಾಶ ಇತ್ಯಾದಿ ದೇವಾಲಯಗಳು ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ. ಹಾಗೆಯೇ ಸಂತರು ಮತ್ತು ವಿಭೂತಿ ಪುರುಷರು ಪವಾಡ ಪುರುಷರು ಕೂಡಾ ಈ ಜಿಲ್ಲೆಯಲ್ಲಿ ಹಲವಾರು ಜನ ಆಗಿಹೋಗಿದ್ದಾರೆ. ಅಂಥ ಮಹಿಮಾ ಪುರುಷರ ಐಕ್ಯಸ್ಥಳಗಳನ್ನು ಮತ್ತು ಅವರು ತಪಗೈದು ಸಿದ್ಧಿಪಡೆಯುವಂಥ ಕಡೆಗಳಲೆಲ್ಲಾ ದೇವಾಲಯಗಳನ್ನು ಕಟ್ಟಲಾಗಿದೆ. ಅವುಗಳಲ್ಲಿ ಪ್ರಮುಖವೆಂದರೆ ಮಾಣಿಕನಗರದ ಮಾಣಿಕಪ್ರಭು, ಬಕ್ಕಪ್ರಭು ದೇವಾಲಯ ಕರಕನಳ್ಳಿ ಮತ್ತು ಗೊಟ್ಟಂ ಗೊಟ್ಟಿಯ ಬಕ್ಕಪ್ರಭು, ಬಸವಕಲ್ಯಾಣದ ಪುಣ್ಯಕ್ಷೇತ್ರ ಮೈಲಾರ ಮಲ್ಲಣ್ಣ ಪುಣ್ಯಕ್ಷೆತ್ರ ಮುಂತಾದವುಗಳನ್ನು ಹೆಸರಿಸಬಹುದಾಗಿದೆ.

ರಾಷ್ಟ್ರ ಹಾಗು ಪ್ರವಾಸಿ ನಕ್ಷೆಯಲ್ಲಿ ಬೀದರ ಜಿಲ್ಲೆ ತನ್ನದೇ ಆದ ವಿಶಿಷ್ಠ ಸ್ಥಾನವನ್ನು ಹೊಂದಿದೆ. ಕಟ್ಟಡ ವಾಸುಶಿಲ್ಪ, ಉಣ್ಯ ಕ್ಷೇತ್ರಗಳು ಮಠ, ಮಂದಿರ, ಮಸೀದಿಗಳು ಕೇವಲ ಪುಣ್ಯಕ್ಷೇತ್ರಗಳಾಗಿರದೇ ಐತಿಹಾಸಿಕ ಧಾರ್ಮಿರ್ಕ ಸಮನ್ವಯದ ಜೀವಂತ ಸಾಕ್ಷಿಗಳಾಗಿವೆ. ವಿವಿಧ ಮತ ಪಂಥಗಳ ಈ ಸ್ಮಾರಕಗಳನ್ನು ನೋಡಲು ಬಂದ ಭಕ್ತಾದಿಗಳು ಇಲ್ಲಿಯ ಸಾಂಸ್ಕರತಿಕ ಸ್ನೇಹವನ್ನು ವೀಕ್ಷಿಸಿ ಸಂತಸವನ್ನು ವ್ಯಕ್ತಪಡಿಸದೇ ಇರಲಾರ.

ಈ ಅಧ್ಯಯನದ ಮುಖ್ಯ ಉದ್ದೇಶವೆಂದರೆ “ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು” ಅನೇಕ ಇವೆ. ಅವುಗಳ ಹಿಂದೆ ಹುದಗಿಕೊಂಡ ಇತಿಹಾಸ ಪರಂಪರೆ ಸಂಸ್ಕೃತಿ ಕಲೆ ಧಾರ್ಮಿಕ ಹಿನ್ನೆಲೆ ಭಕ್ತರು ಪುಣ್ಯಕ್ಷೇತ್ರಗಳ ಬಗ್ಗೆ ಅವರಿಗೆ ಇರುವ ಕಲ್ಪನೆ ಮತ್ತು ನಂಬಿಕೆ, ಕಥೆ ಐತಿಹ್ಯ ಪವಾಡ, ಹರಕೆಗಳು, ಆ ಕ್ಷೇತ್ರದ ವೈಶಿಷ್ಠತೆ, ಹೀಗೆ ಒಟ್ಟು ಪರಿಚಯ ಕೊಡುವುದರ ಜೊತೆಗೆ ಹುದಗಿಕೊಂಡಂತ ಸತ್ಯ ಸಂಗತಿಯನ್ನು ಆಧಾರಸಹಿತ ಸಾಬೀತು ಪಡಿಸುವುದೇ ಆಗಿರುತ್ತದೆ.

ಪುಣ್ಯಕ್ಷೇತ್ರಗಳ ಅಧ್ಯಯನವೆಂದರೆ ಪರ್ಯಾಯವಾಗಿ ಗುಡಿ-ಗುಂಡಾರಗಳ ಮೂಲವನ್ನು ಅರಿಯುವುದು ಮತ್ತು ಅಲ್ಲಿ ನಡೆಯುವ ಜಾತ್ರೆ, ಉತ್ಸವ, ಸಂಸ್ಕೃತಿಕ ಕಲಾಮೇಳಗಳನ್ನು ಅರಿಯುವ ಪ್ರಯತ್ನ, ಜನಪದ ನಂಬಿಕೆಗಳು, ಜನ ಸಮುದಾಯ ಸಾಂಸ್ಕೃತಿಯನ್ನು ಅರ್ಥೈಸಿಕೊಳ್ಳುವ ಉದ್ದೇಶ ಹೊಂದಲಾಗಿದೆ. ಹಾಗೆಯೆ ಬೀದರ ಜಿಲ್ಲೆಯಲ್ಲಿ ಪುಣ್ಯಕ್ಷೇತ್ರಗಳು ಎಷ್ಟೊಂದು ಪ್ರಮುಖವಾಗಿವೆ. ಹಾಗೆಯೆ ಪುಣ್ಯ-ಪಾಪಗಳು ಭಕ್ತರು ಯಾವುದಕ್ಕೆ ಅನ್ನುತ್ತಾರೆ. ಪುಣ್ಯಕ್ಷೇತ್ರ ಯಾವುದರ ನಂಬಿಕೆಯಿಂದ ಭಕ್ತರು ಪುಣ್ಯಕ್ಷೇತ್ರ ಈ ಸ್ಥಳವೆಂಬ ವಿಚಾರಗಳು ಕೂಡಾ ಭಕ್ತರ ಸಂದರ್ಶನದ ಮೂಲಕ ತಿಳಿಸುವ ಪ್ರಯತ್ನ ಮಾಡಬೇಕೆಂದು ಮತ್ತು ಜಿಲ್ಲೆಯ ಹಲವಾರು ಪುಣ್ಯಕ್ಷೇತ್ರಗಳ ಐತಿಹಾಸಿಕ ಹಿನ್ನೆಲೆಯನ್ನು ಅರಿಯುವ ಮೂಲಕ ಅವುಗಳಿಗೊಂದು ನಿಶ್ಚಿತತೆಯನ್ನು ತಂದುಕೊಡುವ ಉದ್ದೇಶ ಪ್ರಸ್ತುತ ಅಧ್ಯಯನಕ್ಕಿದೆ. ಈ ತೆರನಾದ ಅಧ್ಯಯನದಿಂದಾಗಿ ಜಿಲ್ಲೆಯಲ್ಲಿನ ಆಯಾ ಪುಣ್ಯಕ್ಷೇತ್ರಗಳಲ್ಲಿರುವ ಕಲೆ ಸಾಹಿತ್ಯವನ್ನು ಆ ದೇವರ ವೈಶಿಷ್ಟ್ಯಗಳು ಮತ್ತು ಆ ಕ್ಷೇತ್ರ ಯಾವುದಕ್ಕೆ ವೈಶಿಷ್ಟ್ಯವಾಗಿದೆ. ಮತ್ತು ಆ ಕ್ಷೇತ್ರದ ಮಹಿಮೆ ಮತ್ತು ಯಾವ ರೀತಿ ಭಕ್ತರ ಆ ದೇವರ ಬಗ್ಗೆ ನಂಬಿಕೆ ಇಟ್ಟಿರುತ್ತಾರೆ. ಮತ್ತು ಆ ಕ್ಷೇತ್ರದಲ್ಲಿ ಯಾವುದನ್ನು ಬೇಡಿಕೆಯನ್ನು ಹರಕೆ ಮೂಲಕ ಬೇಡಿದರೆ ಆ ದೇವರು ಒಲಿಯುತ್ತಾನೆ.

ಅಂದರೆ ಉದಾಹರಣೆಗೆ ಹಳ್ಳಿಖೇಡದಲ್ಲಿ ಇರುವ ನಾಗಲಿಂಗೇಶ್ವರ ಪುಣ್ಯವು ಮಕ್ಕಳ ಇಲ್ಲದವರಿಗೆ ಸಂತಾನ ಭಾಗ್ಯ ನೀಡುವ ಮೂಲ ಆ ಕ್ಷೇತ್ರ ಎಲ್ಲಾ ಕಡೆ ತುಂಬಾ ಪ್ರಸಿದ್ಧಿ ಹೊಂದಿರುತ್ತವೆ. ಎಲ್ಲಾ ಕಡೆಯಿಂದ ಭಕ್ತರು ಬರುತ್ತಾರೆ ಈ ಕ್ಷೇತ್ರಕ್ಕೆ ಹೀಗೆ ನಮ್ಮ ತುಂಬಾ ಪುಣ್ಯ ಕ್ಷೇತ್ರಗಳಲ್ಲಿ ಕೆಲವೊಂದು ಬೇಡಿಕೆಗಳು ಕೆಲವೊಂದು ಕ್ಷೇತ್ರದಲ್ಲಿ ಬೇಡಿಕೊಂಡಾಗ ಮಾತ್ರ ಆ ದೇವರು ಆ ಬೇಡಿಕೆ ಪೂರೈಸುತ್ತಾನೆ. ಹೀಗೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಕೆಲವೊಂದು ವಿಶಿಷ್ಟತೆಯನ್ನು ಕಾಣಬಹುದು. ಇವುಗಳೆಲ್ಲಾ ಒಟ್ಟು ಅಧ್ಯಯನ ಮಾಡಿ ಬೀದರ ಜಿಲ್ಲೆಯ ಪ್ರಮುಖ ಪುಣ್ಯಕ್ಷೇತ್ರಗಳ ಕುರಿತು ಈ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಬೀದರ ಜಿಲ್ಲೆಯಾದ್ಯಂತ ದೊರಕುವ ಪ್ರಮುಖ ಪುಣ್ಯ ಕ್ಷೇತ್ರಗಳನ್ನು ಅನುಲಕ್ಷಿಸಿ ಅವುಗಳನ್ನು ಪೌರಾಣಿಕ ಮತ್ತು ಚಾರಿತ್ರಿಕ ನೆಲೆಯಗಳಲ್ಲಿ ವಿಂಗಡಿಸುವ ಮೂಲಕ ಹಲವು ಧರ್ಮದ ಧಾರ್ಮಿಕ ಕೇಂದ್ರಗಳನ್ನು ಪರಿಶೀಲಿಸುವ ಉದ್ದೇಶ ಹೊಂದಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಎತ್ತಿಕೊಂಡಿರುವ ಪುಣ್ಯಕ್ಷೇತ್ರಗಳು ಬೀದರ ಜಿಲ್ಲೆಯಲ್ಲಿ ಆಯಾ ತಾಲೂಕಿನಲ್ಲಿ ಬರುವ ಪ್ರಮುಖ ಪುಣ್ಯಕ್ಷೇತ್ರಗಳೆಂದರೆ, ಬೀದರನ ನರಸಿಂಹ ಝರಾ, ಗುರುನಾನಕ, ಪಾಪನಾಶ, ಮೇಥೋಡಿಸ್ಟ್ ಚರ್ಚ್, ಬೌದ್ಧವಿಹಾರ, ಅಬ್ದುಲ ಫೈಜ್ ದರ್ಗಾ, ಮುಲ್ತಾನಿ ಪಾಶಾ ದರ್ಗಾ, ಅಷ್ಟೂರಿನ ಅಲಮಪ್ರಭು, ತಾಲುಕುಗಳಲ್ಲಿ ಔರಾದನ ಅಮರೇಶ್ವರ ಪುಣ್ಯಕ್ಷೇತ್ರ, ಹುಮನಾಬಾದನಲ್ಲಿ ವೀರಭದ್ರೇಶ್ವರ, ಚಾಂಗಲೇರಾ, ಹಳ್ಳಿಖೇಡ (ಬಿ)ದ ನಾಗಲಿಂಗೇಶ್ವರ ಹುಮನಾಬಾದನಲ್ಲಿರುವ ಮಾಣಿಕನಗರದ ಮಾಣಿಕ ಪ್ರಭುವಿನ ಪುಣ್ಯಕ್ಷೇತ್ರ ಭಾಲ್ಕಿ ತಾಲೂಕಾದಲ್ಲಿ ಬರುವ ಮೈಲಾರ ಮಲ್ಲಣ್ಣ ಪುಣ್ಯಕ್ಷೇತ್ರ ಮತ್ತು ಬಸವಕಲ್ಯಾಣದಲ್ಲಿ ಬರುವ ಅನುಭವ ಮಂತಪ, ಬಸವೇಶ್ವರ ದೇವಾಲಯ ಮತ್ತು ನಾರಾಯಣಪೂರದ ಶಿವಮಂದಿರ ಮುಂತಾದವುಗಳಾಗಿದ್ದು, ಈ ಎಲ್ಲಾ ಕ್ಷೇತ್ರಗಳಿಗೆ ಭೇಟಿ ನೀಡುವ ಮೂಲಕ ಮಾಹಿತಿ ಮಾಹಿತಿ ಕಲೆಹಾಕಲಾಗಿದೆ. ಕ್ಷೇತ್ರಗಳ ವ್ಯಾಪ್ತಿ ಹೆಚ್ಚಾಗಿರುವುದರಿಂದ ಪ್ರಸ್ತುತ ಕಿರುಪ್ರಬಂಧಕ್ಕೆ ಅಗತ್ಯವಿರುವಷ್ಟು ಮಾಹಿತಿಯನ್ನು ಮಾತ್ರ ಇಲ್ಲಿ ನೀಡಲಾಗಿದೆ.

ಅಗತ್ಯವಿದ್ದ ಕಡೆಗಳಲ್ಲಿ ಪುಣ್ಯಕ್ಷೇತ್ರಗಳ ಭಾವಚಿತ್ರಗಳನ್ನು ತೆಗೆದುಕೊಂಡು ಬರಲಾಗಿದೆ. ಮತ್ತೆ ಕೆಲವಡೆ ವಕ್ತಾರರಿಗೆ ಮೊರೆ ಹೋಗುವ ಮೂಲಕ ಇಲ್ಲಿಯ ಅಧ್ಯಯನ ನಡೆದಿದೆ. ಜೊತೆಗೆ ಆಯಾ ಕ್ಷೇತ್ರಗಳ ಕುರಿತು ಈಗಾಗಲೇ ಮಾಹಿತಿಯನ್ನು ಕಲೆಹಾಕಿ ಸಿದ್ಧಮಾದರಿಯ ಪುಸ್ತಕಗಳು ಪ್ರಕಟಗೊಂಡಿದ್ದರೆ ಅಂಥ ಗ್ರಂಥಗಳನ್ನು ಕೂಡಾ ಕಣ್ಣಾಡಿಸುವ ಕಾರ್ಯವ್ಯಾಪ್ತಿ ಈ ಅಧ್ಯಯನದ ತೆಕ್ಕೆಯಲ್ಲಿದೆ. ದೇಶಿಯ ಧಾರ್ಮಿಕತೆ ಉಳಿಸಬೇಕು. ದೇಶಿಯ ವಿಷಯದ ಹುಡುಕಾಟದ ಸಂದರ್ಭದಲ್ಲಿ ಅನೇಕ ತೊಂದರೆಗಳು ಎದುರುಗೊಂಡಿವೆ. ಲಿಖಿತ ಹಾಗೂ ಮೌಖಿಕ ದಾಖಲೆಗಳ ಕೊರತೆ ಒಂದು ವಿಷಯವನ್ನು ಇನ್ನೊಂದುವಿಷಯದೊಡನೆ ತಿರುಚಿ ಮರುಚಾಗಿಹೇಳುವಿಕೆ ಹೀಗೆ ಹಲವಾರು ತೊಂದರೆಗಳುಂಟಾಗಿವೆ. ಸ್ಥಳೀಯ ವಿಷಯಕ್ಕೆ ಪ್ರಾಮುಖ್ಯವಾಗಿ ಎದುರಾಗುವ ಸಮಸ್ಯೆ ಎಂದರೆ ದಾಖಲೆಗಳು ಲಭ್ಯವಾಗದಿರುವುದು

ದಾಖಲೆಗಳನ್ನು ಪರಿಶೀಲಿಸುವಾಗ ಸಂಶೋಧಕನು ಸೀಮಿತ ಪ್ರದೇಶದಲ್ಲಿ ಕಂಡು ಬರುವಂತಹ ಜಾತಿ, ಧರ್ಮ, ಮಠ, ದೇವಾಲಯ ಮುಂತಾದವುಗಳನ್ನು ನಡುವೆ ನಿಷ್ಠೂರವಾದ ಸತ್ಯ ಸಂಗತಿಯನ್ನು ಹೇಳುವಾಗ ಸಮಸ್ಯೆಗಳ ಬಲೆಯಲ್ಲಿ ಸಿಕ್ಕಿಕೊಳ್ಳುವುದು ಕಂಡು ಬರುತ್ತದೆ. ಕೆಲವು ಸಲ ಲಿಖಿತದಾಖಲೆಗಳಿಲ್ಲದೇ ಒದ್ದಾಡಬೇಕಾಗುತ್ತದೆ. ಈ ಎಲ್ಲಾ ಪ್ರಯತ್ನಗಳನ್ನು ಮೀರಿ ನನ್ನ ಈ ಕಿರು ಪ್ರಬಂಧವನ್ನು ಬರೆಯಲು ಪ್ರಯತ್ನಪಟ್ಟಿದ್ದೇನೆ.

ಇನ್ನೊಂದು ಮಹತ್ವದ ವಿಷಯವೆಂದರೆ ಇತಿಹಾಸದಲ್ಲಿ ನಡೆದುಹೋದ ಸತ್ಯ ಘಟನೆಗಳ ಬಗ್ಗೆ ಯಾವುದೇ ಪುರಾವೆಗಳು ಸಿಗದೇ ಕತ್ತಲೆ ಕವಿದುಕೊಂಡಂಥ ಸಹಸ್ರ ಘಟನೆಗಳಿವೆ. ಈ ಘಟನೆಗಳಿಗೆ ಯಾವುದೇ ಗಟ್ಟಿ ಆಧಾರಗಳಿರದೆ, ಕೇವಲ ಜನಪದರ ನಾಲಿಗೆಯ ಮೇಲೆ ಹಾಡಾಗಿ ಕಥೆಯಾಗಿ ಐತಿಹ್ಯವಾಗಿ ಹೊರಹೊಮ್ಮುತ್ತವೆ.

ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು ಅತ್ಯಂತ ವೈಭವದಿಂದ ಕೂಡಿವೆ. ಬೀದರ ಜಿಲ್ಲೆಯ ಐತಿಹಾಸಿಕ ಪರಂಪರೆ ಧಾರ್ಮಿಕ ಹಿನ್ನೆಲೆ ಸಾಂಸ್ಕೃತಿಕ ಕಲೆ, ಸಾಹಿತ್ಯ ಇತ್ಯಾದಿ ಕುರಿತು ಮರೆಯಾದಂತಹ ವಿಷಯ ಘಟನೆಗಳ ಜನಪದರಿಂದ ತಿಳಿಯುತ್ತ ಮರೆಯಾದ ಘಟನೆ ಹುಡುಕುತ್ತ ಸತ್ಯ ಸಂಗತಿಯನ್ನು ಕಂಡುಕೊಳ್ಳುತ್ತ ಬೀದರ ಜಿಲ್ಲೆಯ ಚಿತ್ರಣ ಚಿತ್ರಕರಿಸುತ್ತ ಈ ಅಧ್ಯಯನಕ್ಕೆ ತೊಡಗಿದ್ದೇನೆ.

ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳ ಕುರಿತ ಎಷ್ಟೋ ವಿಷಯ ಬೆಳಕಿಗೆ ಬಾರದೆ ಇರಬಹುದು. ಆದರೆ ಜನಪದರ ಬಾಯಲ್ಲಿ ಇವುಗಳ ಹೆಸರು ಅಜರಾಮರವಾಗಿ ಉಳಿದದ್ದು ಕಂಡು ಬರುತ್ತವೆ ಹಾಗೂ ಶಾಸನ ಮಂದಿರ, ಮಜೀದ, ಸ್ಮಾರಕಗಳು ಸಾಕ್ಷಿ ಆಗಿವೆ. ಹೀಗೆ ಎಲ್ಲವುಗಳನ್ನು ಸೇರಿಸಿ ಚೌಕಟ್ಟನ್ನು ನಿರ್ಮಿಸಿ ದಾಖಲೆಗೊಳಪಡಿಸುವುದೇ ಆಗಿದೆ.

ಬೀದರ ಜಿಲ್ಲೆಯ ನೋಡುತ್ತಾ ಹೋದಂತೆ ಪವಿತ್ರವಾದ ಪುಣ್ಯ ಕ್ಷೇತ್ರಗಳಾಗಿವೆ. ಎಲ್ಲಿ ಧರ್ಮದ ಪವಿತ್ರ ಪ್ರಾಚೀನ ಸ್ಥಳಗಳಿವೆ. ಹಿಂದೂ, ಮುಸ್ಲಿಂ, ಸಿಖ್ಖ, ಬೌದ್ಧ, ಕ್ರೈಸ್ತ, ಜೈನ ಮಂದಿರ ಮಜೀದಿಗಳಿವೆ. ಭಕ್ತಿ ಶಾಂತಿಯ ಕ್ಷೇತ್ರಗಳಾಗಿವೆ. ಗುರುನಾನಕ ಝುರಾ ಶಾಂತಿ ಧಾಮ ಸಿಖ್ಖ ಜನಾಂಗದ ಪವಿತ್ರ ಪುಣ್ಯಕ್ಷೇತ್ರ ಪಾಪನಾಶಿನಿ, ನರಸಿಂಹ ಝುರಾ ಹಿಂದುಗಳ ಪವಿತ್ರ ಯಾತ್ರ ಪುಣ್ಯಕ್ಷೇತ್ರಗಳಾಗಿವೆ. ಅಷ್ಟೂರ ಅಲ್ಲಮಪ್ರಭು ಗುಮ್ಮಜ ಇದು ಹಿಂದು-ಮುಸ್ಲಿಂ ಸಮ್ಮಿಲನದ ಸಂಕೇತವಾಗಿದೆ. ಇದರಿಂದ ಬೀದರ ಜಿಲ್ಲೆಯ

ಧಾರ್ಮಿಕ ಪುಣ್ಯಕ್ಷೇತ್ರಗಳ ಮಹತ್ವ ತಿಳಿಯುತ್ತದೆ. ಇದು ಬೀದರ ಜಿಲ್ಲೆಯ ಸಾಂಸ್ಕೃತಿಕ ಹೆಮ್ಮೆಯ ಸಂಕೇತವಾಗಿದೆ. 12ನೇ ಶತಮಾನದ ಧಾರ್ಮಿಕ ಕ್ರಾಂತಿ ಪುರುಷ ಬಸವಣ್ಣನವರ ಕಾರ್ಯಸಾಧನೆಗಳ ನಾಡಾಗಿದೆ. ವಚನ ವಾಙ್ಮಯ ಬೀಡಾಗಿದೆ. ಮಹಮ್ಮದ ಗವಾನ ಕಾಲೇಜ (ಮದರಸಾ) ಇದು ವಿಶ್ವವಿದ್ಯಾ ಕೇಂದ್ರವಾಗಿತ್ತು. ಇದೆಲ್ಲರ ಬಗ್ಗೆ ಇಂದು ಕೂಡ ಇತಿಹಾಸ ಸಾಕ್ಷಿ ಆಗಿದೆ.

ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳ ಸ್ಥಳಗಳು ನೋಡುತ್ತ ಹೋದಂತೆ ಅವುಗಳ ಹಿಂದೆ ಹುದಗಿಕೊಂಡಂತಹ ಇತಿಹಾಸ ಪರಂಪರೆ ಸಂಸ್ಕೃತಿ ಧಾರ್ಮಿಕ ಆಡಳಿತ ಕಲೆ, ಸಾಹಿತ್ಯ, ಐತಿಹ್ಯ ಕಥೆ, ಹಾಡು, ಪವಾಡ ಇತ್ಯಾದಿ ಎಲ್ಲವು ಕುತೂಹಲ ಕೆರಳಿಸುವುದರಜೊತೆಗೆತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದ್ದು, ಆಶ್ಚರ್ಯ ಮಾಡಿಸುತ್ತದೆ ಹಾಗೂ ಇವು ಎಲ್ಲವುಗಳನ್ನು ಒಂದು ಸೂಡಿಗೆ ಕಟ್ಟಿ ಅಧ್ಯಯನ ನಡೆಸುವುದು ಕಷ್ಟ ಆದರೂ ಸಹ ಸ್ವಲ್ಪಮಟ್ಟಿಗೆ ಪ್ರಯತ್ನಪೂರ್ವಕ ಕಾರ್ಯಮಾಡಲಾಗಿದೆ.

ಮಹಮ್ಮದ ಗಾವನನ್ನು ಕಾಲದಲ್ಲಿ ಬೀದರ ಜಿಲ್ಲೆಯನ್ನು ರಷ್ಯಾದ ಪ್ರವಾಸಿ ನಿರೇಟ್‌ನ ಸಂದರ್ಶನ ನೀಡಿದ ಇಡಿ ಹಿಂದುಸ್ಥಾನದಲ್ಲಿ ಬೀದರ ಪ್ರಸಿದ್ಧ ನಗರವೆಂದು ಬಣ್ಣಿಸಿದ ಕಲ್ಯಾಣದ ಚಾಳುಕ್ಯರ ಕಾಲದಲ್ಲಿವಿಜ್ಞಾನೇಶ್ವರ "ಮಿತಾಕ್ಷರ" (ಸಂಹಿತಾ) ಗ್ರಂಥ ರಚಿಸಿದ ಭಾರತೀಯ ಧರ್ಮ ಶಾಸ್ತ್ರಗ್ರಂಥ ಲೋಕಕ್ಕೆ ಇದು ಬೀದರ ಜಿಲ್ಲೆಯ ಕಾಣಿಕೆ ಆಗಿದೆ. ವಿಜ್ಞಾನೇಶ್ವರನು ಕ್ಷಿತಿತಲದಲ್ಲಿ ಕಲ್ಯಾಣದಂಥ ನಗರ ಹಿಂದೆಂದೂ ಇದ್ದಿರದೆ ಮುಂದೆಂದೂ ಇರಲಾಗದ ನಗರ ಮತತು ವಿಕ್ರಮಾದಿತ್ಯನಂಥ ಅರಸ ಇರಲಾರರು ಎಂದು ತಿಳಿಸಿದ್ದಾನೆ. ಈ ಒಂದೆ ಉಕ್ತಿ ಕಲ್ಯಾಣದ ಚಾಳುಕ್ಯ ಸಮಗ್ರ ಸಮೃದ್ಧಿ ತಿಳಿಸುತ್ತದೆ.

ಇಂಥ ವೈಭವ ನಾಡಾಗಿ ಮೆರೆದ ಬೀದರ ಜಿಲ್ಲೆ ಇಂದುಕೂಡ ನೋಡಲು ತನ್ನ ಅಸ್ತಿತ್ವ ಕಳೆದುಕೊಂಡಿಲ್ಲ.

ಬೀದರ ಜಿಲ್ಲೆ ಒಳ್ಳೆಯ ರಾಜ ಮನೆತನಗಳು ಆಳಿದ ನಾಡಾಗಿದೆ. ಸರ್ವಧರ್ಮ ಸಮನ್ವಯದ ನಾಡಾಗಿದೆ, ಮಹಾ ಸಂತರ ನಾಡಾಗಿದೆ, ಹಲವು ಸಂಸ್ಕೃತಿಯ ಸಂಗಮದ ನಾಡಾಗಿದೆ. ಬೀದರ ಜಿಲ್ಲೆಯ ಇತಿಹಾಸ ಪರಂಪರೆ ಪಡೆದಿದೆ. ಇದು ಎಲ್ಲದರ ಬಗ್ಗೆ ಇತಿಹಾಸ ಸಾಕ್ಷಿ ಆಗಿದೆ.

ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳ ಕುರಿತ ಅಧ್ಯಯನದ ಮಹತ್ವದ ಲಾಭವೆಂದರೆ ನಮ್ಮ ನಾಡಿನ ಚರಿತ್ರೆಯ ಇತಿಹಾಸ ಪರಂಪರೆ ಕಲೆ, ಸಾಹಿತ್ಯ,

ಧರ್ಮ ಸಂಸ್ಕೃತಿ ಹಾಗೂ ಜನಪದ ಸಾಹಿತ್ಯ ಹೀಗೆ ಒಟ್ಟು ಚಿತ್ರಣ ನೀಡುತ್ತಾ ಎಲ್ಲವುಗಳನ್ನು ಸೇರಿಸಿ ಚೌಕಟನ್ನು ದಾಖಲೆಗೊಳಪಡಿಸುವದೇ ಆಗಿದೆ.

ಹೀಗೆ ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳು ಒಂದು ಅಧ್ಯಯನ ಎಂಬ ವಿಷಯವು ಬಂದೆ ಉದ್ದೇಶಕ್ಕೆ ಇಟ್ಟುಕೊಂಡು ಹೊರಡದೆ ಧಾರ್ಮಿಕ ಹಿನ್ನೆಲೆಯಲ್ಲಿ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬರುವ ಪುಣ್ಯಕ್ಷೇತ್ರ ಅನೇಕಾನೇಕ ಉದ್ದೇಶಗಳನ್ನಿಟ್ಟುಕೊಂಡು ಹೊರಟಿರುವುದು ಈ ಮೂಲಕ ಗಮನಕ್ಕೆ ತಂದಿರುತ್ತೇನೆ.

ಅಧ್ಯಾಯ–೨

ಅಧ್ಯಯನದ ವೈಧಾನಿಕತೆ

ಅಧ್ಯಾಯ-೨

ಅಧ್ಯಯನದ ವೈಧಾನಿಕತೆ:

ಪುಣ್ಯಕ್ಷೇತ್ರಗಳತ್ತ ಜನರು ಹೆಚ್ಚು ಹೆಚ್ಚು ಒಲವು ತೋರಲು ಅವರಲ್ಲಿರುವ ಭಕ್ತಿಯೇ ಕಾರಣವಾಗಿರುತ್ತದೆ, ಭಕ್ತಿಯ ಅಂತರಾಳದಲ್ಲಿ ನಂಬಿಕೆ, ಶ್ರದ್ಧೆ ಅಡಕಗೊಂಡಿರುವುದರಿಂದ ಇವುಗಳೇ ಜನರಿಗೆ ಶ್ರೀರಕ್ಷೆಯಾಗಿ ಕಾಪಾಡುತ್ತವೆ. ಇಷ್ಟಾರ್ಥಗಳನ್ನು ಈಡೇರಿಸುತ್ತವೆ, ಹೀಗೆ ಜನರ ರಕ್ಷಣೆ ಇಷ್ಟಾರ್ಥ ಸಿದ್ಧಿಸುವ ಕಾಮಧೇನುವಾಗುವಂತಹ ಪುಣ್ಯಕ್ಷೇತ್ರಗಳು ಬೀದರ ಜಿಲ್ಲಾದ್ಯಂತ ಕಾಣಿಸಿಕೊಳ್ಳುತ್ತವೆ. ಪುಣ್ಯಕ್ಷೇತ್ರಗಳಿಗೆ ತೆರಳುವ ಭಕ್ತ ಮತ್ತು ಶ್ರೀ ಸಾಮಾನ್ಯರಲ್ಲಿ ಸಾಮಾನ್ಯವಾಗಿ ಆ ದೇವರ ಕುರಿತು ಭಕ್ತಿ, ವಿಶ್ವಾಸಗಳೇ ಮೂಲಕಾರಣವಾಗಿರುತ್ತವೆ.

ಜೊತೆಗೆ ಭಕ್ತಿಯೊಂದಿಗೆ ಸಂಸಾರಿಕ, ಝುಂಜಾಟಗಳಿಂದ ಒಂದಿಷ್ಟು ಕಾಲ ಮುಕ್ತಿಯನ್ನು (ಬಿಡುಗಡೆ) ಪಡೆದು, ಶಾಂತಿ, ನೆಮ್ಮದಿಯನ್ನು ಪಡೆಯುವ ಉದ್ದೇಶವೇ ಅಡಕಗೊಂಡಿರುತ್ತದೆ. ದಿನ ನಿತ್ಯವು ದುಡಿತದಲ್ಲಿರುವ ಜನರು ಏಕತಾನಕಿಯ ಬದುಕಿನಿಂದ ಬೇಸತ್ತು ಒಂದಿಷ್ಟು ವಿಶ್ರಾಂತಿಯೊಂದಿಗೆ ದೇವರನ್ನು ಮೊರೆಹೋಗುವ ಮೂಲಕ ಜೀವನದಲ್ಲಿ ಶಾಂತಿ, ಸಮಾಧಾನ, ನೆಮ್ಮದಿಯನ್ನು ಪಡೆಯಲು ಸಾಧ್ಯವಾಗುತ್ತದೆ.

ಹೀಗೆ ಶಾಂತಿ, ಪರಮಧೇಯವಾಗಿರಿಸಿಕೊಂಡಿರುವ ಪುಣ್ಯಕ್ಷೇತ್ರಗಳು ಜನರಲ್ಲಿ ಸದಾಚಾರ, ಸದ್ಭಾವನೆಯ ಬೀಜವನ್ನು ಪರೋಪಕಾರ, ದಯ, ದಾನ, ಧರ್ಮಗಳ ಮರ್ಮವನ್ನು ಬಿತ್ತರಿಸುವ ಈ ಕ್ಷೇತ್ರಗಳು ಮಾನವರನ್ನು ದೈವತ್ವದ ಪಂಥದೆಡೆಗೆ ಅತಾರ್ಥ ಭೂಮಿಯನ್ನೇ ಸ್ವರ್ಗವಾಗಿಸಿಕೊಳ್ಳುವ ಜೀವನದ ಆನಂದವನ್ನು ಅನುಭವಿಸುವ ಕಲೆಯನ್ನು ಪ್ರತ್ಯಕ್ಷ ಮತ್ತು ಪರೋಕ್ಷನಾಗಿ ಕಲಿಸಿಕೊಡುತ್ತದೆ. ಇಂತಹ ಬಹುಮುಖಿ ವೈಧಾನಿಕತೆಯಲ್ಲಿ ಹೊತ್ತು ನಿಂತಿರುವ ಪುಣ್ಯಕ್ಷೇತ್ರಗಳು ವಿವಿಧ ತತ್ವಗಳಲ್ಲಿ, ಮತ, ಧರ್ಮ ಪಂಥಗಳಿಂದ ಕೂಡಿಕೊಂಡಿರುವುದನ್ನು ಕಾಣುತ್ತೇವೆ. ಪ್ರತಿಯೊಂದು ಕ್ಷೇತ್ರವು ಭಿನ್ನವಾಗಿ ಮತ್ತು ಅನ್ಯೂನ್ಯತೆಯೊಂದಿಗೆ ಆಕರ್ಷಕ ತತ್ವಗಳನ್ನು ಪಡೆದಿರುತ್ತದೆ. ಈ ತೆರನಾದ ವಿಶಿಷ್ಟ ಮತ್ತು ಅನ್ಯೂನ್ಯತೆಯ ಆಕರ್ಷಕ ತತ್ವಗಳಿಂದಾಗಿಯೇ ಬಹುಪಾಲು ಜನರು ಪುಣ್ಯಕ್ಷೇತ್ರಗಳತ್ತ ತೆರಳುವುದನ್ನು ಕಾಣುತ್ತೇವೆ. ಬೀದರ ಜಿಲ್ಲೆಯಲ್ಲಿ ಕಾಣುವ ಕೆಲವು ಪುಣ್ಯಕ್ಷೇತ್ರಗಳ ವಿವಿಧ

[illegible]

ರೀತಿಯಲ್ಲೇ ವೈಶಿಷ್ಟ್ಯತೆಯನ್ನು ಮತ್ತು ಪ್ರತ್ಯೇಕತೆಯನ್ನು ಹಲವಾರು ಅಂಶಗಳಿಂದ ಗುರುತಿಸಬಹುದಾಗಿದೆ. ಒಂದೊಂದು ಕ್ಷೇತ್ರವು ಹಲವು ದೃಷ್ಟಿಯಿಂದ ನೋಡಿದಾಗ ಅಲ್ಲಿನ ಪ್ರತಿಯೊಂದು ವಿಷಯದ ಕುರಿತು ತಿಳಿದು ಬರುತ್ತದೆ. ಪುಣ್ಯಕ್ಷೇತ್ರಕ್ಕೆ ಬರಿ ಭಕ್ತರು ಮಾತ್ರ ಹೋಗುವುದಿಲ್ಲ, ಕೆಲವರು ವಿಜ್ಞಾನಿಗಳು, ವಿದ್ವಾಂಸರು, ರಾಜಕೀಯ ವ್ಯಕ್ತಿಗಳು, ಕಲೆಗಾರರು ಹೀಗೆ ಹಲವು ವ್ಯಕ್ತಿಗಳು ಹೋಗುತ್ತಾರೆ, ಆದರೆ ಇವರೆಲ್ಲರ ದೃಷ್ಟಿ ಒಂದೇ ಆಗಿರುವುದಿಲ್ಲ, ಇವರೆಲ್ಲರು ಹಲವು ದೃಷ್ಟಿಯಿಂದ ನೋಡುತ್ತಾರೆ. ವಿಜ್ಞಾನಿಗಳು ಅವರು ಪುಣ್ಯಕ್ಷೇತ್ರಕ್ಕೆ ಬಂದರೆ ಅವರು ನೋಡುವುದು ಈ ಪುಣ್ಯಕ್ಷೇತ್ರ ಹೇಗೆ ನಿರ್ಮಾಣವಾಗಿದೆ, ಇದಕ್ಕೆ ಏನು ಆಧಾರವಿದೆ, ಹಿನ್ನೆಲೆ ಇದೆಯೇ ಮತ್ತು ಇಲ್ಲಿ ದೇವರ ಕುರಿತು ಇರುವ ನಂಬಿಕೆ, ಆಚರಣೆಗಳು, ಸಂಪ್ರದಾಯಗಳು ಹೇಗೆ ಅವು ವಿಜ್ಞಾನದ ದೃಷ್ಟಿಯಿಂದ ಅವುಗಳು ಎಷ್ಟರ ಮಟ್ಟಿಗೆ ನಿಜವಾಗಿವೆ, ಸತ್ಯಕ್ಕೆ ಹತ್ತಿರವಾಗಿವೆ ಮತ್ತು ಮೂಢನಂಬಿಕೆಗಳು ಹೇಗೆ ಪಾಲಿಸಿಕೊಳ್ಳುತ್ತ ಬರುತ್ತಾರೆ, ಅಂದರೆ ದೇವರಿಗೆ ಪ್ರಾಣಿ ಬಲಿ ಕೊಡುವುದು ಒಂದು ಹರಕೆ ರೂಪದಲ್ಲಿ ತೀರಿಸುವುದು, ಆದರೆ ಆ ಬಲಿ ಎಷ್ಟರ ಮಟ್ಟಿಗೆ ಸರಿ, ನಾವು ಪ್ರಾಣಿ ಹತ್ಯೆ ಮಾಡುತ್ತೇವೆ ಎಂಬುವುದು ಪರಿಕಲ್ಪನೆ ಇರುವುದಿಲ್ಲ. ಇದು ಈ ತರಹ ಹರಕೆ ಕೇವಲ ಅವರ ಬಾಯಿ ಚಪಲ ತೀರುಸುವ ಸಲುವಾಗಿ ಪ್ರಾಣಿ ಬಲೆ ಕೊಡುತ್ತಾರೆ. ಹೀಗೆ ಹಲವು ರೀತಿಯಾಗಿ ನೋಡಬಹುದು.

ಈ ತರಹ ತುಂಬಾ ಹಣ ದೇವರ ಹೆಸರಿನಲ್ಲಿ ಖರ್ಚು ಮಾಡುತ್ತಾರೆ, ಆದರೆ ಅದೇ ಹಣ ಬಡವರಿಗೆ, ಭಿಕ್ಷುಕರಿಗೆ, ಅನಾಥಾಶ್ರಮಗಳಿಗೆ, ವೃದ್ಧಾಶ್ರಮಗಳಿಗೆ ಕೊಡಬೇಕು ಎಂಬ ಪರಿಕಲ್ಪನೆ ಅವರಿಗಿರುವುದಿಲ್ಲ. ಹಾಗೆ ಆ ದೃಷ್ಟಿಕೋನದಲ್ಲೂ ವಿಚಾರ ಮಾಡುವುದಿಲ್ಲ. ನಮಗೆ ಹಿಂದಿನಿಂದ ಬಂದ ಪದ್ಧತಿಗಳು, ರೂಢಿಗಳು ಮುಂದುವರೆಸಿಕೊಂಡಿಯೇ ಹೋಗುತ್ತೇವೆ. ಹಾಗೆ ವಿದ್ವಾಂಸರ ದೃಷ್ಟಿಯಿಂದ ನೋಡಿದಾಗ ಈ ಪುಣ್ಯಕ್ಷೇತ್ರ ಎಷ್ಟು ವರ್ಷ ಹಿಂದಿನಿಂದ ಬಂದಿದೆ, ಪೌರಾಣಿಕ ಮತ್ತು ಐತಿಹಾಸಿಕ, ಚಾರಿತ್ರಿಕ ಹಿನ್ನೆಲೆ ಕುರಿತು ವಿಚಾರ ಮಾಡುವರು. ಹಾಗೆ ರಾಜಕೀಯ ವ್ಯಕ್ತಿಗಳ ಪ್ರಕಾರ ಇವರು ಬರುವುದು ಪುಣ್ಯಕ್ಷೇತ್ರಕ್ಕೆ ಡಾಂಭಿಕತೆಗೆ ಮಾತ್ರ ಬರುವುದು, ಅಂದರೆ ಇವರೊಂದು ಜನಾಂಗದ ದೇವಸ್ಥಾನಕ್ಕೆ ಬಂದು ಆ ದೇವಸ್ಥಾನದ ಅಭಿವೃದ್ಧಿಗೆ ಹಣ ಕೊಡುತ್ತೇನೆಂದು ಹೇಳಿ ಅವರ ಮತಗಳ ಸಲುವಾಗಿ ಮತ್ತು ಅವರ ಪ್ರಚಾರಕ್ಕಾಗಿ ಬರುತ್ತಾರೆ. ಆದರೆ ಭಕ್ತರು ಮಾತ್ರ ಅವರಿಗೆ ತಮ್ಮ ಪಾಪ

ಕರ್ಮಗಳು ಕಳೆದುಕೊಂಡು ತಮ್ಮ ಕಷ್ಟಗಳು ದೂರವಾಗಬೇಕೆಂದು ಬರುತ್ತಾರೆ. ಹೀಗೆ ಹಲವು ಜನ ಅವರವರ ವೈಧಾನಿಕತೆ ದೃಷ್ಟಿಯಿಂದ ನೋಡುತ್ತಾರೆ.

ಹಾಗೆ ತತ್ವದ ನೆಲೆಯಲ್ಲಿ ನೋಡಿದಾಗ ಹಲವು ಪುಣ್ಯಕ್ಷೇತ್ರವು ತಮ್ಮದೇಯಾದ ತತ್ವಗಳು ಸಾರುತ್ತವೆ. ಆದರೆ ಇವುಗಳಲ್ಲಿ ಅರ್ಥ ಮಾತ್ರ ಸನ್ಮಾರ್ಗದ ಕಡೆ ಇರುವುದು. ಒಂದೊಂದು ಕ್ಷೇತ್ರಗಳಲ್ಲಿ ತಮ್ಮದೇಯಾದ ಸಂಪ್ರದಾಯಗಳು, ತತ್ವಗಳು, ಹಿನ್ನೆಲೆಯಾಗಿ ಇರುತ್ತವೆ. ಗುರುನಾನಕ ಕ್ಷೇತ್ರ ತೆಗೆದುಕೊಂಡಾಗ, ಗುರುನಾನಕ ಕ್ಷೇತ್ರವು ಸಿಖ್ ಧರ್ಮದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಕೇವಲ ಕ್ಷೇತ್ರದ ಕಟ್ಟಡ ನೋಡಿದಾಗಲೇ ಇದು ಉಳಿದ ಕ್ಷೇತ್ರಗಳಿಗಿಂತ ಭಿನ್ನವೆಂದು ಭಾಸವಾಗುತ್ತದೆ. ದೇವರ ದರ್ಶನ ಪಡೆಯುವ ಕ್ರಮದಲ್ಲಿ ಭಿನ್ನತೆ ಇದೆ. ಇಲ್ಲಿ ದರ್ಶನ ಪಡೆಯುವ ವ್ಯಕ್ತಿ ಕಡ್ಡಾಯವಾಗಿ ತಲೆಯ ಮೇಲೊಂದು ವಸ್ತ್ರವೊಂದನ್ನು ಹಾಕಿಕೊಳ್ಳಬೇಕು. ಜೊತೆಗೆ ದೇವಾಲಯದ ಮುಖ್ಯ ದ್ವಾರದಲ್ಲಿ ಹೋಗುವಾಗ ಕಾಲು ತೊಳೆದುಕೊಳ್ಳಬೇಕು. ಅಂದರೆ ದೇವರ ಎದುರು ಎಲ್ಲರೂ ಸಮಾನರಾಗಿ ದೇವರ ಕಡೆ ಹೋಗುವಾಗ ತುಂಬಾ ಶುದ್ಧವಾಗಿ ಹೋಗಬೇಕೆಂಬುದೇ ತಿಳಿದು ಬರುತ್ತದೆ. ಹಾಗೆಯೇ ಅಷ್ಟೂರು ಚೌಖಂಡಿಯ ಕ್ಷೇತ್ರ ನೋಡಿದಾಗ ಇಲ್ಲಿನ ತತ್ವ ವಿಭಿನ್ನವಾಗಿದೆ. ಹಿಂದು-ಮುಸ್ಲಿಂ ಒಂದೇ ದೇವರನ್ನು ಪೂಜೆ ಮಾಡುವರು, ಹೀಗಾಗಿ ಈ ಕ್ಷೇತ್ರ ಭಾವೈಕ್ಯತೆ ತಾಣಗಳೆಂದು ಇಡೀ ದೇಶಕ್ಕೆ ಪ್ರಸಿದ್ಧಿ ಹೊಂದಿದೆ. ಇಲ್ಲಿ ವಿವಿಧ ಜನಾಂಗಗಳ, ಸಂಸ್ಕೃತಿಗಳ, ಸಮ್ಮಿಲನದ ಸಂಕೇತ, ಹಿಂದೂ-ಮುಸ್ಲಿಂ ಬಾಂಧವ್ಯದ ಕೇಂದ್ರವಾಗಿದೆ.

ಹಾಗೆ ಮಾಣಿಕಪ್ರಭುಗಳ ತತ್ವಗಳು ನೋಡಿದಾಗ ದಕ್ಷಿಣೇಶ್ವರ, ಮಹಾಯೋಗಿ, ರಾಮಕೃಷ್ಣ ಪರಮಹಂಸರಂತೆ ಸರ್ವಧರ್ಮಗಳ ಸಮನ್ವಯಕ್ಕಾಗಿ ಈ ವಿಭಾಗದಲ್ಲಿ ಶ್ರೀ ಮಾಣಿಕಪ್ರಭುಗಳು ಶ್ರಮಿಸಿದನ್ನು ಕಾಣುತ್ತೇವೆ. ಜಾತಿಯತೆ, ಜಾಡಕ್ಕೆ ಶ್ರೀ ಮಾಣಿಕಪಂತ ರಾಮಬಾಣವಿದ್ದಂತೆ, ಹಾಗೆ ಇಲ್ಲಿ ಭೇದ, ಭಾವಕ್ಕೆ ಎಡೆಯಿಲ್ಲ, ವಾದ ವಿವಾದಗಳ ತಂಟೆ ಇಲ್ಲ, ವಿವಿಧ ಧರ್ಮಗಳ ಸುಂದರ ಸಮನ್ವಯವನ್ನು ಇವರ ಒಂದು ತತ್ವದಲ್ಲಿ ಕಾಣಬಹುದು.

ಹೌದು ನನಗೂ ಮುಸಲ್ಮಾನನ್ನಾಗಬೇಕು, ಎನಿಸುತ್ತದೆ ಆದರೆ

ಏನು ಮಾಡಲಿ? ರಬ್-ಉಲ್-ಅಲಮೀನ್ ಹೀಗೆ ಅಲ್ಲಿ ಕುರಾನದಲ್ಲಿ ಹೇಳಿದ್ದಾರೆ ವಿಶ್ವದ ಅಧಿಪತಿ ಪರಮೇಶ್ವರ ನಿನಿದ್ದಾಗೆ ಎಂದಿದ್ದಾರೆಯೇ ಹೊರತು ಪರಮೇಶ್ವರ ಮುಸಲ್ಮಾನರಿಗಷ್ಟೇ ಅಧಿಪತಿಯಾಗಿದ್ದಾನೆ- ಎಂದು ಕುರಾನದಲ್ಲಿ ಹೇಳಿದರೆ ನನಗೆ ತೋರಿಸಿರಿ.

ಹೀಗೆ ಪ್ರಭುಗಳ ದರ್ಶನಕ್ಕೆ ಭಿನ್ನ ಭಿನ್ನ ಮತಗಳ ಮತ್ತು ವಿವಿಧ ತತ್ವಗಳ ಜನರು ಬಂದು ಸೇರುತ್ತಿದ್ದರು.

ಶೈವರಿಗೆ ಶಂಕರನ ರೂಪದಲ್ಲಿ ಲಿಂಗವಂತರಿಗೆ ಬಸವೇಶ್ವರನ ರೂಪದಲ್ಲಿ, ಅಗ್ನಿಹೋತ್ರಿಯವರಿಗೆ ಅಗ್ನಿನಾರಾಯಣ ರೂಪದಲ್ಲಿ ಹೀಗೆ ಪರಧರ್ಮರಿಗೆ ಅವರವರ ಧರ್ಮದ ಉಜ್ವಲ ಸ್ವರೂಪ ನೋಡಲು ಸಿಗುತ್ತಿತ್ತು. ಸರ್ವಧರ್ಮ ಸರ್ವಮತದವರು ಅನನ್ಯಭಾವದಿಂದ ಪ್ರಭುಗಳನ್ನು ಆರಾಧಿಸುತ್ತಿದ್ದರು.

ಕರಕನಳ್ಳಿಯ ಬಕ್ಕಪ್ರಭು ದೇವಸ್ಥಾನವು ವಿಭೂತಿ ಪುರುಷರ, ಪವಾಡ ಪುರುಷರು, ಸಿದ್ದಿ ಪುರುಷರ ದಿವ್ಯ ಸಂಗಮವಾಗಿದೆ ಎನಿಸುತ್ತದೆ. ಇಲ್ಲಿ ಬಹುಪಾಲು ಸಾಧು-ಸಂತರು ಬರುತ್ತಾರೆ, ಹಾಗೆಯೇ ಸತ್ಸಂಗ ಹೆಚ್ಚಾಗಿ ಜರುಗುತ್ತದೆ. ಮತ್ತು ಸಾಮಾಜಿಕ ಐಕ್ಯತೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾನ ಜೀವಿಗಳು. ಬಡವ, ದೀನ, ದಲಿತ, ದುರ್ಬಲರ ದು:ಖವನ್ನು ಹೋಗಲಾಡಿಸಿ, ಇವರು ಸರ್ವ, ಧರ್ಮ ಸಮನ್ವಯವಾಗಿದೆ ಎಂದು ಸಾರಿದರು.

೧೦ ನೇ ಶತಮಾನದ ಶರಣತತ್ವಗಳು ನೋಡಿದಾಗ ಇವರು ಯಾವುದೇ ನಂಬಿಕೆ, ಸಂಪ್ರದಾಯ, ಮೂಢನಂಬಿಕೆಗಳನ್ನು ಧಿಕ್ಕರಿಸಿ ವಾಸ್ತವ ಬದುಕಿಗಾಗಿ ಕಾಯಕ ಮಾಡಬೇಕು, ಯಾರು ಹುಟ್ಟಿನಿಂದ, ಯಾರು ಮೇಲು ಕೀಳಲ್ಲ, ಅನುಭವ, ಪ್ರತಿಭೆ, ಪರಿಶ್ರಮ ಪಾಂಡಿತ್ಯದಿಂದ ವ್ಯಕ್ತಿಗೆ ಶ್ರೇಷ್ಠತೆಯನ್ನು ಬರುತ್ತದೆ. ಹೀಗೆ ಪ್ರತಿಯೊಬ್ಬ ಮನುಷ್ಯನು ಕಾಯಕ ಮಾಡಬೇಕು ಮತ್ತು ಸ್ತ್ರೀಯರಿಗೆ ಸಮಾನತೆಯನ್ನು ತಂದುಕೊಟ್ಟವರು ಶಿವಶರಣರಾಗಿದ್ದಾರೆ.

ಈ ರೀತಿಯಾಗಿ ಬೀದರ ಜಿಲ್ಲೆಯಲ್ಲಿ ಬರುವ ಪ್ರಮುಖ ಪುಣ್ಯಕ್ಷೇತ್ರಗಳಾದ ಬೌದ್ಧ, ಜೈನ, ಶೈವ, ವೀರಶೈವ, ಇಸ್ಲಾಂ ಮತ್ತು ಸಿಖ್ಖ್, ಕ್ರೈಸ್ತ ಎಲ್ಲಾ ಜನಾಂಗದವರು ತಮ್ಮದೇಯಾದ ದೃಷ್ಟಿಕೋನ, ತಾತ್ವಿಕತೆ, ತತ್ವಗಳನ್ನು ಸಾರುತ್ತವೆ. ಆದರೂ ಸಹ ಇವುಗಳಿಗೆಲ್ಲಾ ಈ ಮತಧರ್ಮಗಳ ಹಿಂದಿರುವ ಉದ್ದೇಶ ಮಾತ್ರ ಒಂದೇ ಆಗಿದೆ.

ಅಧ್ಯಾಯ–೩

ಪುಣ್ಯಕ್ಷೇತ್ರಗಳು

೧. ಪಾಪನಾಶ

೨. ಗುರುನಾನಕ.

೩. ನರಸಿಂಹ ಝುರಣ

೪. ಅಬ್ದುಲ ಫೈಜ್ ದರ್ಗಾ.

೫. ಅಷ್ಟೂರ ಚೌಖಂಡಿ.

೬. ಭಗವಾನ ಪರ್ಶ್ವನಾಥ.

೭. ಶ್ರೀ ಅಮರೇಶ್ವರ.

೮. ಸಂಗಮನಾಥ.

೯. ಮೈಲಾರ ಮಲ್ಲಣ್ಣ.

೧೦. ವೀರಭದ್ರೇಶ್ವರ.

೧೧. ಶ್ರೀ ಮಾಣಿಕಪ್ರಭು.

೧೨. ನಾಗನಾಥ.

೧೩. ಶಂಕರಲಿಂಗ.

೧೪. ಬಕ್ಕಪ್ರಭು.

೧೫. ಚಾಂಗಲೇರಾ ವೀರಭದ್ರೇಶ್ವರ.

೧೬. ಅನುಭವ ಮಂಟಪ.

ಅಧ್ಯಾಯ–೩

ಪುಣ್ಯಕ್ಷೇತ್ರಗಳು

ಪಾಪನಾಶಿ ಪುಣ್ಯಕ್ಷೇತ್ರ–೧

ನಮ್ಮ ಸಮಾಜದಲ್ಲಿ ಪಾಪ ಪುಣ್ಯ ವೆಂಬುದಕ್ಕೆ ತುಂಬಾ ಪ್ರಮುಖವಾದ ಸ್ಥಾನವಿದೆ. ಏಕೆಂದರೆ ಮತಧರ್ಮಗಳು ಇರುವುದರಿಂದಲೇ ನಮ್ಮ ಸಮಾಜ ಮತ್ತು ವ್ಯಕ್ತಿಗಳಿಗೆ ಒಂದು ಬೆಲೆ ಇರುವುದು. ಮತ್ತು ಸಂಸ್ಕೃತಿ ಮತ್ತು ನಮ್ಮ ನಾಡು ಒಂದು ಸುವ್ಯವಸ್ಥೆಯಿಂದ ಕೂಡಿದೆ. ಪಾಪ ಪುಣ್ಯವೆಂಬುದಕ್ಕೆ ಹಿನ್ನೆಲೆ ಪುಣ್ಯಕ್ಷೇತ್ರಗಳೇ ಕಾರಣವೆನ್ನಬಹುದು. ಪುಣ್ಯಕ್ಷೇತ್ರಗಳಿರುವುದರಿಂದಲೇ ನಮ್ಮ ಸಮಾಜದಲ್ಲಿ ಅನ್ಯಾಯ ಕೆಟ್ಟ ಕೆಲಸಗಳು ಕಮ್ಮಿಯಾಗಿ ಕಾಣಬಹುದು. ನಾವು ಮಾಡಿದ ಪಾಪವನ್ನು ಕಳೆದುಕೊಳ್ಳಲು ಈ ಪುಣ್ಯ ಕ್ಷೇತ್ರಗಳೇ ಕಾರಣವೆನ್ನಬಹುದು.

ಒಂದು ಪುಣ್ಯಕ್ಷೇತ್ರವಾಗಬೇಕಾದರೆ ಆ ಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಬೇಕು. ಹಾಗೆಯೇ ಆ ದೇವರು ನಮ್ಮ ಕಷ್ಟಗಳ ಪರಿಹರಿಸಬೇಕು ಮತ್ತು ಅಲ್ಲಿ ಬಂದು ವಿಶಿಷ್ಟವಾದ ಮಹಿಮೆ ಇರಬೇಕು. ಐತಿಹಾಸಿಕ ಹಿನ್ನೆಲೆ ಹೊಂದಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಭಕ್ತರಿಗೆ ಆ ಕ್ಷೇತ್ರದ ಬಗ್ಗೆ ನಂಬಿಕೆ ಭಿತ್ತಿ ಬರಬೇಕು. ಈ ರೀತಿ ಬರಬೇಕಾದರೆ ಆ ಕ್ಷೇತ್ರ ಒಂದು ಪವಿತ್ರ ಪುಣ್ಯ ಕ್ಷೇತ್ರವಾಗಿರಬೇಕು. ಈ ತರಹದ ಪುಣ್ಯಕ್ಷೇತ್ರ ನಮ್ಮ ಬೀದರನಲ್ಲಿ ಪಾಪನಾಶಿನಿವು ಒಂದು ಪ್ರಮುಖವಾದ ಪುಣ್ಯಕ್ಷೇತ್ರ ಸೂಚಿಸುವಂತೆ ನಮ್ಮ ಪಾಪಗಳನ್ನು ನಾಶ ಮಾಡುವ ಒಂದುಪವಿತ್ರ ಪುಣ್ಯಕ್ಷೇತ್ರ. ಈ ಪುಣ್ಯಕ್ಷೇತ್ರ ಶಿವಲಿಂಗವಿದೆ. ನಮ್ ಹಿಂಧೂ ಧರ್ಮದಲ್ಲಿ ಶಿವಲಿಂಗವು ಶಿವನ ಸ್ವರೂಪವೆಂದು ಭಾವಿಸುತ್ತಾರೆ. ಶಿವಲಿಂಗ ಇರುವ ಕಡೆ ನಮ್ಮಲ್ಲಿ ಭಕ್ತಿ ಹೆಚ್ಚಾಗಿ ನೋಡ್ಡಬಹುದು. ಮತ್ತು ಶಿವಲಿಂಗಕ್ಕೆ ಎಲ್ಲಾ ಜನಾಂಗದವರು ಪೂಜಿಸುವುದು. ಹೀಗೆ ನಮ್ಮ ಪಾಪನಾಶಿಯಲ್ಲೂ ಸಹ ಎಲ್ಲಾ ಜನಾಂಗದವರು ಬರುವರು. ಈ ಕ್ಷೇತ್ರದಲ್ಲಿ ನಾವು ಬೇಡಿಕೊಂಡ ಎಲ್ಲಾ ಬೇಡಿಕೆಗಳು ದೇವರು ಪೂರ್ಣಗೊಳಿಸುತ್ತಾರೆ ಎಂಬುದು ಇಲ್ಲಿನ ಭಕ್ತರ ನಂಬಿಕೆ. ಹಾಗೆಯೇ ಈ ಕ್ಷೇತ್ರದಲ್ಲಿ ತರುವರು. ಮೊದಲು ಇಲ್ಲಿ ಒಂದು ನೀರಿನ ಗುಂಡಾವಿದೆ ಮತ್ತು ಬಾವಿ ಇದೆ. ಇಲ್ಲಿನ ಗುಂಡದಲ್ಲಿನ ನೀರು ತುಂಬಾ ಪವಿತ್ರ ಮತ್ತು ಸದಾನೀರು ಕಾಣಬಹುದು. ಬಂದ ಭಕ್ತರು ಈ ಗುಂಡದಲ್ಲಿನ ನೀರಿನಿಂದ ಸ್ನಾನ ಮಾಡಿದರೆ

ಅವರ ಪಾಪಕರ್ಮಗಳು ದೂರವಾಗುತ್ತವೆ. ನಂತರ ಈ ದೇವರ ದರ್ಶನದಿಂದ ಪುಣ್ಯಸಿಗುತ್ತದೆ ಎಂಬುವುದು ಇಲ್ಲಿನ ಭಕ್ತರ ನಂಬಿಕೆಯಾಗಿದೆ.

ಬೀದರ ಜಿಲ್ಲೆಯ ಅತ್ಯಂತ ಪ್ರಾಚೀನ ಮಂದಿರವಾದ ಪಾಪನಾಶಿನಿ ಅತ್ಯಂತ ಸುಂದರವಾಗಿದೆ. ಪಾಪನಾಶಿನಿ ಮಂದಿರದಲ್ಲಿ ಶಿವಲಿಂಗವಿದೆ. ಇದು ರಾಮನಿಂದ ಸ್ಥಾಪಿಸಲ್ಪಟ್ಟಿದೆ. ಈ ಸ್ಥಾಪನೆ ಕುರಿತು ಒಂದು ಐತಿಹ್ಯ ಕಥೆ ಹೀಗಿದೆ.

ರಾಮನು ವನವಾಸದಲ್ಲಿದ್ದಾಗ ಈ ಬೀದರ ಜಿಲ್ಲೆಯ ಸ್ಥಳದಲ್ಲೆಲ್ಲ ಸುತ್ತಾಡಿದ, ಪಾಪನಾಶಿನಿ ಸ್ಥಳ ಮೊದಲು ಅತ್ಯಂತ ಘಟ್ಟದಿಂದ ಕೂಡಿದ ಸ್ಥಳವಾಗಿತ್ತು. ಮಂದಿರದ ಹಿಂದುಗಡೆ ಈಗಲೂ ಘಟ್ಟ ಇದೆ. ಘಟದಲ್ಲಿ ತಿರುಗಾಡುತ್ತ ರಾಮ ಲಕ್ಷ್ಮಣ ಒಂದು ಸ್ಥಳದಲ್ಲಿ ಕೂತು ಚಂಡು ಆಡಲು ಬಯಸಿದರು. ರಾಮನ ಕೈಯಲ್ಲಿ ಒಂದು ಚಿಕ್ಕದಾದ ಲಿಂಗ ಇದ್ದಿತ್ತು. ಅದನ್ನು ಕೆಳಗೆ ಇಟ್ಟು ರಾಮ ಲಕ್ಷ್ಮಣ ಆಟ ಆಡಿದರು. ನಂತರ ಇಲ್ಲಿಂದ ಬೇರೆ ಕಡೆ ಹೋಗಬೇಕಾದಾಗ ಆ ಚಿಕ್ಕದಾದ ಲಿಂಗವನ್ನು ಅದೇ ಸ್ಥಳದಲ್ಲಿಟ್ಟು ತಾನು ಇಲ್ಲಿಗೆ ಈ ಸ್ಥಳಕ್ಕೆ ಬಂದ ನೆನಪಿಗಾಗಿ ಈ ಲಿಂಗ ಇಲ್ಲೇ ಪ್ರತಿಷ್ಠಾಪಿಸಿದ್ದೇನೆ. ಈ ಸ್ಥಳಕ್ಕೆ ಬಂದ ಜನರಿಗೆ ಪಾಪನಷ್ಟವಾಗಿ ಸಕಲ ಕಷ್ಟಗಳು ದೂರವಾಗಲಿ ಎಂದು ಹೇಳಿ ಲಿಂಗ ಸ್ಥಾಪಿಸಿ ನಂತರ ಇಲ್ಲಿಂದ ಬೇರೆ ಕಡೆ ಅವರು ಹೋದರು.

ನಂತರ ಒಂದು ದಿವಸ ಒಬ್ಬ ವಯಸ್ಸಾದ ಹೆಣ್ಣು ಮಗಳಿಗೆ ಆ ಲಿಂಗ ಕಣ್ಣಿಗೆ ಬಿದ್ದಿತ್ತು. ಆಗ ಅವಳು ಅಲ್ಲಿಗೆ ಹೋಗಿ ಆ ಲಿಂಗವನ್ನು ನೋಡಿದಳು. ಹೀಗೆ ಸ್ವಲ್ಪ ದಿವಸದವರೆಗೆ ನೋಡುತ್ತಲೆ ಇದ್ದಳು. ಆ ಚಿಕ್ಕದಾದ ಲಿಂಗವು ದಿನದಿನಕ್ಕೆ ಬೆಳೆಯಲಾರಂಭಿಸಿತು. ಈ ಚಿಕ್ಕದಾದ ಲಿಂಗ ದಿನ ದಿನಕ್ಕೆ ಬೆಳೆಯುವುದನ್ನು ಕಂಡು ಆ ವಯಸ್ಸಾದ ಹೆಣ್ಣು ಮಗಳಿಗೆ ಆಶ್ಚರ್ಯವಾಗಿತ್ತು. ಹೀಗೆ ಒಂದು ದಿನ ಆ ವಯಸ್ಸಾದ ಹೆಣ್ಣು ಮಗಳು ಈ ಲಿಂಗ ಹೀಗೆ ದಿನಾಲು ಎಷ್ಟು ಬೆಳೆಯುತ್ತದೆ ನೋಡೋಣ ಎಂದು ಒಂದು ದಾರವನ್ನು ತೆಗೆದುಕೊಂಡು ಆ ಲಿಂಗವನ್ನು ಹಿಡಿದು ಅಳೆದಳು. ಆಗ ಅವಳು ಹೀಗೆ ಹಿಡಿದ ನಂತರ ಆ ಲಿಂಗ ಅಂದಿನಿಂದ ಬೆಳೆಯುವುದು ನಿಂತುಹೋಗಿ ಬಿಟ್ಟಿತ್ತು.

ಆ ಹೆಣ್ಣು ಮಗಳು ಆ ಧಾರವನ್ನು ಲಿಂಗಕ್ಕೆ ಅಳತೆ ಮಾಡಿ ಮಾಡಿ ಹಿಡಿತ್ತಾ ಇಲ್ಲವೆಂದರೆ ಆ ಲಿಂಗ ಇನ್ನೂ ಎಷ್ಟೋ ದೊಡ್ಡದಾಗಿ ಬೆಳೆಯುತ್ತಿತ್ತು ಎಂದು ಗೊತ್ತಿಲ್ಲ. ನಂತರ ಆ ಹೆಣ್ಣುಮಗಳು ಪಶ್ಚತಾಪ

ಪಟ್ಟು ಮರಣ ಹೊಂದಿದ್ದಳು. ಆ ಲಿಂಗ ಇನ್ನೂ ಕೂಡ ಅಷ್ಟೆ ಆಕಾರ ರೂಪದಲ್ಲಿದೆ. ಎಂದು ಐತಿಹ್ಯ ಹೇಳುತ್ತಾರೆ. ಹೀಗೆ ಎಷ್ಟೋ ಕಾಲ ಗತಿಸಿದ ನಂತರ ಆ ಸ್ಥಳ ಘಟವಾದ ಕಾರಣ ಆ ಕಡೆ ಯಾರೂ ಹೋಗುತ್ತಿರಲಿಲ್ಲ. ಹೀಗೆ ಒಂದು ದಿವಸ ಏರ್‌ಫೋರ್ಸ್ ವ್ಯಕ್ತಿ ಕಣ್ಣಿಗೆ ಈ ಲಿಂಗ ಕಾಣಿಸಿತ್ತು. ಏರ್‌ಫೋರ್ಸ್ ವ್ಯಕ್ತಿ ಲಿಂಗವನ್ನು ಕಂಡು ಆಶ್ಚರ್ಯಪಟ್ಟು, ನಂತರ ಈ ಲಿಂಗವನ್ನು ಬೇರೆ ಒಳ್ಳೆಯ ಸ್ಥಳದಲ್ಲಿಟ್ಟು ಸ್ಥಾಪಿಸಬೇಕು ಎಂದು ಯೋಚಿಸಿ ನಂತರ ತೀರ್ಮಾನಿಸಿದೆ. ನಂತರ ಆ ಲಿಂಗವನ್ನು ಕಿತ್ತಲು ಪ್ರಾರಂಬಿಸಿದ ಅನೇಕ ವ್ಯಕ್ತಿಗಳಿಂದ ಕೆತ್ತುವ ಕೆಲಸ ಪ್ರಾರಂಭಿಸಿದ ಆ ಲಿಂಗ ಕೆತ್ತಲಿಲ್ಲ. ನಂತರ ನೆಲದ ಆಳಕ್ಕೆ ಅಗಿಯಲು ಹಚ್ಚಿದ ನೆಲ ಅಗೆಯುತ್ತಾ ಹೋದಂತೆ ಲಿಂಗವು ಕಾಣಿಸುತ್ತಲೇ ಇರುತ್ತಿತ್ತು. ಇದನ್ನು ಕಂಡು ಆಶ್ಚರ್ಯ ಪಟ್ಟು ನಂತರ ಈ ಲಿಂಗವನ್ನು ಹೇಗಾದರೂ ಮಾಡಿ ಈ ಸ್ಥಳದಿಂದ ತೆಗೆದು ಬೇರೆ ಸ್ಥಳದಲ್ಲೇ ಸ್ಥಾಪಿಸಬೇಕೆಂದು ಯೋಚಿಸಿದರು. ನಂತರ ಎಷ್ಟೋಂದು ಪ್ರಯತ್ನ ಪಟ್ಟರು ಆ ಲಿಂಗ ಬರಲಿಲ್ಲ.

ನಂತರ ಇನ್ನೂ ಸ್ವಲ್ಪ ಆಳಕ್ಕೆ ಅಗಿಯಲು ಪ್ರಾರಂಭಿಸಿದರು. ಆಗ ಆ ಲಿಂಗದ ಕೆಳಗಡೆ ನೀರು ಕಾಣಿಸಿದವು. ಇದನ್ನು ಕಂಡು ಜನರು ಆಶ್ಚರ್ಯಪಟ್ಟರು. ನೀರಿನ ಮೇಲೆ ಇಷ್ಟಲಿಂಗ ಇದೆ ಎಂದು ಆಶ್ಚರ್ಯಪಟ್ಟು ನಂತರ ಆ ಲಿಂಗವನ್ನು ಮೊದಲು ಹೇಗೆ ಇತ್ತೋ ಹಾಗೆ ಇರಲೆಂದು ಪುನ: ನಂತರ ಮೊದಲಿನಂತೆ ಮುಚ್ಚಿಬಿಟ್ಟರು. ಲಿಂಗಕ್ಕೆ ಜನರು ಪೂಜೆ ಮಾಡಿದರು. ಆ ಲಿಂಗದ ಕೆಳಗಿನ ನೀರು ಇಂದು ಕೂಡ ಹರಿಯುತ್ತವೆ.

ಇಲ್ಲಿಗೆ ಬಂದ ಜನರು ಭಕ್ತರು ಆ ನೀರಿನಿಂದಲೇ ಸ್ನಾನ ಮಾಡುತ್ತಾರೆ. ಆ ನೀರಿನಲ್ಲಿ ಸ್ನಾನ ಮಾಡಿದ ಜನರಿಗೆ ಭಕ್ತರಿಗೆ ಅವರ ಮಾಡಿದಂತಹ ಪಾಪಗಳು ನಾಶವಾಗಿ ಪುಣ್ಯ ಸಿಗುವುದು ಎಂಬುವುದು ಜನಪದರ ನಂಬಿಕೆ ಆದರೆ ಈ ನಂಬಿಕೆ ಕೆಲವೊಂದು ಸಾರಿ ನಿಜವಾಗಿ ನಡೆಯುತ್ತಿವೆ. ಇಲ್ಲಿ ಬರುವವರ ಭಕ್ತರಿಂದ ಉದಾಹರಣೆ ನೋಡಬಹುದು. ಹಾಗೆಯೆ ಈ ಕ್ಷೇತ್ರದಲ್ಲಿ ಭಕ್ತರಿಗೆ ಪೂರ್ತಿಯಾಗಿ ಗರ್ಭಗುಡಿಯೊಳಗೆ ಹೋಗಿ ಲಿಂಗಕ್ಕೆ ಹಣೆ ಹಚ್ಚಿ ನಮಸ್ಕರಿಸಲು ಮತ್ತು ಲಿಂಗಪೂಜೆ ಮಾಡಲು ಅವಕಾಶವಿದೆ. ಈ ತರಹ ಎಲ್ಲಾ ಕ್ಷೇತ್ರಗಳಲ್ಲಿ ಸಿಗುವುದಿಲ್ಲ. ಹಣೆ ಹಚ್ಚಿ ನಮಸ್ಕರಿಸಿ ನಮ್ಮ ಬೇಡಿಕೆಗಳು ಮತ್ತು ನಮ್ಮ ಹರಕೆಗಳು ಬೇಡಿಕೊಳ್ಳುವುದರಿಂದ ನಮ್ಮಲ್ಲಿ ಒಂದು ತರಹದ ಮನಸ್ಸಿಗೆ ನೇಮ್ಮದಿ ಸಿಗುತ್ತದೆ. ಮತ್ತು ನಮ್ಮ ಬೇಡಿಕೆಗಳು

ದೇವರು ಪೂರ್ಣಗೊಳಿಸುತ್ತಾರೆವೆಂಬ ದೃಢವಾದ ನಂಬಿಕೆ ಬರುವುದು. ಲಿಂಗಕ್ಕೆ ನಮ್ಮ ಹಣೆಹಚ್ಚಿ ನಮಸ್ಕರಿಸುವುರಿಂದ ನಾವು ಮಾಡಿದ ಪಾಪಕರ್ಮಗಳು ನಾಶಮಾಡಿ ದೇವರು ನಮ್ಮನ್ನು ಒಳ್ಳೆಯ ಮನುಷ್ಯರಾಗಿ ಮಾಡುತ್ತಾರೆ ಎಂಬುದು ಭಕ್ತರ ನಂಬಿಕೆ.

ಮತ್ತೊಂದು ವಿಶೇಷವೆಂದರೆ ರೋಗಗಳಿಂದ ಬಳಲುವುದು ಮತ್ತು ಮಾನಸಿಕ ರೋಗಕ್ಕೆ ಒಳಗಾದವರು. ಮತ್ತು ಎಷ್ಟೇ ಕೆಟ್ಟ ಕೆಲಸ ಮಾಡಿದಲ್ಲಿ ಇಲ್ಲಿ ಬಂದು ಸ್ಥಾನಮಾಡಿ ದೇವರ ದರ್ಶನ ಮಾಡಿದರೆ ನಮ್ಮ ರೋಗಗಳ ಪಾಪವೆಲ್ಲವೂ ನಾಶವಾಗುವುವು. ಈ ಕ್ಷೇತ್ರ ಇರುವುದೇ ಪಾಪಗಳೆಲ್ಲ ನಾಶ ಮಾಡಲು ಮತ್ತು ಮಾನಸಿಕ ರೋಗಕ್ಕೆ ಒಳಗಾದವರಿಗೆ ಇಲ್ಲಿ ಬೆಳಿಗ್ಗೆ ಬಂದು ಜಪ ಮಾಡಲು ಹೇಳುತ್ತಾರೆ. ಇಲ್ಲಿ ಜಪ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಶಾಂತಿ ಸಿಗುತ್ತದೆ.

ಹಾಗೆಯೆ ಇಲ್ಲಿ ಸುತ್ತಮುತ್ತಲಿನ ಹಳ್ಳಿಯ ಜನರು ಸಹ ಈ ದೇವರ ಮೇಲೆ ತುಂಬಾ ನಂಬಿಕೆ ಇದೆ. ಸರಿಯಾಗಿ ಮಳೆ ಬಾರದೆ ಇದ್ದರೆ ಪ್ರತಿವೊಂದು ಹಳ್ಳಿಯ ಎಲ್ಲಾ ಜನರು ಸೇರಿ ಹೆಣ್ಣು ಮಕ್ಕಳು ಮತ್ತು ಗಂಡಸರು ಕೂಡಿ ಈ ದೇವರ ಹತ್ತಿರ ಪಾದಯಾತ್ರೆ ಮಾಡಿಕೊಂಡು ಬರುತ್ತಾರೆ. ಹೆಣ್ಣು ಮಕ್ಕಳು ವಿಶೇಷವಾಗಿ ತಲೆ ಮೇಲೆ ಕೊಡದಲ್ಲಿ ನೀರು ತುಂಬಿಸಿಕೊಂಡು ಕಾಲಲ್ಲಿ ಪಾದರಕ್ಷೆಗಳು ಕೂಡ ಹಾಕದೇ ದೇವರ ನಾಮಗಳನ್ನು ಹೇಳುತ್ತಾ ನಡೆದುಕೊಂಡು ಬರುತ್ತಾರೆ. ಇದು ಒಂದು ಈ ಪುಣ್ಯಕ್ಷೇತ್ರದ ವಿಶೇಷ ಹೀಗೆ ಬಂದಾಗ ಮಳೆ ಬಗ್ಗೆ ಬರುತ್ತದೆ. ಮತ್ತು ಮಳೆ ಬಂದ ಉದಾಹರಣೆಗಳು ಕಾಣಬಹುದು.

ಆ ಲಿಂಗವನ್ನು ಕಂಡಿದ ಏರ್‌ಫೋರ್ಸ್ ವ್ಯಕ್ತಿಯ ಆ ಲಿಂಗ ಇದ್ದ ಸ್ಥಳದಲ್ಲಿ ಮಂದಿರ ಕಟ್ಟಿಸಿದ ಆತನ ಹೆಸರು "ಬಲರಾಮ" ಎಂದು ಕರೆಯಲಾಗಿದೆ.

ಲಿಂಗವು ಅತ್ಯಂತ ಸುಂದರವಾಗಿದೆ. ಈ ಲಿಂಗ ನೋಡಿದಾಗ ಸಾಕ್ಷಾತ್ ಆ ಶಿವನನ್ನು ನೋಡಿದಷ್ಟು ಆನಂದವಾಗುವುದು. ಐದು ಹೆಡಿಯ ಕಂಚಿನ ನಾಗಣ್ಣ ಸ್ವಾಮಿಯ ಲಿಂಗದ ಮೇಲೆ ಮೇಲೆ ಹೆಡೆಯೇತ್ತಿದ್ದು ಇದೆ.

ಮಂದಿರ ಚಿಕ್ಕದಾಗಿದ್ದರು ಬಹಳ ಸುಂದರವಾಗಿದೆ. ಮಂದಿರದ ಒಳಗಡೆ ಸುಂದರವಾದ ಕಮಾನಗಳಿಂದ ಕಟ್ಟಲಾಗಿದೆ. ಶಿವಲಿಂಗಕ್ಕೆಜನರು ರುದ್ರಾಭಿಷೇಕ ಮಾಡಿಸುತ್ತಾರೆ. ಇಲ್ಲಿ ಪೂಜಾರಿಗಳು ಸದಾ ಇರುತ್ತಾರೆ. ಬಂದ ಪ್ರತಿ ಒಬ್ಬ

ಭಕ್ತರು ಪೂಜೆ ಮಾಡುತ್ತಾರೆ. ಲಿಂಗವನ್ನು ತೊಳೆದ ನೀರನ್ನು ಹೊರಗಡೆ ಹೋಗಲು ಒಳಗಿನಿಂದ ಹೊರಗಡೆಯ ವರೆಗೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಗೆ ಯಾವಾಗಲು ಜನರು ಬರುತ್ತಾರೆ. ಎಲ್ಲಾ ಜಾತಿ–ಜನಾಂಗದ ಜನರು ಬಂದು ಪೂಜೆ ಸಲ್ಲಿಸುತ್ತಾರೆ.

ಶಿವಲಿಂಗದ ಸ್ವಲ್ಪ ಹೊರಗಡೆ ಮತ್ತೆ ಕಲ್ಲಿನ ಮೂರು ಲಿಂಗಗಳು ಸ್ಥಾಪಿಸಿದ್ದಾರೆ. ಹಾಗೂ ಆ ಲಿಂಗಗಳ ಹತ್ತಿರದಲ್ಲೇ ಎಡಗಡೆ ಬಲಗಡೆ ಆಂಜನಯ್ಯ ಮತ್ತೊಂದು ಕಡೆ ಗಣೇಶನ ಕಲ್ಲಿನ ಮೂರ್ತಿಗಳಿವೆ ಇವು ನವಗ್ರಹಗಳಾಗಿವೆ. ಯಾಕೆ ಹೀಗೆ ಸ್ಥಾಪಿಸಿದ್ದಾರೆ ಎಂದರೆ? ದೇವರನ್ನು ನವಗ್ರಹಗಳನ್ನು ಸುತ್ತಬಾರದೆಂದು ಈ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಲಾಗಿದೆ.

ಈ ಪಾಪನಾಶ ಮಂದಿರದಲ್ಲಿ ಶಿವರಾತ್ರಿ ದಿವಸ ಜಾತ್ರೆಯಾಗುತ್ತದೆ. ಅನೇಕ ಕಡೆಯಿಂದ ಭಕ್ತ ಜನರು ಇಲ್ಲಿಗೆ ಬರುತ್ತಾರೆ. ರಾತ್ರಿ ಇಡೀ ಭಜನೆ ಕೀರ್ತನೆ ಇರುತ್ತದೆ. ಮುಂಜಾನೆ ಜಾತ್ರೆಯಾಗುತ್ತದೆ. ಎಲ್ಲಾ ಜನಾಂಗದವರು ಈ ಜಾತ್ರೆಗೆ ಬರುತ್ತಾರೆ. ಹಾಗೆಯೇ ಈ ಪುಣ್ಯಕ್ಷೇತ್ರವು ಶ್ರಾವಣಮಾಸ ಒಂದು ತಿಂಗಳು ಇಲ್ಲಿ ತುಂಬಾ ವಿಶೇಷವಾದ ಪೂಜೆ ರುದ್ರಾಭಿಷೇಕ ನಡೆಯುತ್ತವೆ. ಶ್ರಾವಣದಲ್ಲಿ ಬೆಳಗಿನ ಜಾವ ೩ ಗಂಟೆಯಿಂದಲೇ ಸುತ್ತ ಮುತ್ತಲಿನಜನರು ನಡೆದುಕೊಂಡು ದರ್ಶನಕ್ಕೆ ಬರುತ್ತಾರೆ. ಶ್ರಾವಣ ಬಂದರೆ ಇಲ್ಲಿ ಕ್ಷೇತ್ರ ನೋಡಲು ತುಂಬಾ ಸುಂದರವಾಗಿ ಆನಂದಮಯವಾಗಿರುತ್ತದೆ. ಶ್ರಾವಣದಲ್ಲಿ ಸಾವಿರಾತು ಭಕ್ತರು ಬೇರೆ ಬೇರೆ ರಾಜ್ಯಗಳಿಂದ ಈ ಪುಣ್ಯಕ್ಷೇತ್ರ ದರ್ಶನಕ್ಕೆ ಬರುತ್ತಾರೆ. ಇಲ್ಲಿ ಭಕ್ತರು ಬರುವದು ನೋಡಿದರೆ ನಮಗೆ ಗೊತ್ತಾಗುತ್ತದೆ. ಈ ಕ್ಷೇತ್ರ ಎಷ್ಟು ಪುಣ್ಯವಂತಸ್ಥಳವೆಂದು ತಿಳಿಯಬಹುದು. ಮತ್ತೆ ಶ್ರಾವಣ ಮಾಸದಲ್ಲಿ ಏಕಾದಶಿ ದಿವಸ ಪಂಡಲಪೂರದಿಂದ ಜನರು ಭಕ್ತರು ಪಾದಯಾತ್ರೆ ಮಾಡಿಕೊಂಡು ಬೀದರ ಜಿಲ್ಲೆಗೆ ಬರುತ್ತಾರೆ. ಮೊದಲು ಈ ಜನರು ಕೋಟೆಯ ಅಂದರೆ ಬೀದರ ನಗರದ ಕೋಟೆಯ ಹತ್ತಿರ ಬರುತ್ತಾರೆ. ಏಕೆಂದರೆ, ಕೋಟೆಯ ಹತ್ತಿರ ದ್ವಾರದಲ್ಲಿ ಪಾಂಡುರಂಗನ ಪಾದದ ಸ್ಥಾಪನೆ ಇದೆ. ಆದ್ದರಿಂದ ಮೊದಲು ಈ ಸ್ಥಳಕ್ಕೆ ಬಂದು ಇಲ್ಲಿ ಪೂಜೆ ಮಾಡಿ ಭಜನೆ ಮಾಡಿ ಈ ಕೋಟೆಯಲ್ಲಿ ಅಂದು ಇವರಿಗೆ ಹಾಗೂ ಬಂದ ಜನರಿಗೆ ಭಕ್ತರಿಗೆ ಊಟದ ವ್ಯವಸ್ಥೆ ಕೂಡ ಇರುತ್ತದೆ. ಇವರು ಪೂಜೆ ಊಟ ಆದ ನಂತರ ಪಾಪನಾಶಿನಿಗೆ ಹೋಗುತ್ತಾರೆ. ಇವರು ಹೋದನಂತರ ಅಲ್ಲಿ ವಿಶೇಷ ಪೂಜೆ

ನಡೆಯುತ್ತದೆ. ಇದು ಪರಂಪರೆಯಿಂದ ಬಂದ ಪದ್ಧತಿ ಈ ಆಧುನಿಕಯುಗದಲ್ಲೂ ಸಹ ಈ ಪದ್ಧತಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ಈ ಕ್ಷೇತ್ರದ ಮಹಿಮೆ ಪುಣ್ಯವೇ ಕಾರಣವೆನ್ನಬಹುದು. ಏಕೆಂದರೆ ಭಕ್ತರು ಇಷ್ಟೆಲ್ಲಾ ಸೇವೆ ಮಾಡೇಕಾದರೆ ಆ ಸ್ಥಳ ಪುಣ್ಯವಂತ ಕ್ಷೇತ್ರವಿದ್ದಾಗ ಮಾತ್ರ ಸಾಧ್ಯ. ಆನರಿಗೆ ಆ ಕ್ಷೇತ್ರದ ಬಗ್ಗೆ ಭಕ್ತಿ, ಶಾಂತಿ, ಪುಣ್ಯ, ನೆಮ್ಮದಿ ತಮ್ಮ ಕಷ್ಟಗಳಿಗೆ ಸುಖಸಿಗುವುದು. ಯಾವ ಕ್ಷೇತ್ರದಿಂದ ಇದನ್ನೆಲ್ಲಾ ಭಕ್ತರಿಗೆ ಸಿಗುತ್ತದೋ, ಆಗ ಮಾತ್ರ ಆ ಭಕ್ತರು ದೇವರ ಬಗ್ಗೆ ನಂಬಿಕೆ ಬರುವುದು. ಹರಕೆ ಹೊರೆವುದು ಸೇವೆ ಸಲ್ಲಿಸುವುದು ಸಾಧ್ಯ. ಇವುಗಳಲ್ಲಿ ಈ ಪಾಪನಾಶಿ ಪುಣ್ಯ ಕ್ಷೇತ್ರದಲ್ಲಿ ಕಾಣಲು ಸಾಧ್ಯವೆನ್ನಬಹುದು.

ಬೀದರ ಜಿಲ್ಲೆಯು ಎಲ್ಲ ಧರ್ಮದ ಬೀಡಾಗಿದೆ. ಇಲ್ಲಿ ರಾಮ ಪಾಂಡುರಂಗ ಬಂದಂತಹ ಪುಣ್ಯ ಸ್ಥಳವಾಗಿದೆ. ಇದು ಅತ್ಯಂತ ಹೆಮ್ಮೆಯ ಭೂಮಿಯಾಗಿದೆ. ಮಹಾ ವ್ಯಕ್ತಿಗಳು ಇಲ್ಲಿ ಬಂದು ಹೋಗಿದ್ದಾರೆ. ಅವರು ಬಂದು ಹೋಗಿದ್ದ ನೆನಪಿಗಾಗಿ ಲಿಂಗ ಹಾಗೂ ಅವರ ಪಾದದ ಸ್ಥಾಪನೆಗಳು ಮಾಡಿದ್ದಾರೆ. ಇಂದು ಕೂಡಾ ಪಾಂಡುರಂಗನ ಪಾದದ ಗುರುತು ಇದೆ. ಅಲ್ಲಿ ಇಂದು ಕೂಡ ಪೂಜೆ ಮಾಡುತ್ತಾರೆ. ಬೀದರ ಕೋಟೆಯ ದ್ವಾರದ ನಡುವೆ ಬಂದು ಪಾದದ ಗುರುತಿನ ಆಕಾರದ ಕಲ್ಲಿದೆ, ಒಂದೆ ಇದೆ. ಇದು ಇಲ್ಲಿಗೆ ಬಂದ ಗುರುತಾಗಿದೆ. ಇನ್ನೊಂದು ಪಾದದ ಗುರುತು ಬೀದರನ ಶಾಹಗಂಜ ದರವಾಜಾದಲ್ಲಿ ಇದು ಹೋಗುವಾಗಿನ ಗುರುತಾಗಿದೆ. ಇಂದು ಕೂಡ ಜನರು ಈ ಪಾದಗಳಿಗೆ ಪೂಜೆ ಮಾಡುತ್ತಾರೆ.

ಪಾಪನಾಶಿನಿ ಪುಣ್ಯಕ್ಷೇತ್ರದಲ್ಲಿ ಮದುವೆ ಕೂಡಾ ಆಗುತ್ತವೆ. ಮದುವೆಯ ಅನುಕೂಲದ ವ್ಯವಸ್ಥೆ ಕೂಡಾ ಮಾಡಲಾಗಿದೆ. ನೀರಿನ ವ್ಯವಸ್ಥೆ ಕೂಡಾ ಇದೆ. ಈ ಪುಣ್ಯ ಕ್ಷೇತ್ರಕ್ಕೆ ಮದುವೆ ಆದ ನಂತರ ನವದಂಪತಿಗಳು ಮೊದಲು ಈ ಕ್ಷೇತ್ರದ ದರ್ಶನ ಪಡೆಯುತ್ತಾರೆ. ಈ ಕ್ಷೇತ್ರ ಸುತ್ತಲು ಮರಗಳಿಂದ ದಟ್ಟವಾದ ಕಾಡಿನಲ್ಲಿ ನಿಸರ್ಗದ ಮಡಲಿನಿಂದ ಕೂಡಿದ ಈ ಕ್ಷೇತ್ರ ತಗ್ಗಿನಲ್ಲಿ ಅಂದರೆ ಸುತ್ತಲೂ ಗುಡ್ಡಗಳಿಂದ ಕೂಡಿದೆ. ಮಧ್ಯದಲ್ಲಿ ಈ ಶಿವಲಿಂಗ ಕ್ಷೇತ್ರ ಇರುವುದು ಕಾಣಬಹುದು. ಇದು ನೋಡಲು ತುಂಬಾ ರಮಣೀಯವಾಗಿದೆ. ಈ ಕ್ಷೇತ್ರ ಹೋಗುವ ದಾರಿ ಕಲ್ಲಿನಲ್ಲಿ ಕಡೆದು ದೊಡ್ಡದಾದ ದಾರಿ ಮಾಡಿದ್ದಾರೆ. ಮಂದಿರದ ತನಕ ಅನೇಕ ಛೀಡಿಗಳಿವೆ. ಭಕ್ತರಿಗೆ ಹೋಗಲಿಕ್ಕೆ ಬರುವುದಕ್ಕೆಲ್ಲಾ ಅನುಕೂಲವಾಗಿದೆ. ಈವಾಗ ಸ್ವಲ್ಪ

ಅಭಿವೃದ್ಧಿ ಮಟ್ಟದಲ್ಲಿ ಕಾಣಿಸುತ್ತಿದೆ. ಆದರೂ ಇಲ್ಲಿ ಇನ್ನೂ ತುಂಬಾ ಅಭಿವೃದ್ಧಿ ಹೊಂದಬೇಕಾಗಿದೆ. ಬಂದ ಭಕ್ತರಿಗೆ ಅನ್ನದ ದಾಸೋಹ ಇಡೀ ವರ್ಷ ನಡೆಯಬೇಕು. ದೇವಸ್ಥಾನ ದೊಡ್ಡ ಪ್ರಮಾಣದಲ್ಲಿ ಕಟ್ಟಡ ನಿರ್ಮಾಣವಾಗಬೇಕು. ಈ ಆಧುನಿಕ ರೀತಿಯಲ್ಲಿ ಈ ಕ್ಷೇತ್ರ ಅಭಿವೃದ್ಧಿಯಾಗಬೇಕು. ಈ ಕ್ಷೇತ್ರ ಪವಿತ್ರ ಪುಣ್ಯ ಕ್ಷೇತ್ರವಿದೆ. ಅಂದರೆ ಇಲ್ಲಿ ಆ ಶಿವಲಿಂಗದ ಮಹಿಮೆ ತುಂಬಾ ಇದೆ. ಮತ್ತು ಐತಿಹಾಸಿಕ ಹಿನ್ನೆಲೆ ಇದೆ. ಆದರೆ ಈ ಕ್ಷೇತ್ರ ಬೀದರ ಜಿಲ್ಲೆಯ ಸುತ್ತ ಮುತ್ತಲಿಗೆ ಮಾತ್ರ ಪ್ರಸಿದ್ಧಿಯಾಗಿದೆ. ಇಡೀ ನಮ್ಮ ದೇಶದಲ್ಲಿ ಈ ಪುಣ್ಯಕ್ಷೇತ್ರ ಮಹಿಮೆ ಗೊತ್ತಾಗಬೇಕಾದರೆ ಈ ಕ್ಷೇತ್ರ ತುಂಬಾ ಅಭಿವೃದ್ಧಿಯಾಗಬೇಕು. ಈ ಕ್ಷೇತ್ರ ಅಭಿವೃದ್ಧಿಹೊಂದಿದ್ದರೆ ಈ ಪುಣ್ಯಕ್ಷೇತ್ರ ದಕ್ಷಿಣ ಕನ್ನಡದಲ್ಲಿ ಇರುವ ದೇವಸ್ಥಾನಗಳು ಎಷ್ಟು ಪ್ರಸಿದ್ಧಿಯಾಗಿವೆ ಹಾಗೆಯೇ ಈ ನಮ್ಮ ಪಾಪನಾಶಿನಿ ಪುಣ್ಯಕ್ಷೇತ್ರ ಪ್ರಸಿದ್ಧಿ ಆಗುತ್ತದೆ. ಆದ್ದರಿಂದ ಇಲ್ಲಿ ಬರುವ ಭಕ್ತರು ಮತ್ತು ದಾನಿಗಳು ಮತ್ತು ಸರಕಾರ ಎಲ್ಲರೂ ಕೂಡಿ ಈ ಪುಣ್ಯಕ್ಷೇತ್ರ ಅಭಿವೃದ್ಧಿ ಮಾಡಬೇಕು. ಪುರಾಣ ಪ್ರಸಿದ್ಧವಾದ ಈ ಪುಣ್ಯ ಕ್ಷೇತ್ರಕ್ಕೆ ರಾಮೇಶ್ವರ ಎಂತಲೂ ಕರೆಯುತ್ತಾರೆ. ಹಿಂದೆ ಶುಕ್ರಾಚಾರ್ಯರು ಇದನ್ನು ಪೂಜಿಸುತ್ತಿದ್ದರೆಂದು ಪ್ರತೀತಿಗಳಿವೆ. ೧೦೮ ಜ್ಯೋತಿರ್ಲಿಂಗಗಳಲ್ಲಿ ಈ ಪಾಪನಾಶಿನಿ ಶಿವಲಿಂಗ ಒಂದಾಗಿದೆ. ಈ ಪವಿತ್ರ ಪುಣ್ಯಕ್ಷೇತ್ರಕ್ಕೆ ಬಂದು ತಮ್ಮ ಪಾಪಕರ್ಮಗಳನ್ನು ಕಳೆದುಕೊಂಡು ಪುಣ್ಯವಂತರಾಗುತ್ತಾರೆಂಬ ಪ್ರತೀತಿ ಇದೆ.

ಗುರುನಾನಕ ಝುರಾ-೨

ಕನ್ನಡ ನಾಡಿನ ಉತ್ತರ ತುದಿಯಲ್ಲಿರುವ ಬೀದರ ಜಿಲ್ಲೆಯ ಹಲವು ಸಾಧು-ಸಂತರು ಕವಿ ಸಾಹಿತಿಗಳ ಕಲೆ-ಸಂಸ್ಕೃತಿಗಳ ತವರೂರಾಗಿದೆ. ಸರ್ವಧರ್ಮ ಸಮಭಾವದಿಂದ ಬಾಳುತ್ತಿರುವ ಇಲ್ಲಿನ ಜನರಲ್ಲಿ ಹಿಂದೂ, ಮುಸ್ಲಿಂ, ಸಿಖ್, ಇಸಾಯಿ, ಬೌದ್ಧ, ಲಿಂಗಾಯತ್ (ವೀರಶೈವ) ರೆಲ್ಲರೂ ಪರಸ್ಪರ ಸೌಹಾರ್ದತೆಯಿಂದ ಬಾಳುತ್ತಿದ್ದಾರೆ.

ಮನುಷ್ಯ ಪ್ರಾಪಂಚಿಕವಾಗಿ ಬದುಕುವಾಗ ಹಲವಾರು ಕಷ್ಟ ನಷ್ಟಗಳನ್ನು ಅನುಭವಿಸುತ್ತಾನೆ. ಸ್ವಾರ್ಥಕ್ಕಂಟಿಕೊಂಡೋ ದುರುಳರ ಸಹವಾಸ ದೋಷದಿಂದಲೋ, ತಪ್ಪು ಮಾಡುತ್ತಾ ಬಂದಿರುವುದು ಸಹಜ. ಆ ತಪ್ಪುಗಳು ಪಾಪ ಕರ್ಮಗಳನ್ನು ಕಳೆದುಕೊಳ್ಳಲು ನಾವು ಪುಣ್ಯಕ್ಷೇತ್ರಗಳಿಗೆ ಮೊರೆಹೋಗುತ್ತವೆ. ಹಾಗೆಯೆ ಸತ್ಸಂಗ ಬಯಸಿ ಸದಾಚಾರಿಯಾಗಿ ಬಾಳಿದಾಗ ಮಾತ್ರ ಅಂಥವನಿಗೆ ಸುಖ-ಸಂಪತ್ತು ಪ್ರಾಪ್ತಿ. ಇಂಥ ಸುಖ ಸಾಧನೆ ತನ್ನ ಉದ್ಧಾರಕ್ಕೆ ಸಮಾಜದ ವಿಧಿ ನಿಯಮಗಳನ್ನು ರೂಪಿಸಿಕೊಂಡಿದ್ದಾನೆ.

ವೈದಿಕ, ಬೌದ್ಧ, ಜೈನ, ಶೈವ, ವೀರಶೈವ-ಸಿಖ್ಖ, ಕ್ರೈಸ್ತ, ಇಸ್ಲಾಂ ಪಾರಸಿ ಮೊದಲಾದ ಧರ್ಮದ ಮಹಾಪುರುಷರು ತಮಗಾದ ದಿವ್ಯಾನುಭವವನ್ನು ಧರ್ಮಾಚರಣೆಗಳನ್ನು ಸಿದ್ಧಾಂತಗಳನ್ನು ಭಕ್ತರಿಗೆ ಸನ್ಮಾರ್ಗಗಳ ದಾರಿತೋರಿಸುವುದು. ಅಂತಹ ಮಹಾನಾಪುರುಷರು ನಮ್ಮ ಬೀದರ ಜಿಲ್ಲೆಗೆ ಬಂದು ನಮ್ಮ ನಾಡು ಪವಿತ್ರ ಪುಣ್ಯಕ್ಷೇತ್ರವಾಗಿ ಮಾಡಿದ್ದಾರೆ.

ಜಗತ್ತಿನ ಪ್ರಳಯ ಕಾಲದಲ್ಲಿ ಭಗವಂತನು ಮತ್ಸ್ಯಾವತಾರ ತಾಳಿದನು. ಜಗತ್ತು ಮುಳುಗಿ ಹೋಗುವ ಸಮಯ ಬಂದಾಗ ಕೂರ್ಮನಾಗಿ ಬೆನ್ನ ಮೇಲೆ ಎತ್ತಿ ಹಿಡಿದರುವನು. ಪೂಜೆಗಳನ್ನು ಕಷ್ಟದಲ್ಲಿ ಕೆಡುವಲು ಬಂದವರನ್ನು ವಾಮನ ಅವತಾರ ತಾಳಿ ಪಾತಾಳಕ್ಕೆ ಹಾಕಿ ತುಳಿದನು. ಹೀಗೆ ಸೃಷ್ಟಿಯ ಕ್ರಮವನ್ನು ಮುರಿಯಲು ಬಂದವರನ್ನು ರಾಮಕೃಷ್ಣಾದಿ ಅವತಾರ ತಾಳಿ ಸದೆ ಬಡಿದಿರುವುದನ್ನು ಕೇಳುತ್ತೇವೆ.

ಹಾಗೆಯೆ ನಮ್ಮ ವಾಸ್ತವ ಬದುಕಿನಲ್ಲಿ ಸರಿಪಡಿಸುವುದೇ ಅವತಾರ ಮೂಲೋದ್ದೇಶವಾಗಿರುತ್ತದೆ. ಹಾಗೆಯೇ ಬದುಕಿನ ಮೌಲ್ಯಗಳೆಲ್ಲಾ ನಶಿಸಿ ಹೋಗುತ್ತಿದ್ದಾಗ ಪಾಪಕರ್ಮಗಳು ಹೆಚ್ಚಾದಾಗ, ಮತ್ತು ಭಕ್ತರು ಕಷ್ಟಗಳು ಹೆಚ್ಚಾದಾಗ ಬರಗಾಲ ಬಂದಾಗದೇವರ ಸ್ವರೂಪವಾಗಿ ಮಹಾಪುರುಷರು

ಹುಟ್ಟುತ್ತಿರುತ್ತಾರೆ.ಹೀಗೆ ಹುಟ್ಟಿ ಬಂದ ಮಹಾಪುರುಷರಲ್ಲಿ ಗುರುನಾನಕರು ಇವರು ಸಿಖ ಧರ್ಮವನ್ನು ಸಾರುವ ಗುರುದ್ವಾರ ಬೀದರ ಜಿಲ್ಲೆಯಲ್ಲಿದೆ. ಇದು ಅತ್ಯಂತ ಭವ್ಯವಾದ ಗುರುದ್ವಾರವಾಗಿದೆ. ಇಲ್ಲಿಗೆ ಅನೇಕ ಕಡೆಯಿಂದ ದೇಶ ವಿದೇಶದಿಂದ ಸಹಸ್ರಾರು ಭಕ್ತರು ಬರುತ್ತಾರೆ. ಸಿಖ್ಖ ಭಕ್ತರು ಪವಿತ್ರ ಪುಣ್ಯ ಕ್ಷೇತ್ರವಾಗಿದೆ. ಹಾಗೂ ಎಲ್ಲಾ ಜನಾಂಗ ಜಾತಿಯ ಜನರು ಈ ಗುರುದ್ವಾರಕ್ಕೆ ಬರುತ್ತಾರೆ. ಅಲ್ಲದೇ ಬೀದರ ಜಿಲ್ಲೆಯಲ್ಲಿ ಈ ಗುರುದ್ವಾರ ಇದ್ದಕಾರಣ ಬೀದರ ಜಿಲ್ಲೆಯು ಭಾರತದ ಎರಡನೆ "ಪಂಜಾಬ ಸಾಹೇಬ" ಎಂಬ ಪ್ರತೀತಿಯನ್ನು ಸಹ ಹೊಂದಿದೆ.

ಶ್ರೀ ಗುರುನಾನಕ ಜನಿಸಿದಾಗ ಪೂರ್ವದಲ್ಲಿ ಭಾರತದೇಶದ ವ್ಯವಸ್ಥೆ ಬಹಳ ಕೆಟ್ಟದ್ದಾಗಿತ್ತು. ಧಾರ್ಮಿಕ ಮತ್ತು ರಾಜಕೀಯದಲ್ಲಿ ಬಹಳ ಕೋಲಾಹಲವೆದ್ದಿತ್ತು. ಸಮಯದಲ್ಲಿ ಪಂಜಾಬದಲ್ಲಿ ಇನ್ನು ಬಹಳ ಕೆಟ್ಟ ವ್ಯವಸ್ಥೆಯಿತ್ತು. ಪಂಜಾಬ ಜನರಲ್ಲಿ ಮಾನ ಸನ್ಮಾನ ಮತ್ತು ಏಕತೆ ಇರಲಿಲ್ಲ ಅವರಲ್ಲಿ ಪ್ರಮುಖವಾಗಿ ಎರಡು ಗುಂಪುಗಳಿದ್ದವು ಒಂದು ಗುಂಪಿನವರು ಅನ್ಯಾಯ, ದಬ್ಬಾಳಿಕೆ, ಶೋಷಣೆ ಮಾಡಿ ಜನರನ್ನು ಹೊಡೆದು ಸಾಯಸುತ್ತಿದ್ದರು. ಅಂತಹದರಲ್ಲಿ ಭಾರತೀಯರು ಬದುಕುವುದೇ ಕಷ್ಟವಾಗಿತ್ತು. ಇಂತಹ ಸಮಯದಲ್ಲಿ ಭೂಮಿಯ ಮೇಲೆ ಶಾಂತಿ ಕಾಪಾಡಲು ಗುರುನಾನಕ ಜನಿಸಿದರು.

ಶ್ರೀ ಗುರುನಾನಕ ಜನಿಸಿದು ಕಾರ್ತಿಕ ಪುರ್ಣಿಮೆಯ ಬಿಕ್ರಮ ೧೫೨೬ ರಂದು ಹುಟ್ಟಿದ್ದು ಶ್ರೀ ನಾನಕನ ಸಾಹೇಬ ರಾಯಭೋಮಿ ತಲಡವಂತಿ ಪಾಕಿಸ್ತಾನದಲ್ಲಿ ತಂದೆ ತಾಯಿ ಶ್ರೀ ಮೆಹತಾ ಕಾಲಜಿ ಮತ್ತು ಮಾತಾ ತ್ರಿಪತಾಜಿ

ಬೀದರ ಜಿಲ್ಲೆಯ ಪ್ರವಿತ ಪುಣ್ಯಕ್ಷೇತ್ರವಾಗಿ ಮಾಡಿದ ಶ್ರೀ ಗುರುನಾನಕತಮ್ಮ ಎರಡನೆಯ ಪಾದಯಾತ್ರೆ ಮಾಡುತ್ತಾ ಬೀದರ ಜಿಲ್ಲೆಗೆ ಆಗಮಿಸಿದ್ದರು. ಇಂದಿಗೆ ಐದು ನೂರು ವರ್ಷಗಳು ಆಯಿತು. ಇವರ ಮೊದಲನೆ ಯಾತ್ರೆಯನ್ನು ಪೂರ್ವದಿಕ್ಕಿಗೆ ಕ್ರಿಶ. ೧೫೧೦ ರಿಂದ ೧೫೧೪ ರ ವರೆಗೆ ಕೈಗೊಂಡಿದ್ದರು. ಸುಲ್ತಾನಪುರದಿಂದ ಹೊರಟು ಊರಿಂದ ಊರಿಗೆ ಸಂಚರಿಸುತ್ತ ಜೀವಿಗಳ ಉದ್ದಾರ ಮಾಡುತ್ತ ನಡೆದರು. ಓಂಕಾರೇಶ್ವಢಿಂದ ಬುರಾಂಪುರ ಮಾರ್ಗವಾಗಿ ನಾಂದೇಡಗೆ ಬಂದು ನಂತರ ಬೀದರ ನಗರಕ್ಕೆ ಬಂದರು. ಆಗ ಅಲ್ಲಿ "ಆ ಕಾಲದಲ್ಲಿ ಬಂದಿಗಿವಾಲಾ ಲಾಕಡಶಹಫಕೀರನು

ಇರುತ್ತಿದ್ದನು. ಜಗತ್ತುಗುರು ಬಾಬಾಜೀ ಅವರು ಆತನಿಗೆ ಅನೇಕ ಮರಗಳನ್ನಿಟ್ಟು ಪುನೀತರನ್ನಾಗಿ ಮಾಡಿದರು. ಆ ನಂತರ ಗೋಲಕೂಂಡ ಹೈದ್ರಾಬಾದ ಮಾರ್ಗವಾಗಿ ಬೀದರ ನಗರಕ್ಕೆ ಬಂದು ತಲುಪಿದರು. ಆ ಸಮಯದಲ್ಲಿ ಬೀದರ ಒಂದು ಚಿಕ್ಕ ಹಳ್ಳಿಯಾಗಿತ್ತು. ಅಲ್ಲಿಂದ ಒಂದು ಮೈಲು ದೂರದಲ್ಲಿ ಗುಡ್ಡದ ಕೆಳಗೆ ಡೆರೆ (ಶಿಬಿರ) ಹಾಕಿಕೊಂಡು ಇದ್ದರು. ಅದೆ ಸ್ಥಳದಲ್ಲಿ ಇಂದು ಅಮೃತ ಕುಂಡ ಇದೆ.

ಗಿರಿ–ಕಂದರಗಳಿಂದ ಕೂಡಿದ ಸುಂದರವಾದ ದೃಶ್ಯವನ್ನು ಕಂಡು ಶ್ರೀ ಗುರುನಾಕರು "ಭಾವಿಯರ ಧಾನೆಗೆ" ರ 'ಬಾಬ' ಬಾರಿಸಲು ಹೇಳುತ್ತಾರೆ. ಆಗ ಭಾಯಿ ಮರ್ದಾನೆಯವರ ಸಂಗೀತಕ್ಕೆ ನಾನಕರು ಹಾಡುತ್ತಿದ್ದಾಗ ಮುಸ್ಲಿಂ ಫಕೀರ್ ಜಲಾಲುದ್ದೀನ ಮತ್ತು ಯಾಕುಬಅಲಿ ಕೊಂಡು ತನ್ನೆಲ್ಲ ಜನರನ್ನು ಸಂಗೀತ ಕೇಳಲು ಹೇಳುತ್ತಾನೆ. ಜೊತೆಗೆ ತನ್ನ ಸಂಗಡಿಗರನ್ನು ಉದ್ದೇಶಿಸಿ ಬಂಧುಗಳೆ ನಾವೇಷ್ಟು ಭಾಗ್ಯವಂತರಾಗಿದ್ದೇವೆ ಎಂದರೆ ಸ್ವತ: ಖುದಾವಂದ ಕರಿಂ ಗುರುನಾನಕ ಅವತಾರದಲ್ಲಿ ಬಂದು ನಮ್ಮನ್ನು ಉಪದೇಶಿಸುತ್ತಿದ್ದಾರೆ. ಅವರ ದರ್ಶನಕ್ಕಾಗಿ ದೇವರು ಕೂಡಾ ಇಚ್ಛಿಸುತ್ತಾರೆ. ಅಂತಹವರು ನಮ್ಮ ಹತ್ತಿರ ಬಂದಿದ್ದಾರೆ. ನಡೆಯಿರಿ ನಾವೆಲ್ಲರೂ ಅಲ್ಲಿ ಹೋಗಿನಮ್ಮ ಹೃದಯವನ್ನು ಶಾಂತಗೊಳಿಸೋಣ ಎಂದು ಹೇಳಿದ್ದಾಗ ಎಲ್ಲಾ ಸಂಗಡಿಗರು ಪೀರ ಜಲಾಲುದ್ದೀನನ ಮಾರ್ಗದರ್ಶನದಲ್ಲಿ ಗುರುನಾನಕ ದೇವರ ದರ್ಶನ ಪಡೆಯಲು ಹೋದರು. ದರ್ಶನ ಪಡೆದು ಎಲ್ಲರು ಸಂತೋಷಗೊಂಡರು. ಆಗ ಗುರುಜಿಯವರು ಅವರನ್ನು ಉಪದೇಶಿಸುತ್ತಾ ಹಿತಾವಾಣಿಗಳನ್ನು ಹೇಳಿದರು.

ಆಗ ಫಕೀರ್ ಪೀರ್ ಜಲಾಲುದ್ದೀನ್ ಹೀಗೆ ಹೇಳುತ್ತಾರೆ.... ಹೇ ಧರ್ಮಾತ್ಮನೆ ನೀವು ಉಪದೇಶ ಮಾಡಿ ನಮ್ಮೆಲ್ಲರ ಆತ್ಮವನ್ನು ಶಾಂತಗೊಳಿಸಿದ್ದಿರಿ. ತಮ್ಮ ದರ್ಶನದಿಂದ ನಮಗೆ ಅಲ್ಲಾ ತಾಲಾರ ದರ್ಶನವಾದಂತಾಯಿತು. ಬಹಳ ದಿನಗಳಿಂದ ನಾವು ಕೇಳುತ್ತಿದ್ದೇವೆ. ನೀವು ದಕ್ಷಿಣ ಪಡೆಗೆ ಯಾತ್ರೆ ಕೈಗೊಂಡು ಪಾಪಾತ್ಮರನ್ನು ಉದ್ದರಿಸುತ್ತಿದ್ದಿರಿ. ಇಂದು ತಮ್ಮ ದರ್ಶನ ಪಡೆದು ನಾವು ಪಾವನರಾದೇವು ಎಂದು ಹೇಳಿದರು.

ಬೀದರ ಸುತ್ತಮುತ್ತಲಿನ ಅನೇಕ ಜನರು ಅನೇಕ ಕಡೆಯಿಂದ ಬಂದು ಶ್ರೀ ಗುರು ನಾನಕ ದರ್ಶನ ಪಡೆದು ಅಲ್ಲಿ ಭಗವತ ಕೀರ್ತನೆಯನ್ನು ಆರಂಭಿಸಿದರು. ಇಡೀ ಪ್ರದೇಶವು ಭಜನೆ ಕೀರ್ತನೆಗಳ ಧ್ವನಿಯಿಂದ ತುಂಬಿ ತುಳಕತೊಡಗಿತ್ತು. ಸುತ್ತ ಮುತ್ತಲಿನ ದೂರ ಪ್ರದೇಶಗಳಿಂದ ಎಲ್ಲಾ ಸಾಧು,

ಸಂತರು ಭಕ್ತಾದಿಗಳು ದರ್ಶನಕ್ಕಾಗಿ ಬರತೊಡಗಿದರು. ಈ ಭೂಭಾಗದ ಭಾಗ್ಯ ಉದಯಿಸಿತೆಂದು ಕೊಂಡಾಡಿದರು.

ಬೀದರನಲ್ಲಿ ಎಲ್ಲಿ ನೋಡಿದರೂ ಉಪ್ಪು ನೀರು ಕಾಣಿಸುತ್ತಿದ್ದವು. ಹಾಗೂ ೧೦೦ ರಿಂದ ೧೫೦ ಅಡಿ ಅಗೆದರೂ ಕೂಡ ನೀರು ದೊರೆಯುತ್ತಿರಲಿಲ್ಲ. ಇದರಿಂದ ಇಲ್ಲಿ ಜನರು ಮತ್ತು ದನಕರುಗಳು ಮತ್ತು ಪಕ್ಷಿಗಳು ಸಿಹಿ ನೀರಿಗಾಗಿ ಹಪ ಹಪಿಸುವಂತಾಗಿತ್ತು. ಹೀಗಾಗಿ ಬೀದರದ ಎಲ್ಲಾ ಸಂತರು ಫಕೀರರು ಮತ್ತು ಭಕ್ತಾದಿಗಳು ಸೇರಿ ಶ್ರೀ ಗುರುನಾನಕ ದೇವರನ್ನು ನೀವು ಎಲ್ಲ ಕಡೆಗೂ ಯಾತ್ರೆ ಕೈಗೊಂಡು ಜನರ ಉದ್ಧಾರ ಮಾಡಿದ್ದಿರಿ. ಅದಕ್ಕೆ ಇಲ್ಲಿ ಬಂದು ಝಿರಾ ತೆಗೆದು ಉಪ್ಪು ನೀರಿನ ಸ್ಥಳದಲ್ಲಿ ಸಿಹಿ ನೀರು ಬರುವಂತೆ ಮಾಡಬೇಕು ಎಂದು ವಿನಂತಿಸಿಕೊಂಡರು.

ಆಗ ಅಲ್ಲಿನೆರದ ಸಾದು ಸಂತರನ್ನುದ್ದೇಶಿಸಿ ಉಪದೇಶಿಸುತ್ತಾ ಬಾಬಾಜಿಯುವರು ಸಂತರಾದ ಜಲಾಲುದ್ದೀನ್ ಹಾಗೂ ಸಂತ ಯಾಕುಬ ಅಲಿಯವರ ಪ್ರಾರ್ಥನೆಯನ್ನು ಮನ್ನಿಸಲಾಗಿದೆ ಎಂದು ಬಾಬಾನವರು ಸಂತ ಕರತಾರ ಅವರಿಗೆ ಸೂಚಿಸುತ್ತಾ ತಮ್ಮ ಚರಣ ಕಮಲ ಹೆಬ್ಬೆರಳಿನಿಂದ ಗುಡ್ಡದಿಂದ ಒಂದು ಕಲ್ಲು ಬಂಡೆಯನ್ನು ಸರಿಸಿದರು. ಆಗ ಕಲ್ಲು ಬಂಡೆ ಸರಿಸಿದ ಕೂಡಲೇ ಅಲ್ಲಿ ಸಿಹಿ ನೀರಿನ ತಿಳಿ ನೀರಿನ ಕಾರಂಜಿಯೊಂದು ಚಿಮ್ಮಿ ಬಂದಿತ್ತು. ಇಂತಹ ಆಶ್ಚರ್ಯ ದೃಶ್ಯವನ್ನು ನೋಡಿದ ಅಲ್ಲಿ ನೆರೆದಿದ್ದ ಸಾಧು-ಸಂತರು ಭಕ್ತಾದಿಗಳು ಸಂತೋಷದಿಂದ ಧನ್ಯ ಗುರು ನಾನಕ / ಧನ್ಯ ಗುರು ನಾನಕ / ಎಂದು ಒಮ್ಮತದಿಂದ ಉದ್ಗರಿಸಿದರು ಹಾಗೂ ಶ್ರೀ ಗುರುನಾನಕ ಚರಣಗ್ಳ ಮೇಲೆ ಬಿದ್ದು ದೀರ್ಘವಾದ ನಮಸ್ಕಾರ ಮಾಡಿದರು. (ಈ ಘಟನೆ ಮಾರ್ಚ ಅಥವಾ ಏಪ್ರೀಲ್ ಕ್ರಿ.ಶ. ೧೫೧೨ ರಲ್ಲಿ ಜರುಗಿತ್ತು.

ಅಂದಿನಿಂದ ಇಂದಿನವರೆಗೆ ನಾನಕ ಝುರಾದಲ್ಲಿ ಕಾರಂಜಿಯು ನಿರಂತರವಾಗಿ ಚಿಮ್ಮುತ್ತಲೆ ಇದೆ. ಎಲ್ಲಿಯವರೆಗೆ ಈ ಜಗತ್ತು ಇರುತ್ತದೆಯೋ ಅಲ್ಲಿಯ ವರೆಗೆ ಈ ಝುರನಾ ಹರಿಯುತ್ತಿರುತ್ತದೆ ಎಂದು ನಾನಕರು ಹೇಳಿದರು. ಆದ್ದರಿಂದ ಬೀದರ ಜಿಲ್ಲಾ ನಾನಕ ಝುರಾ ಇದರಲ್ಲಿ ಯಾವಾಗಲೂ ನೀರು ಇರುತ್ತವೆ. ಇಲ್ಲಿ ನೀರು ಎಂದೂ ಬತ್ತಿ ಹೋಗಿಲ್ಲ ಗುರು ನಾನಕ ಹೆಸರಿನಲ್ಲಿ ಪ್ರಸಿದ್ಧವಾಗಿದೆ.

ಗುರು ನಾನಕದ್ವಾರ ಅತ್ಯಂತ ಸುಂದರ ಭವ್ಯವಾಗಿದೆ. ಗುರುದ್ವಾರದಲ್ಲಿ ಪ್ರವೇಶಸಿಸುವಾಗ ಎಲ್ಲ ಜನಾಂಗದ ಜನರು ಕಾಲು ತೊಳೆದುಕೊಂಡು ನಂತರ

ತಲೆಯ ಮೇಲೆ ಬಟ್ಟೆ ಹಾಕೊಳ್ಳಲೇಬೇಕು ಇದು ಇಲ್ಲಿನ ನಿಯಮವಾಗಿದೆ ತಲೆಯ ಮೇಲೆ ಯಾವುದೇ ಬಟ್ಟೆ ಇಲ್ಲದವರನ್ನು ಯಾರಿಗೂ ಒಳಗಡೆ ಬಿಡುವುದಿಲ್ಲ. ಹಾಗೂ ದ್ವಾರದ ಹತ್ತಿರದಲ್ಲೇ ನೀರಿನ ವ್ಯವಸ್ಥೆ ಇದೆ. ಎಲ್ಲ ಜನರು ಈ ನೀರಿನಲ್ಲಿ ಕಾಲಿಟ್ಟು ಮುಂದಕ್ಕೆ ಗುರುದ್ವಾರದಲ್ಲಿ ಪ್ರವೇಶಿಸಬೇಕಾಗುತ್ತದೆ. ಗುರುದ್ವಾರದಲ್ಲಿ ಯಾವಾಗಲು ಪ್ರಾರ್ಥನೆ ಮಾಡುತ್ತಲೆ ಇರುತ್ತಾರೆ. ಹಾಗೂ ಖಡ್ಗ ಇತರ ವಸ್ತುಗಳಿಗೆ ಹೆಚ್ಚಿನ ವಿಶೇಷ ಪೂಜೆ ಸಲ್ಲಿಸುತ್ತಾರೆ. ಇಲ್ಲಿ ಅಂದರೆ ಗುರುದ್ವಾರದಲ್ಲಿ ಸದಾ ಯಾವಾಗಲೂ ಹಾಡುತ್ತಾ ಭಾರಿಸುತ್ತಾ ಇರುತ್ತಾರೆ. ಬಂದ ಜನರಿಗೆ ದಿನಾಲು ದೇವರ ಪ್ರಸಾದ ಕೊಡುತ್ತಾರೆ. ಜೋಗ ಸಿಂಗ ಉದ್ಯಾನವನ ಅತ್ಯಂತ ಸುಂದರವಾಗಿದೆ ಮತ್ತು "ಅಮೃತಕುಂಡ" ಇವೆ. ಇದರಲ್ಲಿ ನೀರು ಸದಾ ಇರುತ್ತವೆ. ಇದು ಗುರುನಾನಕ ಅವರು ತಮ್ಮ ಪಾದದಿಂದ ಬಂಡೆಯನ್ನು ಸರಿಸಿದ್ದಾಗ ಅಲ್ಲಿಂದ ಸಿಹಿ ನೀರಿನ ಕಾರಂಜಿ ಚಿಮ್ಮಿತ್ತು. ಅದೆ ಈ ಅಮೃತ ಕುಂಡ ಆಗಿದೆ. ಇಲ್ಲಿ ಅನೇಕ ಜನರು ಬಂದು ಈ ಅಮೃತಕುಂಡ ನೀರಿನಲ್ಲಿ ನಾಣ್ಯಗಳನ್ನು ಹಾಕುತ್ತಾರೆ. ಹಾಗೂ ತಮ್ಮ ಮನಸ್ಸಿನಲ್ಲಿ ಇದ್ದದ್ದನ್ನು ಬೇಡಿಕೊಳ್ಳುತ್ತಾರೆ. ಹೀಗೆ ನಾಣ್ಯಹಾಕಿ ಬೇಡಿಕೊಂಡರೆ ತಮ್ಮ ಕಾರ್ಯಪೂರ್ಣಗೊಳ್ಳುತ್ತವೆ ಎಂದು ಜನರ ನಂಬಿಕೆಯಾಗಿದೆ. ಇಂದು ಕೂಡ ಇದು ನೋಡಬಹುದು. ಈ ಗುರುದ್ವಾರದ ಹತ್ತಿರದಲ್ಲಿ ಗುರುನಾನಕರ ಇತಿಹಾಸದ ಮ್ಯುಜಿಯಂ ಇದೆ. ಇದರಲ್ಲಿ ಗುರುನಾನಕರ ಜೀವನದ ಚಿತ್ರಗಳಿವೆ. ಇಲ್ಲಿಗೆ ಬಂದ ಜನರಿಗೆ ಎಲ್ಲಾ ರೀತಿಯ ವ್ಯವಸ್ಥೆ ಕೂಡ ಇದೆ.

ಈ ತಾಣ ಸಿಖ್ಖ ಜನರ ಪವಿತ್ರ ಪುಣ್ಯಕ್ಷೇತ್ರ. ಆದರೆ ಈವಾಗ ಎಲ್ಲಾ ಜನಾಂಗದ ಜನರು ಎಲ್ಲಾ ರಾಜ್ಯ ಮತ್ತು ದೇಶ ವಿದೇಶ ಅನೇಕ ಯಾತ್ರಿಕರು ಇಲ್ಲಿಗೆ ಬಂದು ಈ ಝುರಾದಲ್ಲಿಯ ಸಿಹಿ ನೀರನ್ನು ಬಾಟಲ್‌ಗಳಲ್ಲಿ ತುಂಬಿಕೊಂಡು ತೀರ್ಥರೂಪದಲ್ಲಿ ಬಳಸುತ್ತಾರೆ. ಈ ನೀರು ತುಂಬಾ ಪವಿತ್ರವಾಗಿದೆ. ಈ ನೀರು ಕುಡಿದರೆ ರೋಗ ಕಾಯಿಲೆಗಳು ಕೂಡಾ ಗುಣಹೊಂದುತ್ತವೆ. ಎಂಬ ನಂಬಿಕೆ ಇದೆ. ಹೀಗಾಗಿ ಇದು ಒಂದು ಬೀದರ ಜಿಲ್ಲೆಯ ಪ್ರಮುಖವಾದ ಪುಣ್ಯಕ್ಷೇತ್ರವಾಗಿದೆ.

ನರಸಿಂಹ ಝುರಣಿ-೩

ಬೀದರ ಜಿಲ್ಲೆಯ ಪುಣ್ಯಕ್ಷೇತ್ರಗಳಲ್ಲಿ ನರಸಿಂಹ ಝುರಣಿ ಕೂಡಾ ಒಂದು ಪ್ರಮುಖವಾದ ಪುಣ್ಯಕ್ಷೇತ್ರವಾಗಿದೆ. ಈ ಕ್ಷೇತ್ರವು ಐತಿಹಾಸಿಕ ಹಿನ್ನೆಲೆ ಮತ್ತು ಪೌರಾಣಿಕ ಕಥೆ ಹೊಂದಿದೆ. ಈ ಕ್ಷೇತ್ರದ ಬಗ್ಗೆ ಇಡಿಯಾಗಿ ಹೀಗೆ ನೋಡಬಹುದು.

ನಗರದಿಂದ ದಕ್ಷಿಣಕ್ಕಿರುವ ಶ್ರೀ ನರಸಿಂಹ ಝುರಣಿ ಬೀದರ ನಗರದಿಂದ ೨ ಕಿ.ಮೀ. ಅಂತರದಲ್ಲಿದೆ. ಇದು ಗುಹಾಂತರ ದೇವಾಲಯವಾಗಿದೆ. ಸುರಂಗಮಾರ್ಗದಂತಿರುವ ಗವಿಯಲ್ಲಿ ಈ ದೇವಾಲಯ ಅಡಗಿದೆ. ಬೀದರ ಜಿಲ್ಲೆಯಲ್ಲಿ ಅತ್ಯಂತ ಪವಿತ್ರ ಕ್ಷೇತ್ರ ಸ್ಥಳವಾಗಿದೆ. ಹಿರಣ್ಯಕಶ್ಯಪನ ಸಂಹಾರ ಮಾಡಿದ ವಿಷ್ಣು ಆನಂತರದಲ್ಲಿ ಝುರಾಸುರನೆಂಬ ರಕ್ಕಸನನ್ನು ಕೊಂದು ಆ ರಕ್ಕಸನ ಕೊನೆಯ ಇಚ್ಛೆಯ ಪ್ರಕಾರ ಈ ಗುಹೆಯಲ್ಲಿ ನರಸಿಂಹ ದೇವರು ಬಂದು ನೆಲೆಸಿದ್ದಾನೆಂಬ ಪೌರಾಣಿಕ ಕಥೆ ಇದೆ.

ಪ್ರಾಚೀನ ಕಾಲದಲ್ಲಿ ಈ ಕ್ಷೇತ್ರಕ್ಕೆ ದಂಡಕಾರ್ಣ್ಯಕ್ಷೇತ್ರ ಎಂದು ಕರೆಯುತ್ತಿದ್ದರು. ಈ ಸ್ಥಳದಲ್ಲಿ ಮೊದಲು ದೈತ್ಯ (ಅಸುರ) ಇರುತ್ತಿದ್ದನು. ಈತನ ಹೆಸರು 'ಝುರಾಸುರ' ಆಗಿತ್ತು. ಇತನು ಶಿವನ ಭಕ್ತನಾಗಿದ್ದನು. ತನ್ನ ಭಕ್ತಿಯಿಂದ ಶಿವನನ್ನು ಮೆಚ್ಚಿಸಲು ಆತನು ಒಂದು ಸುಂದರವಾದ ಪರ್ವತವನ್ನು ಆಯ್ಕೆಮಾಡಿಕೊಂಡನು. ಅಲ್ಲಿ ಒಂದು ಗವಿ ಮಾಡಿದನು. ಆತನು ಒಂದು ಸುಂದರವಾದ ಪರ್ವತವನ್ನು ಆಯ್ಕೆ ಮಾಡಿಕೊಂಡನು. ತನ್ನ ಕೈ ಬೆರಳಿನ ಉಗುರುಗಳಿಂದ ಕ್ಷಣದಲ್ಲಿ ಕೆದರಿ ಮಾಡಿದನು. ನಂತರ ಆ ಗವಿಯಲ್ಲಿ ಶಿವನ ಆರಾಧನೆ ಮಾಡಲು ಹತ್ತಿದ್ದನು. ಇತರನ ಭಕ್ತಿಗೆ ಮೆಚ್ಚಿ ಇತನ ಆರಾಧನೆಗೆ ಶಿವನು ಮೆಚ್ಚಿ ಈ ಗುಹೆಯಲ್ಲಿ ಶಿವನ ಆರಾಧನೆ ಮಾಡಲು ಹತ್ತಿದ್ದನು. ಇತನ ಭಕ್ತಿಗೆ ಮೆಚ್ಚಿ ಇತನ ಆರಾಧನೆಗೆ ಶಿವನು ಮೆಚ್ಚಿ ಈ ಗುಹೆಯಲ್ಲಿ ಪ್ರತ್ಯಕ್ಷನಾದನು.

ತನ್ನ ಭಕ್ತನಾದ ಝುರಾಸುರನಿಗೆ ಶಿವನು ನಿನಗೆ ಬೇಕಾದ ವರವನ್ನು ಕೇಳು ನಾನು ಕೊಡುತ್ತೇನೆ ಎಂದನು. ಆಗ ಝುರಾಸುರನು ಶಿವನಿಂದ ವರವನ್ನು ಕೇಳಿ ಪಡೆದನು. ಶಿವನ ವರದಿಂದ ಝುರಾಸುರ ಶಕ್ತಿವಂತನಾಗಿ ಶಿವಭಕ್ತನಾದ ಕಾರಣ ಹರಿ ಭಕ್ತರ ಮೇಲೆ ಅತ್ಯಾಚಾರ ಮಾಡುತ್ತಿದ್ದನು. ಅಸುರನಾದ ಕಾರಣ ಅಲ್ಲಿ ಪ್ರತಿದಿನ ರಾತ್ರಿ ಹಗಲು ಹರಿಭಕ್ತರ ಮೇಲೆ

ಅತ್ಯಾಚಾರ ಮಾಡುತ್ತಿದ್ದನು. ಎಲ್ಲ ಹರಿ ಭಕ್ತರು ಆತನ ಅತ್ಯಾಚಾರಕ್ಕೆ ಚಿಂತಿಸಿದರು. ಅವರಿಗೆ ಆಕಾಶದಿಂದ ಕೇಳಿ ಬಂತು. ಚಿಂತಿಸಬೇಡಿ ನಿಮ್ಮನ್ನು ರಕ್ಷಿಸಲು ಶ್ರೀ ವಿಷ್ಣು ಬರುತ್ತಾನೆ. ಆತನ ಪ್ರಾರ್ಥನೆ ನೀವು ಸದಾಮಾಡಿರಿ ಎಂದು ಕೇಳಿಬಂದಿತ್ತು. ಅದರಿಂದ ಎಲ್ಲಾ ಭಕ್ತರು ಶ್ರೀ ಹರಿ ವಿಷ್ಣುವಿನ ಪ್ರಾರ್ಥನೆ ಮಾಡಿದರು. ಇವರ ಪ್ರಾರ್ಥನೆ ಶ್ರೀ ವಿಷ್ಣು ಕೇಳಿ ವಿಷ್ಣು ದೇವರು ಈ ದೈತ್ಯ ಝುರಾಸುರನ ಅತ್ಯಾಚಾರಕ್ಕೆ ಕ್ರೋಧಗೊಂಡು ಆಗ ಶ್ರೀಹರಿ ವಿಷ್ಣು ದೇವರು ಚತುರ್ಥ ಅವತಾರ ಶ್ರೀ ನರಸಿಂಹ ಅವತಾರ ಧಾರಣ ಮಾಡಿದರು. ಮತ್ತು ಹಿರಣ್ಯ ಕಶ್ಯಪನನ್ನು ಸಂಹಾರ ಮಾಡಿದರು. ಅದೇ ಅವತಾರದಲ್ಲಿ ಅದೇ ಸಮಯದಲ್ಲಿ ಈ ಗವಿಯಲ್ಲಿ ನರಸಿಂಹ ದೇವರು ಪ್ರಕಟವಾದರು. ಯಾವಾಗ ಆ ಗವಿಯಲ್ಲಿ ನರಸಿಂಹ ದೇವರು ಪ್ರಕಟವಾದರು. ಅದೆ ಸಮಯದಲ್ಲಿ ಝುರಾಸುರ ಶಿವನ ಆರಾಧನೆ ಮಾಡುತ್ತಿದ್ದನು. ಝುರಾಸುರನ ಆರಾಧನೆ ಪೂರ್ಣಗೊಂಡ ನಂತರ ನರಸಿಂಹ ದೇವರು ಆತನಿಗೆ ನಾನು ಸಮಸ್ತ ಅಸುರ ಜಾತಿಯ ಅಂತ್ಯ ಮಾಡುತ್ತಿದ್ದೇನೆ ನಾನು ನಿನ್ನ ಕೂಡ ಅಂತ್ಯ ಮಾಡುತ್ತೇನೆ ಎಂದರು. ಝುರಾಸುರ ಶಿವನ ವರದಿಂದ ಶಕ್ತಿವಂತನಾಗಿದ್ದನು. ನರಸಿಂಹ ದೇವರು ಝುರಾಸುರನ ಮೇಲೆ ಯುದ್ಧ ಪ್ರಾರಂಭಿಸಿದರು.

ಯುದ್ಧ ಮಾಡಿ ಝುರಾಸುರನನ್ನು ಸೋಲಿಸಿದರು. ಝುರಾಸುರನ ಸೋಲಿಗೆ ಕಾರಣ ಆತನು ಮಾಡಿದ ಪಾಪದ ಕಾರ್ಯವೆಂದರೆ ಹರಿಭಕ್ತರ ಅತ್ಯಾಚಾರ ಅಂತ್ಯ. ಇದು ಒಂದೇ ಆತನ ತಪ್ಪು ಕಾರ್ಯ ಆಗಿತ್ತು. ಝುರಾಸುರನ ಪುಣ್ಯಕಾರ್ಯವೆಂದರೆ ಶಿವನ ಭಕ್ತಿ ಆಗಿತ್ತು ಶಿವನ ಭಕ್ತಿ ಆತನನ್ನು ಯಾವಾಗಲೂ ಕಾಪಾಡುತ್ತಿತ್ತು. ಹರಿ ಭಕ್ತರ ಅತ್ಯಾಚಾರದಿಂದ ಇತನಿಗೆ ಅಂತ್ಯ ಬಂದಿತ್ತು.

ಶ್ರೀ ಹರಿಯ ಝುರಾಸುರನನ್ನು ಸೋಲಿಸಿ, ನಂತರ ಶಿವನ ಭಕ್ತನಾದ ಕಾರಣ ಆತನನ್ನು ಶ್ರೀ ಹರಿವಿಷ್ಣು ದೇವರು ಝುರಾಸುರನಿಗೆ "ನಿನ್ನ ಕೊನೆಯ ಇಚ್ಛೆ ಏನಿದೆ ಅದು ಅದು ನೀನು ನನಗೆ ವರ ಕೇಳು ನಾನು ನಿನ್ನ ಇಚ್ಛೆ ಪೂರ್ಣ ಮಾಡುತ್ತೇನೆ" ಎಂದರು. ಆಗ ಝುರಾಸುರನು ಶ್ರೀ ನರಸಿಂಹ ದೇವರ ಪಾದ ಹಿಡಿದು ವರ ಕೇಳಿದನು. ಏನೆಂದರೆ "ಎಲ್ಲಿಯ ವರೆಗೆ ಸೂರ್ಯ ಚಂದ್ರ ಇರುವರೋ ಅಲ್ಲಿಯ ತನಕ ತಾವು ಇಲ್ಲಿ ಈ ಸ್ಥಳದಲ್ಲಿ ಸ್ಥಾಪಿತವಾಗಿದ್ದು, ನಿಮ್ಮ ಹೆಸರಿನ ಜೊತೆಯಲ್ಲಿ ನನ್ನ ಹೆಸರು ಅಮರ ಮಾಡಿರಿ" ಎಂದು ವರ ಕೇಳಿದನು. ಆಗ ನರಸಿಂಹ ದೇವರು ತಥಾಸ್ತು ಎಂದರು ಮತ್ತು ಝುರಾಸುರನ

ಅಂತ್ಯ ಮಾಡಿದರು. ಆ ಅಸುರರ ರಕ್ತವನ್ನು ನಿರ್ಮಲ ಪಾವನ ನೀರಿನಲ್ಲಿ ಅದೆ ಸ್ಥಳದಲ್ಲಿ ಪರಿವರ್ತನೆ ಮಾಡಿದರು. ಇಲ್ಲಿ ಸೂರ್ಯ ಚಂದ್ರ ಇರುವವರೆಗೆ ಶ್ರೀ ವಿಷ್ಣುದೇವರು ಈ ಗವಿಯಲ್ಲಿ ಸ್ಥಾಪಿತವಾದರು. ಅಂದಿನಿಂದ ಇಂದಿನ ವರೆಗೆ ಇಲ್ಲಿ ಝುರಿ ಸದಾ ಹರಿಯುತ್ತದೆ. ಝುರಾಸುರನ ಹೆಸರಿನಿಂದ ಈ ಸ್ಥಳ "ಝುರಣಿ ನರಸಿಂಹ" ಕ್ಷೇತ್ರ ಆಯಿತು.

ಹೀಗೆ ಒಬ್ಬರಿಂದ ಒಬ್ಬರಿಗೆ ಈ ಘಟನೆ ತಿಳಿದು ಅಂದಿನಿಂದ ಇಂದಿನ ವರೆಗೆ ಈ ಸ್ಥಳ ಪವಿತ್ರ ನರಸಿಂಹ ಕ್ಷೇತ್ರ ಸ್ಥಳವಾಗಿದೆ. ಇಲ್ಲಿ ಇಂದು ಕೂಡ ನೀರಿನ ದೃಶ್ಯ ಕಂಡರೆ ಆಶ್ಚರ್ಯವಾಗುತ್ತದೆ. ಈ ನೀರು ಗವಿಯ ಒಳಗಡೆ ದೇವರಿಂದ ಹರಿಯುತ್ತ ಹೊರಗಡೆ ಆಕಳ ಮುಖದಿಂದ ಹರಿಯುತ್ತ ಹೊರಗಡೆ ಹರಿಯುತ್ತವೆ. ಈ ಆಕಳ ಮುಖದಿಂದ ಬರುವ ನೀರಿನಲ್ಲಿ ಜನರು ಸ್ನಾನ ಮಾಡುತ್ತಾರೆ. ಗವಿಯ ಒಳಗಡೆ ಇರುವ ನೀರು ವ್ಯಕ್ತಿಯ ಎದೆಯ ಮಟ್ಟಕ್ಕೆ ಇರುತ್ತವೆ. ಹೆಚ್ಚಿಗೆ ಇರುವುದಿಲ್ಲ. ಮಳೆಗಾಲ, ಚಳಿಗಾಲ, ಬೇಸಿಗೆ ಯಾವ ಕಾಲ ಇದ್ದರೂ ನೀರಿನ ಮಟ್ಟ ಅಷ್ಟೇ ಇರುತ್ತದೆ.

ಈ ನೀರಿನಲ್ಲಿ ಕಪ್ಪೆ, ಮೀನು, ಸರ್ಪ ಇವೆ ಎಂದು ಹೇಳುತ್ತಾರೆ. ಯಾರಾದರು ಏನಾದರೂ ತಪ್ಪು ಮಾಡಿದರೆ ಅವರ ಕಾಲಲ್ಲಿ ಅವು ಬರುತ್ತವೆ ಎಂದು ಹೇಳುತ್ತಾರೆ. ಆದರೆ ಯಾರಿಗೂ ಏನು ಮಾಡುವುದಿಲ್ಲ ಹಾಗೂ ಈ ಗವಿಯಲ್ಲಿ ಅನೇಕ ಬಾವುಲಿಗಳಿವೆ. ಇವು ಗವಿಯ ತುಂಬ ಜೋತು ಬೀಳುತ್ತವೆ. ಯಾರಿಗೂ ಏನು ಮಾಡುವುದಿಲ್ಲ. ಹಾಗೂ ಗವಿಯ ಒಳಗಡೆ ಆಕ್ಸಿಜನ್ ವ್ಯವಸ್ಥೆ ಮಾಡಲಾಗಿದೆ. ಹಾಗೂ ಗವಿಯ ಒಳಗಡೆ ಅನೇಕ ಲೈಟ್ಸ್‌ಗಳು ಇವೆ. ನೀರಿನ ಒಳಗಡೆಯಿಂದಲೇ ನಡೆದುಕೊಂಡು ಗವಿಯ ಒಳಗೆ ಗರ್ಭಗುಡಿಯ ದೇವರ ತನಕ ಹೋಗಬೇಕಾಗುತ್ತದೆ. ಈ ನೀರು ಸದಾ ಹರಿಯುತ್ತಲೇ ಇರುತ್ತವೆ.

ಇಲ್ಲಿ ದೇವರ ಮೂರ್ತಿ ಮೂರು ಸ್ಥಳದಲ್ಲಿ ಇದೆ.

೧. ಗವಿಯ ಒಳಗಡೆ (ಚರಣ ಪಾದುಕೆ).
೨. ಗವಿಯ ನೀರಿನ ಹೊರಗಡೆ (ಬಾದಾಮಿ ಆಕಾರದ ಶರೀರ).
೩. ನರಸಿಂಹ ದೇವರ ಮುಖ (ದ್ವಾರದ ಹತ್ತಿರ ಹೊರಗಡೆ).

ಗವಿಯ ಹತ್ತಿರದಲ್ಲೆ ಸ್ವಲ್ಪ ಕೆಳಗಡೆ ಮಾಣಿಕ ಪ್ರಭುವಿನ ಗದ್ದುಗೆ ಅವರು ಇದ್ದ ಸ್ಥಳವಿದೆ. ಮತ್ತು ಯಾವ ಸ್ಥಳದಲ್ಲಿ ಸರ್ಪವು ಮಾಣಿಕ ಪ್ರಭುವಿಗೆ ರಸ್ತೆ ತಡೆದಿತ್ತು. ಅಲ್ಲಿ ಕೂಡ ಇಂದು ಒಂದು ಸಣ್ಣ ಮಂದಿರ

ಇದೆ. ಹಾಗೂ ಮಾಣಿಕ ಪ್ರಭುವಿನ ಗದ್ದುಗೆಯ ಹತ್ತಿರದಲ್ಲೇ ನವಗ್ರಹದ ಸಣ್ಣ ಮಂದಿರವಿದೆ. ಅದರ ಹತ್ತಿರದಲ್ಲೇ ಆಚಿಜನಯ್ಯನ ಮಂದಿರವಿದೆ. ಹಾಗೂ ಈ ಮಂದಿರಗಳ ಸುತ್ತಲೂ ನಾಲ್ಕೈದು ಕಲ್ಲಿನ ಲಿಂಗಗಳಿವೆ.

ಅನೇಕ ಕಡೆಯಿಂದ ಅನೇಕ ಜನರು ಈ ಕ್ಷೇತ್ರಕ್ಕೆ ಬರುತ್ತಾರೆ. ಯಾವಾಗಲು ಬರುತ್ತಾರೆ. ಎಲ್ಲಿ ಜಾತಿ ಜನಾಂಗದವರು ಈ ಕ್ಷೇತ್ರಕ್ಕೆ ಬರುತ್ತಾರೆ. ಇಲ್ಲಿ ಅನೇಕ ಮದುವೆ ಕೂಡಾ ಆಗುತ್ತವೆ. ಇಲ್ಲಿ ಮಕ್ಕಳ ಜಾವಳ ಕೂಡ ತೆಗೆಯುತ್ತಾರೆ ಹಾಗೂ ಅನೇಕ ಜನರು ತಮ್ಮ ಹರಕೆ ಹೊತ್ತು ಅದು ಪೂರ್ಣಗೊಂಡ ನಂತರ ಈ ಕ್ಷೇತ್ರಕ್ಕೆ ಬಂದು ತಮ್ಮ ಹರಕೆ ದೇವರಿಗೆ ಮುಟ್ಟಿಸುತ್ತಾರೆ. ಇಲ್ಲಿ ವಿಶೇಷವಾಗಿ ಮದುವೆಯಾಗದವರು ಮತ್ತು ಮಕ್ಕಳಿಲ್ಲದವರು ಹೆಚ್ಚಾಗಿ ಹರಕೆ ಹೊತ್ತುತ್ತಾರೆ. ಮತ್ತು ಜನರ ಎಲ್ಲಾ ಕಷ್ಟಗಳಿಗೆ ಪರಿಹಾರ ಸಿಕ್ಕುತ್ತದೆ ಎಂಬ ನಂಬಿಕೆಯಿಂದ ಜನರು ತುಂಬಾ ಬರುತ್ತಾರೆ. ಇಲ್ಲಿ ನೀರಿನಿಂದ ಸ್ನಾನ ಮಾಡಿದರೆ ಪಾಪ ಕಳೆಯುತ್ತದೆ ಮತ್ತು ಎಲ್ಲಾ ರೋಗ ರುಜಿಗುಗಳು ಹೋಗುತ್ತವೆ ಎಂಬ ನಂಬಿಕೆ ಹಿಂದಿನಿಂದಲೂ ಬಂದ ಸಂಪ್ರದಾಯಿ ಇದು ಈಗಲೂ ಹೆಚ್ಚಿನ ಮಟ್ಟಿಗೆ ಜನರು ನಂಬಿಕೆಯಿಂದ ಈ ಕ್ಷೇತ್ರಕ್ಕೆ ಬರುತ್ತಾರೆ.

ಮದುವೆಯಾದ ನಂತರ ವಧು-ವರರು ಮೊದಲು ಈ ನರಸಿಂಹ ಕ್ಷೇತ್ರಕ್ಕೆ ಬರುವ ರೂಢಿ ಸಂಪ್ರದಾಯ ಇಲ್ಲಿದೆ. ಈ ಗವಿ ತಗ್ಗಿನಲ್ಲಿದೆ. ಮತ್ತು ಈ ಗವಿಯ ಹತ್ತಿರವೆ ಒಂದು ವಿಶೇಷ ವಾಸನೆ ಹೊಂದಿರುವ ಕ್ಯಾದಗಿ ಬನವಿತ್ತು. ಆದರೆ ಇದರ ಪ್ರಮಾಣ ಸ್ವಲ್ಪ ಕಡಿಮೆಯಾಗುತ್ತಿದೆ. ಸುತ್ತಲು ಗಿಡಗಳಿಂದ ತುಂಬಿಕೊಂಡಿದೆ. ಮನಮೋಹಕ ಹೊಂದಿರುವ ಪರಿಸರ ಹೊಂದಿದೆ. ಆದರೆ ಈವಾಗ ಈ ಪರಿಸರ ಕಡಿಮೆಯಾಗುತ್ತಿದೆ. ಸುತ್ತಲು ಗಿಡ ಮರ, ಹೊಲ ಗದ್ದೆ ಇದೆ. ಇದನ್ನು ನೋಡಲು ಇಲ್ಲಿ ಅತ್ಯಂತ ಸುಂದರವಾಗಿದೆ.

ಯಾತ್ರಿಕರು ಸದಾ ಬರುತ್ತಾರೆ. ಸೋಮವಾರ, ಶನಿವಾರ ಹಬ್ಬ ಹುಣ್ಣಿಮೆ ಇದ್ದಾಗ ಭಕ್ತರು ಈ ಪುಣ್ಯ ಕ್ಷೇತ್ರಕ್ಕೆ ಬರುತ್ತಾರೆ.

ಬೀದರ ಜಿಲ್ಲೆಯಲ್ಲಿ ಈ ನರಸಿಂಹ ಕ್ಷೇತ್ರ ಸ್ಥಳವು ಅನೇಕ ಜನರ ಪುಣ್ಯ ಕ್ಷೇತ್ರವಾಗಿದೆ. ವಿಶೇಷವಾಗಿ ಇಲ್ಲಿನ ನೀರಿನ ಮಹಿಮೆ ಇರುವುದರಿಂದ ಪುಣ್ಯ ಕ್ಷೇತ್ರವಾಗಿದೆ. ಹೆಚ್ಚಾಗಿ ಆಂಧ್ರ ಪ್ರದೇಶ, ಮಹಾರಾಷ್ಟ್ರದ ಕಡೆಯಿಂದ ಬರುತ್ತಾರೆ. ಆದರೆ ಈಗ ಎಲ್ಲಾ ರಾಜ್ಯಗಳಿಂದ ಎಲ್ಲಾ ಜಾತಿ ಜನಾಂಗದವರು ಈ ಪುಣ್ಯ ಕ್ಷೇತ್ರಕ್ಕೆ ಬಂದು ಪವಿತ್ರವಾಗುತ್ತಾರೆ.

ಅಬ್ದುಲ ಫೈಜ್ ದರ್ಗಾ-೪

ಬೀದರ ಜಿಲ್ಲೆಯಲ್ಲಿ ಎಲ್ಲಾ ಧರ್ಮಗಳ ಪುಣ್ಯಕ್ಷೇತ್ರಗಳು ಕಾಣಬಹುದು. ಇವುಗಳಲ್ಲಿ ಅಬ್ದುಲ ಫೈಜ್ ದರ್ಗಾ ಕೂಡಾ ಮುಸ್ಲಿಂರ ಪ್ರಮುಖವಾದ ಪುಣ್ಯಕ್ಷೇತ್ರವಾಗಿದೆ. ಈ ಪುಣ್ಯಕ್ಷೇತ್ರವು ಐತಿಹಾಸಿಕ ಹಿನ್ನೆಲೆ ಒಳಗೊಂಡಿದೆ. ಈ ಕ್ಷೇತ್ರಕ್ಕೆ ಮುಸ್ಲಿಂಮರು ಮಾತ್ರ ಬರುವುದಿಲ್ಲ. ಇಲ್ಲಿ ಎಲ್ಲಾ ಜನಾಂಗದವರು ಈ ಕ್ಷೇತ್ರ ದರ್ಶನಕ್ಕೆ ಬರುತ್ತಾರೆ.

ಅಬ್ದುಲ ಫೈಜ್ ದರ್ಗಾ ಇದು ಬೀದರ ನಗರದ ಒಳಗಡೆ ಬರುವುದು. ಅಬ್ದುಲ ಫೈಜ್ ದರ್ಗಾಕ್ಕೆ ಹೋದ ತಕ್ಷಣ ಮೊದಲು ಒಂದು ದೊಡ್ಡ ಭವ್ಯವಾದ ದ್ವಾರವಿದೆ. ಇದರ ಒಳಗಡೆ ಖಾಜಾ ಅಬ್ದುಲ ಫೈಜ್ ಅವರ ಮಜೀದ ಇದೆ. ಅಬ್ದುಲ ಫೈಜ್ ಇವರು ಗುಲಬರ್ಗಾದವರಾಗಿದ್ದರು. ಅಬ್ದುಲ ಫೈಜ್ ಇವರು ಗುಲಬರ್ಗಾ ಖಾಜ ಬಂದೇನವಾಜ್ ಅವರ ಮೊಮ್ಮಗ ಆಗಿದ್ದಾರೆ.

ಇವರು ಚಿಕ್ಕ ವಯಸ್ಸಿನವರಿದ್ದಾಗಲೇ ಗುಲಬರ್ಗಾದಿಂದ ಬೀದರ ನಗರಕ್ಕೆ ಬಂದಿದ್ದರು. ಈ ಕ್ಷೇತ್ರದಲ್ಲಿಯೇ ಉಳಿದು ಇಸ್ಲಾಂ ಮತದ ಬಗ್ಗೆ ಪಾಪ ಪುಣ್ಯ ಕರ್ಮಗಳ ಬಗ್ಗೆ ಹಾಗೆಯೇ ಇಸ್ಲಾಂ ಧರ್ಮದ ರೂಢಿ ಪದ್ಧತಿಗಳು ಆಚರಣೆಗಳ ಬಗ್ಗೆ ಜನರಿಗೆ ಹೇಳುತ್ತಾ ಈ ಕ್ಷೇತ್ರದಲ್ಲಿಯೇ ಐಕ್ಯರಾದರು. ಅವರು ಐಕ್ಯವಾದ ಸ್ಥಳವೇ ಇಂದು ಅಬ್ದುಲ ಫೈಜ್ ದರ್ಗಾ ಎಂದು ಅವರ ಹೆಸರಿನಿಂದ ಆ ದರ್ಗಾಕ್ಕೆ ಕರೆಯುತ್ತಾರೆ. ಖಾಜಾ ಅಬ್ದುಲ ಫೈಜ ಅವರ ಅಣ್ಣ ಗುಲಬರ್ಗಾದಲ್ಲಿ ಇದ್ದರು. ಅವರ ಹೆಸರು ಖಾಜಾ ಖಬುಲಾಹುಸೇನಿ ಎಂದು ಹೇಳುವರು.

ಬೀದರ ನಗರದಲ್ಲಿ ಅಬ್ದುಲ ಫೈಜ್ ದರ್ಗಾ ಅತ್ಯಂತ ಸುಂದರ ಹಾಗೂ ಭವ್ಯವಾದ ಪುಣ್ಯಕ್ಷೇತ್ರ ಆಗಿದೆ. ಇದು ಪ್ರಾಚೀನ ಮಜೀದ ಆಗಿದೆ. ಈ ಕ್ಷೇತ್ರ ನೋಡಲು ಮೇಲೆ ಗುಮ್ಮಜ ಇದ್ದು, ನಾಲ್ಕು ಕಡೆ ಚೌಕಗಳು ಗೋಲಾಕಾರದಲ್ಲಿದ್ದು, ಅನೇಕ ಹಳೆಯ ಕಾಲದ ಕಲಾಕೃತಿಗಳು ಕಾಣಬಹುದು. ಸುಂದರವಾಗಿ ಕಲ್ಲಿನ ಹೂ ಬಳ್ಳಿಗಳ ಕೆತ್ತಲಾಗಿದೆ. ಈ ಕ್ಷೇತ್ರದ ಒಳಗಡೆ ಮೂರು ಗೋರಿಗಳಿವೆ. ನಂತರ ಎದುರುಗಡೆ ಗಾಜಿನ ವೇದಿಕೆ ಇದೆ. ಮೇಲಗಡೆ ಗೊಡೆಯ ಮೇಲೆ ವಿವಿಧ ಕಲಾಕೃತಿಗಳು ಕಾಣಬಹುದು. ಬಣ್ಣ ಬಣ್ಣದ ಲೈಟ್ಸ್‌ಗಳು ಹಾಗೂ ಝೂಮರಗಳಿವೆ. ಈ ಮಜೀದಿಯ ಒಳಗಡೆ

ಹಾಗೂ ಹೊರಗಡೆ ಗೋಡೆಯ ಮೇಲೆ ಹೂ ಬಳ್ಳಿಗಳ ವರ್ಣರಂಜಿತ ಕಲಾಕೃತಿ ಮಾಡಿದ್ದು, ಕಲ್ಲಿನಲ್ಲಿ ಕೇತ್ತಿದ್ದು ಕಂಡು ಬರುತ್ತದೆ. ಅಬ್ದುಲ ಫೈಜ ದರ್ಗಾದ ಬಾಗಿಲು ಕಲ್ಲಿನಿಂದ ಕೂಡಿವೆ. ಇದರ ಮೇಲೆ ಸುಂದರವಾದ ಕಲೆ ಇದೆ. ಹಾಗೂ ಇದರ ಸುತ್ತ ಮುತ್ತ ಬಣ್ಣ ಬಣ್ಣದ ಟೈಲ್ಸ್‌ಗಳಿಂದ ಹೂ ಬಳ್ಳಿಗಳಿಂದ ಅಲಂಕೃತಗೊಂಡಿದೆ. ಕಲ್ಲಿನ ಮೇಲೆ ಕೆತ್ತಿರುವ ಕಲೆ ಕಂಡು ಬರುತ್ತದೆ. ಅಬ್ದುಲ ಫೈಜ್ ದರ್ಗಾ ಅತ್ಯಂತ ಪ್ರಶಾಂತ ಕ್ಷೇತ್ರವಾಗಿದೆ. ಸುಂದರವಾದ ಕಮಾನುಗಳಿಂದ ಕೂಡಿದ ಮೂರು ಕಡೆ ದೊಡ್ಡ ದೊಡ್ಡ ಬಾಗಿಲುಗಳಿವೆ. ಖಾಜಾ ಅಬ್ದುಲ ಫೈಜ್ ದರ್ಗಾ ನೋಡಲು ಬಹು ಆಕರ್ಷಣೀಯವಾದ ಕ್ಷೇತ್ರ.

ಈ ದರ್ಗಾದ ಎದುರುಗಡೆ ಸುಂದರವಾದ ಕಲ್ಲಿನ ಚಿಕ್ಕ ಗೋರಿಗಳಿವೆ. ಇವು ನಿಜಾಮ್ ಸರಕಾರದ ಮೊಮ್ಮಕ್ಕಳ ಗೋರಿಗಳಾಗಿವೆ. ಇವರು ಹೈದ್ರಾಬಾದನವರಾಗಿದ್ದರು. ಈ ಬೀದರ ನಗರ ಅವರ ಜಹಗೀರ ಆಗಿತ್ತು. ಈ ಗೋರಿಗಳು ಮಕ್ಕಳದಾದ ಕಾರಣ ಚಿಕ್ಕ ಚಿಕ್ಕ ಆಗಿವೆ. ಆದರೆ ಅವು ಕಲ್ಲುಗಳಿಂದಲೇ ಕೆತ್ತಿದ ಒಂದೇ ಶಿಲೆಗಳ ಗೋರಿಗಳಾಗಿವೆ. ಸುತ್ತ ಮುತ್ತ ೧೨ ಕಲ್ಲಿನ ಕಂಬಗಳಿವೆ ಇದರ ಒಳಗಡೆ ಎರಡು ಗೋರಿಗಳಿವೆ. ೧೨ ಕಂಬಗಳ ಮೇಲೆ ಕೆತ್ತಿರುವ ಶಿಲೆಗಳು ಕಲಾಕೃತಿ ಐತಿಹಾಸಿಕ ಹಿನ್ನೆಲೆ ಸಾರುತ್ತವೆ. ಹಾಗೆಯೇ ಹನ್ನೆರಡು ಕಂಬಗಳು ಕಲ್ಲಿನಿಂದಲೇ ಕೆತ್ತಿರುವ ಹೂ ಬಳ್ಳಿಗಳಿಂದ ಶಿಲೆಯ ಕಂಬಗಳಾಗಿವೆ. ಇದು ನೋಡಲು ಅತ್ಯಂತ ಸುಂದರ ಆಶ್ಚರ್ಯ ಮೂಡಿಸುತ್ತದೆ. ಕಲ್ಲಿನಲ್ಲೇ ಕಮಾನ ಇದೆ. ಕಂಬಗಳು ನಾಲ್ಕು ಕಡೆ ಸಮಚೌಕ ಇವೆ. ಇದರ ಒಳಗಡೆ ಗೋರಿಗಳಿವೆ. ಹಾಗೂ ಈ ಕ್ಷೇತ್ರದ ಹತ್ತಿರ ಸುತ್ತಲು ಹಳೆಯ ಕಾಲದ ಶಿಲೆಗಳು ಅವುಗಳಿಂದ ಬಳಸಿದ ವಸ್ತುಗಳು ಇವೆ. ಹೆಚ್ಚಾಗಿ ಕಲ್ಲಿನಿಂದ ಮಾಡಿದ ವಸ್ತುಗಳು ಹೆಚ್ಚಾಗಿ ಕಂಡು ಬರುವುದು. ದೇವರ ವಸ್ತುಗಳಾದ ಉದುಬತ್ತಿ ಹಚ್ಚುವ ಸ್ಥಳ ಪ್ರಸಾದ ಹಾಕಿ ಇಡುವ ಸ್ಥಳ ಹಾಗೂ ಇತರ ಅನೇಕ ವಸ್ತುಗಳು ಕಲ್ಲಿನಿಂದಲೇ ಮಾಡಿದ್ದು ಕಾಣಬಹುದು.

ಈ ಕ್ಷೇತ್ರದ ಜಾತ್ರೆ ಅಕ್ಟೋಬರ್‌ನಲ್ಲಿ ನಡೆಯುತ್ತದೆ. ಈ ಜಾತ್ರೆತುಂಬಾ ಮಹತ್ತರವಾದದ್ದು, ಈ ಸಮಯದಲ್ಲಿ ಇಲ್ಲಿ ಎಲ್ಲ ಜನಾಂಗದ ಜನರು ದೇವರ ದರ್ಶನಕ್ಕೆ ಬರುತ್ತಾರೆ. ಈ ಜಾತ್ರೆಯಲ್ಲಿ ವಿವಿಧ ಜನಾಂಗಗಳ ಭಾವ ಐಕ್ಯದ ತಾಣವಾಗಿ ಕಂಡು ಬರುವುದು. ಎಲ್ಲರೂ ಒಂದೇ ಭಾವನೆಯಿಂದ ಜನರು ಸೇರುತ್ತಾರೆ. ಈ ಜಾತ್ರೆ ಮೂರು ದಿವಸ ನಡೆಯುವುದು. ಈ ಜಾತ್ರೆ

ಕಲಾತ್ಮಕವಾದ ರೀತಿಯಲ್ಲಿ ನಡೆಯುವುದು. ಎಲ್ಲಾ ರೀತಿಯ ಸಾಮಾನುಗಳ ಅಂಗಡಿಗಳು ಕಾಣಬಹುದು. ಈ ಜಾತ್ರೆ ಧಾರ್ಮಿಕ ಹಿನ್ನೆಲೆಯಲ್ಲಿ ಮನರಂಜನೀಯವಾಗಿ ಇರುತ್ತದೆ.

ಈ ಪುಣ್ಯಕ್ಷೇತ್ರದ ಮಹತ್ವ ಇಲ್ಲಿ ಹೆಣ್ಣು ಮಕ್ಕಳಿಗೆ ಒಳಗಡೆ ಪ್ರವೇಶವಿಲ್ಲ. ಆದರೆ ಇಲ್ಲಿ ಅನೇಕ ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಇಲ್ಲಿ ಹರಕೆ ಹೊತ್ತುತ್ತಾರೆ. ತಮ್ಮ ಕಷ್ಟಗಳಿಗೆ ಇಲ್ಲಿ ದೇವರು ಪರಿಹರಿಸುತ್ತಾನೆ ಎಂಬ ದೃಢವಾದ ನಂಬಿಕೆ ಇದೆ. ಹರಕೆ ಪೂರ್ಣಗೊಂಡ ನಂತರ ಇಲ್ಲಿಗೆ ಬಂದು ತಮ್ಮ ಹರಕೆ ತೀರಿಸುತ್ತಾರೆ. ಹಾಗೆಯೇ ಈ ಪುಣ್ಯ ಕ್ಷೇತ್ರವು ರೋಗಗಳಿಗೆ ಮತ್ತು ಭಾನಮತಿ ಗುಣಪಡಿಸುವುದಕ್ಕೆ ತುಂಬಾ ಪ್ರಸಿದ್ಧಿ ಹೊಂದಿದೆ. ಇಲ್ಲಿ ಮಕ್ಕಳಿಗೆ ಆರೋಗ್ಯ ಸರಿ ಇಲ್ಲದ ಸಮಯದಲ್ಲಿ, ದೃಷ್ಟಿಯಾಗಿದಲ್ಲಿ ಇಲ್ಲಿ ಬಂದು ದೇವರ ದರ್ಶನ ಮಾಡಿಸಿ ತಾಯಿತು ಹಾಕುತ್ತಾರೆ. ಪ್ರಮುಖವಾಗಿ ಭಾನಮತಿಯಾಗಿದವರಿಗಂತೂ ತಾಯಿತು ಹಾಕಿ ದೇವರ ದರ್ಶನ ಮಾಡಿಸಿ, ಈ ಸ್ಥಳದಲ್ಲಿ ಎರಡು ಮೂರು ದಿವಸ ಇರಲಿಕ್ಕೆ ಹೇಳುತ್ತಾರೆ. ಈ ಕ್ಷೇತ್ರದಲ್ಲಿ ವಿಶ್ರಾಂತಿ ಮಾಡಿದರೆ ಎಷ್ಟೋ ರೋಗಗಳು ಗುಣಮುಖಹೊಂದಿ ಮನಸ್ಸಿಗೆ ಶಾಂತಿ ಲಭಿಸುತ್ತದೆ ಎಂಬುವುದು ಜನಪದರ ನಂಬಿಕೆಯಾಗಿದೆ. ಇಲ್ಲಿ ಹೆಚ್ಚಾಗಿ ಅಮಾವಸೆ ಮತ್ತು ಹುಣ್ಣಿಮೆ ಹೆಚ್ಚಾಗಿ ಜನರು ಈ ಕ್ಷೇತ್ರ ದರ್ಶನಕ್ಕೆ ಬರುತ್ತಾರೆ. ಈ ಕ್ಷೇತ್ರಕ್ಕೆ ಜನರು ತಮ್ಮ ಪಾಪವನ್ನು ಕಳೆದುಕೊಂಡು ಪುಣ್ಯವಂತರಾಗಲು ಜನರು ಬರುತ್ತಾರೆ. ಈ ಪುಣ್ಯ ಕ್ಷೇತ್ರವು ತುಂಬಾ ವಿಶಿಷ್ಟವಾದ ಕ್ಷೇತ್ರವಾಗಿದೆ. ಅದರಿಂದ ಈ ಕ್ಷೇತ್ರದಲ್ಲಿ ಭಕ್ತರಿಗೆ ಇರಲಿಕ್ಕೆ ಕೋಣೆಗಳ ವ್ಯವಸ್ಥೆ ಕೂಡ ಇದೆ. ನೀರಿನ ವ್ಯವಸ್ಥೆ ಇದೆ. ಇಲ್ಲಿ ಭಕ್ತರಿಗಾಗಿ ಎಲ್ಲಾ ತರಹದ ಅನುಕೂಲ ಮಾಡಲಾಗಿದೆ. ಮತ್ತು ಈ ಕ್ಷೇತ್ರದ ಸುತ್ತಲು ದೊಡ್ಡ ದೊಡ್ಡ ಮರಗಳಿಂದ ಕೂಡಿದೆ. ಇಲ್ಲಿ ಒಂದು ತರಹದ ನೇಮ್ಮದಿ ಶಾಂತಿ ಸಿಗುತ್ತದೆ. ಅನೇಕ ಭಕ್ತರಿಗೆ ಅನೇಕ ಕಷ್ಟಗಳು ದೂರವಾಗಿದೆ ಸುಖ: ಲಭಿಸಿದೆ ಎಂಬುದು ಇಲ್ಲಿ ಬರುವ ಭಕ್ತರ ಮೂಲಕ ತಿಳಿದುಕೊಳ್ಳಬಹುದು. ಆದ್ದರಿಂದ ನಮ್ಮ ಬೀದರ ಜಿಲ್ಲೆಯ ಈ ಕ್ಷೇತ್ರವು ಐತಿಹಾಸಿಕ ಪುಣ್ಯ ಕ್ಷೇತ್ರವಾಗಿದೆ. ಇಲ್ಲಿ ಇನ್ನೂ ಈ ಕ್ಷೇತ್ರ ತುಂಬಾ ಅಭಿವೃದ್ಧಿ ಹೊಂದಬೇಕಾಗಿದೆ. ಈ ಕ್ಷೇತ್ರದ ಮಹಿಮೆ ನೋಡಿದಾಗ ಈ ಕ್ಷೇತ್ರದ ಸುತ್ತಲಿನ ಪರಿಸರದಲ್ಲಿ ಸುಧಾರಣೆಯಾಗಬೇಕು. ಇಲ್ಲಿ ಕೆಲವು ಮೂಢನಂಬಿಕೆಗಳು ಆಚರಣೆಗಳು ಹಾಗೆಯೇ ಮುಂದುವರಿದಿವೆ. ಇವುಗಳಲ್ಲಿ

ಆಧುನಿಕ ಹಿನ್ನೆಲೆ ಬದಲಾವಣೆ ಮಾಡಬೇಕು. ಆನರ ನಂಬಿಕೆ ಆಚಾರಗಳಲ್ಲಿ ಬದಲಾವಣೆ ಹೊಂದಬೇಕು, ಜನಪದರ ಮೂಢನಂಬಿಕೆಯಿಂದ ಈ ಕ್ಷೇತ್ರದ ಬಗ್ಗೆ ಅಪನಂಬಿಕೆ ಬರಬಾರದುವೆಂಬುದು ನನ್ನ ಅಭಿಪ್ರಾಯ. ಹಾಗೆಯೆ ಇಲ್ಲಿ ಬರುವ ಭಕ್ತರು ಸ್ವಚ್ಛತೆ ಕಾಪಾಡಬೇಕು. ಯಾವುದೇ ಒಂದು ಕ್ಷೇತ್ರ ಪವಿತ್ರ ಪುಣ್ಯಕ್ಷೇತ್ರವಾಗಬೇಕಾದರೆ ಸ್ವಚ್ಛತೆ ತುಂಬಾ ಮಹತ್ವದಾಗಿದೆ. ಹಾಗೆಯೇ ಇಂತಹ ಐತಿಹಾಸಿಕ ಹೊಂದಿರುವ ಪುಣ್ಯ ಕ್ಷೇತ್ರಕ್ಕೆ ಸರಕಾರ ಮತ್ತು ದಾನಿಗಳು ಮುಂದೆ ಬಂದು ಈ ಕ್ಷೇತ್ರಕ್ಕೆ ಅಭಿವೃದ್ಧಿ ತರಬೇಕು ಎಂಬುದು ಇಲ್ಲಿನ ಭಕ್ತರ ಮತ್ತು ಇಲ್ಲಿನ ಆಡಳಿತ ಮಂಡಳಿಯ ಆಶಯವಾಗಿದೆ.

ಇದೇ ನಿಟ್ಟಿನಲ್ಲಿ ನೋಡಿದಾಗ ಇಲ್ಲಿ ಮತ್ತೊಂದು ದರ್ಗಾ ಬರುವುದು.

ಮುಲ್ತಾನಿ ಪಾಶಾ ದರ್ಗಾ:

ಈ ಕ್ಷೇತ್ರವು ಸಹ ಬೀದರನಲ್ಲಿ ಪ್ರಮುಖವಾದ ಪುಣ್ಯ ಕ್ಷೇತ್ರದಲ್ಲಿ ಬರುವುದು. ಈ ಕ್ಷೇತ್ರ ಮುಲ್ತಾನಿ ಪಾಶಾ ದರ್ಗಾ ಇದು ಬೀದರ ನಗರದ ಮಧ್ಯದಲ್ಲೇ ಇದೆ. ಇಲ್ಲಿಗೆ ಹೋದ ತಕ್ಷಣ ದೊಡ್ಡ ಭವ್ಯವಾದ ದ್ವಾರವಿದೆ. ದ್ವಾರದ ಎದುರುಗಡೆ ನೀರಿನ ಕಾರಂಜಿಯ ಸ್ಥಳವಿದೆ. ದ್ವಾರದ ಒಳಗಡೆ ಸಮಭಾಗದಲ್ಲಿ ಕೋಣೆಗಳಿವೆ. ಈ ಕೋಣೆಗಳು ಫಕೀರಗಳು ಇರುವ ಸ್ಥಳವಾಗಿದೆ. ನಂತರ ಸ್ವಲ್ಪ ಒಳಗಡೆ ಅನೇಕ ಮುಸ್ಲಿಂ ಜನರ ಗೋರಿಗಳಿವೆ. ನಂತರ ಒಳಗಡೆ ಮುಲ್ತಾನಿ ಪಾಶಾನರ ದರ್ಗಾ ಇದೆ. ದೊಡ್ಡ ಕಲ್ಲಿನ ಕಂಬಗಳಿವೆ, ದ್ವಾರ ಕೂಡಾ ಅತ್ಯಂತ ಸುಂದರವಾಗಿದೆ. ಈ ಮಜೀದ್ ಒಳಗಡೆ ಹೆಣ್ಣು ಮಕ್ಕಳನ್ನು ಬಿಡುವುದಿಲ್ಲ. ಸ್ತ್ರೀಯರು ಹೊರಗಡೆನೆ ನಿಲ್ಲಬೇಕು. ಇಲ್ಲಿ ಕೂಡಾ ವರ್ಷದಲ್ಲಿ ಒಂದು ಸಾರಿ ಜಾತ್ರೆ ಆಗುತ್ತದೆ. ಈ ಜಾತ್ರೆ ಯಾವ ಜಾತಿ, ಮತ, ಭೇದ, ಭಾವವಿಲ್ಲದೇ ಎಲ್ಲಾ ಜನಾಂಗದವರು ಸೇರಿ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ಕ್ಷೇತ್ರದಲ್ಲಿ ಅನೇಕ ಜನರು ಹರಕೆ ಹೊತ್ತುತ್ತಾರೆ. ತಮ್ಮ ಕಷ್ಟಗಳಿಗೆ ಈ ಕ್ಷೇತ್ರದಿಂದ ಪರಿಹರಿಸಿಕೊಳ್ಳುತ್ತಾರೆ. ತಮ್ಮ ಹರಕೆ ಪೂರ್ಣಗೊಂಡ ನಂತರ ತಾವು ಬೇಡಿಕೊಂಡಹರಕೆ ತೀರಿಸಿಕೊಳ್ಳುತ್ತಾರೆ. ಇಲ್ಲಿ ಹೆಚ್ಚಾಗಿ ಹಬ್ಬ ಹುಣ್ಣಿಮೆ ಅಮಾವಸೆ ದಿನದಂದು ಭಕ್ತರು ದರ್ಶನಕ್ಕೆ ಬರುತ್ತಾರೆ. ಈ ಕ್ಷೇತ್ರ ಬೀದರ ನಗರದಲ್ಲಿ ತುಂಬಾ ಮಹತ್ವ ಸ್ಥಾನ ಪಡೆದುಕೊಂಡಿದೆ.

ಅಷ್ಟೂರ ಚೌಖಂಡಿ–೫

ಬೀದರ ಜಿಲ್ಲೆಯಲ್ಲಿ ಇನ್ನೊಂದು ಪ್ರಮುಖವಾದ ಪುಣ್ಯಕ್ಷೇತ್ರ ಅಷ್ಟೂರ್ ಚೌಖಂಡಿ ಈ ಕ್ಷೇತ್ರವು ಹಿಂದೂ ಮತ್ತು ಮುಸ್ಲಿಮರ ಭಾವೈಕ್ಯದ ಪುಣ್ಯಕ್ಷೇತ್ರದ ಕೇಂದ್ರಬಿಂದುವಾಗಿದೆ. ಈ ಕ್ಷೇತ್ರ ನಮ್ಮ ಜಿಲ್ಲೆಯಲ್ಲಿ ತುಂಬ ಪ್ರಸಿದ್ಧಿಯ ಕ್ಷೇತ್ರವಾಗಿದೆ. ಏಕೆಂದರೆ ಇಲ್ಲಿ ಹಿಂದೂ ಮುಸ್ಲಿಮರು ಸಮಭಾಗಿಗಳಾಗಿ ಇಲ್ಲಿಗೆ ಬರುತ್ತಾರೆ. ಇಲ್ಲಿ ಯಾವುದೇ ಜಾತಿ, ಮತವಿಲ್ಲ. ಎಲ್ಲರೂ ಒಂದೇ ಎಂಬ ಭಾವನೆ ದೇವರು ಒಬ್ಬರೇ ಎಂಬ ಭಾವನೆ ಈ ಕ್ಷೇತ್ರಕ್ಕೆ ಹೋಗಿದಾಗ ಅನಿಸುವುದು.

ಅಷ್ಟೂರ ಚೌಖಂಡಿ ಬೀದರ ನಗರದಿಂದ ೨ ಕಿ.ಮೀ. ದೂರದಲ್ಲಿದೆ. ದಕ್ಷಿಣ ದಿಕ್ಕಿನಲ್ಲಿದೆ. ಚೌಖಂಡಿ ಇದು ರಹಮತ ಉಲ್ ಕಿರಮಾನಿ ಬಾಬನವರ ಮಸೀದಿ ಆಗಿದೆ. ರಹಮತ್ ಉಲ್ ಕಿರಮಾನಿ ಬಾಬನವರು ಇರಾನ್ ದೇಶದ ಕಿರಮಾನ ಎಂಬ ಊರಿನವರು. ರಹಮತ ಉಲ್ ಕಿರಮಾನಿ ಬಾಬ ಇಸ್ಲಾಮಿಕ ಧರ್ಮ ಗುರುಗಳಾಗಿದರು. ಆದ್ದರಿಂದ ಇವರನ್ನು ಬೀದರ ಅರಸ ಅಹಮ್ಮದ ಶಾವಲಿಯು ಇವರನ್ನು ಬೀದರ ನಗರಕ್ಕೆ ಸುಲ್ತಾನ ಅಹಮ್ಮದಶಾ ಕಿರಮಾನಿ ಬಾಬನವರನ್ನು ಬಹಳ ಪ್ರೇಮದಿಂದ ಸ್ವಾಗತ ಮಾಡಿದರು.

ರಹಮತ ಉಲ್ ಕರಿಮಾನಿ ಬಾಬ ಇವರು ಬೀದರ ನಗರಕ್ಕೆ ಬಂದ ನಂತರ ಮುಸ್ಲಿಂ ಧರ್ಮ ಬಗ್ಗೆ ಜನರಿಗೆ ಹಾಗೂ ಅರಸ ಅಹಮ್ಮದ ಶಾವಲಿಯನ್ನು ಧರ್ಮಬೋಧನೆ ನೀತಿ ಹೇಳುತ್ತಿದ್ದರು. ಅಹಮ್ಮದ ಶಾವಲಿಯ ಧರ್ಮ ಗುರು ಈ ಕಿರಮಾನಿ ಬಾಬನವರಾಗಿದ್ದರು. ಇವರು ಎಷ್ಟೋ ದಿವಸ ಇಲ್ಲೇ ಇದ್ದರು, ನಂತರ ಬೀದರ ನಗರದಲ್ಲಿ ಜನರು ಮಾಂಸ ತಿನ್ನುತ್ತಿದ್ದರು. ಇದು ಕಿರಮಾನಿ ಬಾಬನವರಿಗೆ ಇಷ್ಟಬರಲಿಲ್ಲ. ನಂತರ ಅವರು ಬೀದರ ನಗರ ಬಿಟ್ಟು ೨ ಕಿ.ಮೀ. ದೂರದಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಇರುತ್ತಿದ್ದರು. ಆನರು ಇರುವ ಸ್ಥಳಕ್ಕೆ ಬರುತ್ತಿದ್ದರು. ಅರಸ ಕೂಡ ಅವರು ಇದ್ದ ಸ್ಥಳಕ್ಕೆ ಬರುತ್ತಿದ್ದ.

ಎಷ್ಟೋ ದಿವಸಗಳಾದ ನಂತರ ಕಿರಮಾನಿ ಬಾಬನವರು ಅದೇ ಸ್ಥಳದಲ್ಲಿ ಐಕ್ಯವಾದರು. ಅವರು ಸತ್ತನಂತರ ಅವರ ಸಮಾದಿ ಅದೇ ಸ್ಥಳದಲ್ಲಿ ಕಟ್ಟಿಸಿದರು. ಅದೇ ಈ ಚೌಖಂಡಿ ಆಗಿದೆ. ಕಿರಮಾನಿ ಬಾಬನವರ ಮಜೀದ ನಡುವೆ ಇದೆ. ಇವರ ಸಮಾದಿಯ ಸುತ್ತಲು ಇನ್ನೂ ಅನೇಕ ಸಮಾದಿಗಳಿವೆ. ಇವೆಲ್ಲ ಅವರ ಶಿಷ್ಯರ ಸಮಾಧಿಗಳಾಗಿವೆ. ಕಿರಮಾನಿ ಬಾಬ

ತಮ್ಮ ದೇಶಕ್ಕೆ ಹೋಗಬೇಕೆಂದಾಗ ಅವರನ್ನು ಅಹಮ್ಮದಶವಲಿ ಅವರನ್ನು ಹೋಗಗುಡಲಿಲ್ಲ. ತಮ್ಮ ಹತ್ತಿರದಲ್ಲೇ ಇಟ್ಟಿಕೊಂಡು ಅವರಿಗೆ ಬೇಕಾದ ಸವಲತ್ತು ನೀಡಿದರು. ಈ ಚೌಖಂಡಿಯಲ್ಲಿ ಹಜರತ್ ಖಲಿ ಉಲಾನ್ ಗೋರಿಯೂ ಇದೆ.

ಚೌಖಂಡಿಯ ಹತ್ತಿರ ಹೋದ ನಂತರ ಮೊದಲ ಬಾಗಿಲ ಹತ್ತಿರ ಸಮಭಾಗದಲ್ಲಿ ಅನೇಕ ಮಜೀದಗಳಿವೆ. ನಂತರ ಸ್ವಲ್ಪ ಮುಂದೆ ಅನೇಕ ಛಿಡಿಗಳಿವೆ. ನಂತರ ಮೇಲ ಚೌಖಂಡಿ ಇದೆ. ಕಿರೀಟನಂತೆ ಈ ಚೌಖಂಡಿ ಕಟ್ಟಿದ್ದಾರೆ. ಈ ಚೌಖಂಡಿಯ ದರ್ಗಾ ಬಹಮನಿ ಅರಸ ಅಹಮ್ಮದ ಶಾವಲಿ ಕಟ್ಟಿಸಿದ್ದಾನೆ. ಹೊರಗಡೆಯ ಚೌಖಂಡಿಯನ್ನು ಅಲಿಬರಿದಶ ಕಟ್ಟಿಸಿದ್ದಾನೆ. ಈ ಚೌಖಂಡಿ ನೋಡಲು ಅತ್ಯಂತ ಸುಂದರ ಹಾಗೂ ಭವ್ಯವಾಗಿದೆ. ಇದು ಅತ್ಯಂತ ಆಕರ್ಷಕ ಮಜೀದ್ ಆಗಿದೆ.

ಕಿರಮಾನಿ ಬಾಬನವರ ತಲೆಯ ಮೇಲಿನ ಕಿರೀಟ ಎಂಟು ಭಾಗ ಇದ್ದಿತು. ಎಂಟು ಭಾಗಕ್ಕೆ ಅಷ್ಟಪಹಲ ಎಂದು ಕರೆಯುತ್ತಾರೆ. ಅಷ್ಟಪಹಲ ಎಂಬ ಹೆಸರಿನಿಂದ ಅಷ್ಟೂರ ಎಂಬ ಹೆಸರು ಬಂದಿದೆ. ಸದ್ಯಕ್ಕೆ ಅಷ್ಟೂರ ಎಂದು ಇಲ್ಲಿಯ ಗ್ರಾಮದ ಹೆಸರಾಗಿದೆ. ಕಿರಮಾನಿ ಬಾಬನವರ ಕಿರೀಟ ಎಂಟು ಭಾಗ ಇದ್ದಕಾರಣ ಕಿರೀಟದಂತೆ ಈ ಚೌಖಂಡಿ ಎಂಬ ಹೆಸರು ಬಂದಿದೆ. ಈ ಚೌಖಂಡಿಯ ದ್ವಾರದ ಮೇಲೆ ಅರೇಬಿಯನ ಅಡಿಯಲ್ಲಿ ಕನೇರ ಕಲ್ಲಿನ ಮೇಲೆ ಕುರಾನಿನ ವಾಕ್ಯ ಬರೆದಿದ್ದಾರೆ. ಈ ಚೌಖಂಡಿಯ ಮೇಲೆರಲು ದಾರಿ ಈ ಚೌಖಂಡಿಯಲ್ಲಿ ಇದೆ. ಇದು ಕತ್ತಲೆಯ ದಾರಿಯಾಗಿದೆ. ಒಬ್ಬರಿಗೆ ಹೋಗಲು ಬರಲು ಬರುತ್ತದೆ ನೋಡಲು ಅತ್ಯಂತ ಸುಂದರವಾಗಿದೆ.

ಇಲ್ಲಿನ ವಿಶೇಷವೆಂದರೆ ಈ ಪುಣ್ಯಕ್ಷೇತ್ರ ಹತ್ತಿರದಲ್ಲೇ ಪರಿಭಾವಿ (ಭಾವಿ) ಇದೆ. ಇದು ಚೌಖಂಡಿಯ ಆಕಾರ ಯಾವ ರೀತಿ ಇದೆ. ಅದೇ ಪ್ರಕಾರದಲ್ಲಿ ಈ ಭಾವಿ ಕಟ್ಟಲಾಗಿದೆ. ಈ ಚೌಖಂಡಿಯಲ್ಲಿ ಹುಣ್ಣಿಮೆ ಮತ್ತು ಅಮಾವಾಸೆ ಹಬ್ಬಗಳಿದ್ದಾಗ ಜನರು ಇಲ್ಲಿಗೆ ಹೆಚ್ಚಾಗಿ ಬರುತ್ತಾರೆ. ಅಮಾವಸೆ ಮತ್ತು ಹುಣ್ಣಿಮೆ ದಿವಸ ಇಲ್ಲಿ ವಿಶೇಷವಾಗಿ ಪೂಜೆ ಮಾಡುತ್ತಾರೆ. ಮತ್ತು ಈ ಕ್ಷೇತ್ರದ ಮತ್ತೊಂದು ಮಹತ್ವವಾದ ಮಹಿಮೆ ಇದೆ. ಅದೇನೆಂದರೆ ಇಲ್ಲಿ ಮೈಯಲ್ಲಿ ಏನಾದರೂ ಇದ್ದರೆ ಭಾನಮತಿಯಾಗಿದರೆ ಮಾನಸಿಕವಾಗಿ ಒಳಗೊಂಡಿದರೆ ಮತ್ತು ಹಲವು ರೋಗಗಳಿಗೆ ಈ ಅಮಾವಾಸೆ ಮತ್ತು ಹುಣ್ಣಿಮೆ ದಿವಸ ಬಂದರೆ ಅವರ ರೋಗಗಳು ಹೆಚ್ಚಾಗಿ ಕಾಣುತ್ತವೆ. ಎಂದು

ಜನಪದರ ನಂಬಿಕೆ ಹೀಗೆ ಹೆಚ್ಚಾಗಿ ಕಾಣಿಸಿಕೊಳ್ಳುವ ರೋಗಗಳಿಗೆ ಇವೆರಡು ದಿವಸ ಇಲ್ಲಿಗೆ ಬಂದರೆ ಈ ಪುಣ್ಯಕ್ಷೇತ್ರ ಮಹಿಮೆಯಿಂದ ರೋಗಗಳು ಅಥವಾ ನೋವು ನಿವಾರಣೆ ಆಗುತ್ತದೆ ಎಂಬುವುದು ಜನಪದರ ನಂಬಿಕೆ.

ಹಾಗೆಯೇ ಇನ್ನೊಂದು ವಿಶೇಷವಾಗಿ ಮಕ್ಕಳಾಗದವರು ಇಲ್ಲಿಗೆ ಬಂದು ಹರಕೆ ಮಾಡಿದರೆ ಮಕ್ಕಳಾಗುತ್ತವೆ. ಮತ್ತು ಮದುವೆಯಾಗದವರು ಸಹ ಇಲ್ಲಿಗೆ ಬಂದು ಹರಕೆ ಹೊತ್ತುವರು. ಇವುಗಳೆಲ್ಲಾ ಈ ಪುಣ್ಯಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಿದೆ. ಇಲ್ಲಿ ಇತ್ತೀಚೆಗೆ ಅಂತು ತುಂಬಾ ಕಡೆಯಿಂದ ಹಲವಾರು ರಾಜ್ಯಗಳಿಂದ ವಿದೇಶಿ ಜನರು ಕೂಡಾ ಈ ಪುಣ್ಯ ಕ್ಷೇತ್ರಕ್ಕೆ ಬರುತ್ತಿದ್ದಾರೆ.

ಚೌಖಂಡಿ ಅತ್ಯಂತ ಪ್ರಶಾಂತ ಸುಂದರ ಸ್ಥಳವಾಗಿದೆ. ಊರು ಬಿಟ್ಟು ಹೊರಗಡೆ ಇದೆ. ಅಷ್ಟೂರ ಗ್ರಾಮ ಇನ್ನು ಮುಂದುಗಡೆ ಇರುತ್ತದೆ. ಈ ಚೌಖಂಡಿಯನ್ನು ವೀಕ್ಷಿಸಲು ಅನೇಕ ಜನರು ಬರುತ್ತಾರೆ. ಹಾಗೂ ಈ ಚೌಖಂಡಿಯ ಮೇಲೆ ಅತ್ಯಂತ ಸುಂದರವಾದ ಕಲಾಕೃತಿ ಹೂಗಳ-ಬಳ್ಳಿಗಳ ಚಿತ್ರಗಳ ಕಲೆ ಇದೆ.

ಕಿರಮಾನಿ ಬಾಬ ಅಹಮ್ಮದ ಶಾವಲಿಯ ಧರ್ಮಗುರುವಾದ ಕಾರಣ ಗುರುವಿನ ಮಜೀದಮೇಲಗಡೆ ಇದೆ. ಶಿಷ್ಯನಾದ ಅಹಮ್ಮದ ಶಾನ ಮಜೀದ ಕೆಳಗಡೆ ಇದೆ. ಈ ಮಜೀದಕ್ಕೆ ಅಷ್ಟೂರ ಅಲ್ಲಮ ಪ್ರಭು ಮತ್ತು ಮಜೀದ ಎಂದು ಕರೆಯುತ್ತಾರೆ. ಸತ್ತನಂತರ ಇವರು ಕೂಡಾ ತಮ್ಮ ಸಮಾದಿಯನ್ನು ಒಂದೆ ಕಡೆ ಇದ್ದು, ಹಾಗೂ ಗುರುವಿನ ಮಜೀದ ಮೇಲಗಡೆ ಇರಲೆಂದು ಹಾಗೂ ಶಿಷ್ಯನ ಮಜೀದ ಕೆಳಗಡೆ ಇರಲೆಂದು ಈ ರೀತಿ ಒಂದೆ ಸ್ಥಳದಲ್ಲಿ ಮೇಲೆ ಕೆಳಗೆ ಕಟ್ಟಿದ್ದಾರೆ.

ಅಹಮ್ಮದ ಶಾವಲಿಯ ಗುಮ್ಮಜ:

ಅಹಮ್ಮದ ಶಾವಲಿಯ ಗುಮ್ಮಜ ಹಿಂದೂ ಮುಸ್ಲಿಂ ಏಕತೆಯ ಸಂಕೇತವೆನ್ನಲಾಗಿದೆ. ಇಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಇದಕ್ಕೆ ಅಷ್ಟೂರ ಅಲ್ಲಮ ಪ್ರಭು ಜಾತ್ರೆ ಎಂದು ಕರೆಯುತ್ತಾರೆ. ಈ ಪುಣ್ಯಕ್ಷೇತ್ರ ಇಡೀ ಕರ್ನಾಟಕದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಇಂತಹ ವಿಶಿಷ್ಟವಾದ ಕ್ಷೇತ್ರ ಎರಡು ಜನಾಂಗಗಳು ಆದರೂ ದೇವರು ಮಾತ್ರ ಒಬ್ಬರೆಯಾಗಿದ್ದಾರೆ. ಈ ಪುಣ್ಯಕ್ಷೇತ್ರದಿಂದ ಈ ಊರಲ್ಲಿ ಎರಡು ಧರ್ಮದ ಜನರು ಐಕ್ಯದಿಂದ ಒಬ್ಬನೊಬ್ಬರು ಸಹಬಾಳವೆಯಿಂದ ಜೀವನ ಮಾಡುತ್ತಾರೆ. ಈ ತರಹ ಎಲ್ಲಾ

ಊರುಗಳಲ್ಲಿ ಇದ್ದರೆ ಈ ಜಾತಿ ಮತ ಧರ್ಮಗಳ ಜಗಳ ಹೊಡೆದಾಟಗಳೇ ಬರುವುದಿಲ್ಲ.

ಈ ಪುಣ್ಯಕ್ಷೇತ್ರ ಐತಿಹಾಸಿಕ ಹೊಂದಿದೆ. ಅಷ್ಟೂರ್ ಗ್ರಾಮವು ಬೀದರ ನಗರದಿಂದ ನಾಲ್ಕು ಕಿ.ಮೀ. ದೂರದಲ್ಲಿದೆ. ಈ ಅಷ್ಟೂರ್ ಗ್ರಾಮ ಇನ್ನು ಮುಂದೆ ಇರುತ್ತದೆ. ರಸ್ತೆಯ ಹತ್ತಿರದಲ್ಲಿ ಅಷ್ಟುರ್ ಗುಮ್ಮಜಗಳಿವೆ. ಬೀದರ ಕೋಟೆಯನ್ನು ಆಳಿದ ಎರಡು ರಾಜ್ಯ ನೆತನಗಳ ರಾಜಕಾರಣಿಯರ ಹಾಗೂ ಅವರ ಸಂಬಂಧಿಗಳ ಅನೇಕ ಭವ್ಯ ಸಮಾಧಿಗಳು ಇವೆ. ಇದರಲ್ಲಿ ಪ್ರಮುಖವಾಗಿ ಬಹುಮನಿ ಸಾಮ್ರಾಜ್ಯದ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಗೆ ವರ್ಗಾಯಿಸಿದ ಅಹಮ್ಮದ ಶಾವಲಿಯ ಗುಮ್ಮಜ ಆಗಿದೆ. ಹಾಗೂ ಇವರ ಹೆಂಡತಿ ನೂರಜಹಾ ರಫತ್ ಬೇಗಂ ಇವಳ ಗುಮ್ಮಜ ಕೆಳಗಡೆ ಇದೆ. ಇದರ ಹತ್ತಿರದಲ್ಲಿ ಅಲ್ಲಾವುದ್ದೀನ್ ಬಹಮನ ಶಾನ ಗುಮ್ಮಜ ಇದೆ. ಇದು ಸಿಡಿಲಿನ ಹೊಡೆತಕ್ಕೆ ಸಿಕ್ಕು ಅರ್ಧಕ್ಕಿಂತ ಹೆಚ್ಚು ಬಿದ್ದು ಹೋಗಿದೆ. ಈ ಗುಮ್ಮಜ ಹತ್ತಿರದಲ್ಲಿ ಹುಮಾಯಾನ ಷಾ ಬಹಮನಿಯ ಗುಮ್ಮಜ ಇದೆ. ಇದರ ಹತ್ತಿರದಲ್ಲಿ ನಿಜಾಮ ಶಾ ಬಹಮನಿಯ ಗುಮ್ಮಜ ಇದೆ. ಇದರ ಹತ್ತಿರದಲ್ಲಿ ಮಹಮ್ಮದ ಶಾ ಬಹಮನಿ ಗುಮ್ಮಜ ಇದೆ. ಹಾಗೂ ಕಲಿಮ್ ಉಲ್ ಅಲಿಮ್ ಉಲ್ ಬಹಮನಿಗಳ ಗುಮ್ಮಜಗಳ ಎದುರು ಬಿದಿರು ಇವೆ. ಇದರ ಎದುರುಗಡೆ ಹಶೇನಷಾ ಬಹಮನಿಯ ಗುಮ್ಮಜ ಇದೆ.

ಅಹೇಮದ ಶಾವಲಿ ಧರ್ಮಸಹಿಷ್ಣು ಆಗಿದ, ಆತನ ಧರ್ಮಗುರು ರಹಮತ ಉಲ ಕಿರಮಾನಿ ಬಾಬ ಆಗಿದರು. ರಹಮತ ಉಲ್‌ಕಿರ ಮಾನಿಬಾಬನವರಿಗೆ ಅಹಮ್ಮದ ಶಾವಲಿ ಇರಾನ ದೇಶದಿಂದ ಬೀದರ ಜಿಲ್ಲೆಗೆ ಕರೆಸಿದ ಅಹಮ್ಮದ ಶಾ ಈ ಗುರುವಿನಿಂದ ವಿದ್ಯಾ ಕಲಿತಿದ್ದ ನಂತರ ಕಿರಮಾನಿ ಬಾಬನವರಿಗೆ ಇರಾನ ದೇಶಕ್ಕೆ ಕಳಿಸಲಿಲ್ಲ. ತಮ್ಮ ಹತ್ತಿರದಲ್ಲಿ ಇರಲು ಹೇಳಿದನು. ಅವರು ಹಾಗೆ ಮಾಡಿದರು. ಆದಕಾರಣ ಗುರುವಿನ ಗುಮ್ಮಜ ಮೇಲುಗಡೆ ಇರಬೇಕೆಂದು ರಹಮತ್ ಉಲ್ ಕಿರಮಾನಿ ಬಾಬ ನವರ ಗುಮ್ಮಜ (ಚೌಖಂಡಿ) ಮೇಲುಗಡೆ ಇದೆ. ಕೆಳಗಡೆ ಅಹಮ್ಮದ ಶಾ ಅಲ್ಲಿಯ ಗುಮ್ಮಜ ಇದೆ.

ಅಹಮ್ಮದ ಶಾವಲಿಯ ಅಥವಾ ಅಲ್ಲಮ ಪ್ರಭು ಜಾತ್ರೆಯ ಪ್ರತಿ ವರ್ಷನಡೆಯುವುದು. ಈ ಜಾತ್ರೆಯ ವಿಶೇಷ ಅಂದರೆ ಪ್ರತಿವರ್ಷ ಆಳಂದದಿಂದ

ಸ್ವಾಮಿ ಈ ಪುಣ್ಯಕ್ಷೇತ್ರ ಬರದಿದ್ದರೆ ಜಾತ್ರೆ ನಡೆಯುವುದಿಲ್ಲ. ಆತ ಬಂದ ನಂತರವೇ ಜಾತ್ರೆ ಆಗುತ್ತದೆ.

ಅಲ್ಲಮಪ್ರಭು ಜಾತ್ರೆಯು ಇದು ಹೋಳಿ ಹುಣ್ಣಿಮೆ ಆದ ನಂತರ ಸ್ವಲ್ಪ ದಿವಸಕ್ಕೆ ಆಗುತ್ತದೆ. ಈ ಜಾತ್ರೆ ಐದು ದಿವಸ ನಡೆಯುತ್ತದೆ. ಐದು ದಿವಸ ಪೂಜೆ ನಡೆಯುತ್ತದೆ. ಆಳಂದದಿಂದ ಸ್ವಾಮಿ ಯಾಕೆ ಬರುತ್ತಾರೆ ಎಂದರೆ? ಅಹಮ್ಮದ ಶಾವಲಿಯ ಆಸ್ತಿ (ವಜೀರ್) ಆಳಂದದಲ್ಲಿತ್ತು. ಹೊಲ ಗದ್ದೆ ಆಸ್ತಿ ಎಲ್ಲವನ್ನು ನಾವು ನಿಮಗೆ ಕೊಡಬೇಕು ಎಂದು ತಿಳಿದು, ನಾವು ಇರುವ ತನಕ ನಿಮ್ಮ ಸೇವೆ ಪೂಜೆ ಮಾಡುತ್ತೇವೆ ಎಂದು ಅಂದಿನಿಂದ ಆ ಸ್ವಾಮಿ ಮನೆತನದವರು ಆಳಂದದಿಂದ ಅಹಮ್ಮದ ಶಾವಲಿಯ ಗುಮ್ಮಜಕ್ಕೆ ಅವರು ಬರುತ್ತಾರೆ.

ಸ್ವಾಮಿ ಆಳಂದದಿಂದ ಪಾದಯಾತ್ರೆ ಮಾಡುತ್ತಾ ಬರುತ್ತಾರೆ. ಜೊತೆಯಲ್ಲಿ ಒಂದು ದೊಡ್ಡ ಕೇಸರಿ ಛಡ ಎರಡು ಎಕಮಾಯಿ ದೇವಿ ಪುಟಗಳು ತೆಗೆದುಕೊಂಡು ಬರುತ್ತಾರೆ. ಬರುವಾಗ ಕಮಠಾಣಾ ಗ್ರಾಮದಲ್ಲಿ ಅಲ್ಲಮ ಪ್ರಭುವಿನ ಪಾದ ಸ್ಥಾಪನೆ ಇದೆ. ಆದ್ದರಿಂದ ಅಲ್ಲಿ ಅಲ್ಲಮ ಪ್ರಭುವಿನ ಪಾದಪೂಜೆ ಮುಗಿಸಿಕೊಂಡು ಹಾಗೂ ಅಲ್ಲೆ ಒಂದು ಹೊಲದಲ್ಲಿ ಘುಂಡೆ ಪಲ್ಯ, ಮೆಂತಿ ಪಲ್ಯ, ಬೀಜ ಹಾಕಿ ಅಲ್ಲಿಂದ ನಂತರ ಅಷ್ಟೂರ್ ಗ್ರಾಮದ ಅಲ್ಲಮ ಪ್ರಭುವಿನಲ್ಲಿಗೆ ಬರುತ್ತಾರೆ.

ಇಲ್ಲಿಗೆ ಬಂದ ನಂತರ ಪೂಜೆ ಪ್ರಾರಂಭಿಸುತ್ತಾರೆ. ಆ ಸ್ವಾಮಿಯು ಬರುವ ತನಕ ಪೂಜೆ ಯಾರು ಮಾಡುವುದಿಲ್ಲ. ಆ ಸ್ವಮಿ ಬಂದು ದೇವರಿಗೆ ಗಂಧ ಹಚ್ಚುತ್ತಾನೆ. ಶಂಖ ಉದುತ್ತಾನೆ. ಆತನ ಪೂಜೆ ಆದನಂತರ ಹಿಂದೂ ಮುಸ್ಲಿಂ ಎಲ್ಲಾ ಜನಾಂಗದ ಜನರು ಪೂಜೆ ಮಾಡುತ್ತಾರೆ. ಇದು ಪರಂಪರೆ ಇಂದ ನಡೆದು ಬಂದ ಸಂಪ್ರದಾಯವಾಗಿದೆ. ಇಂದು ಕೂಡಾ ಈ ಪರಂಪರೆ ಮುಂದುವರೆದುಕೊಂಡೇ ಇದೆ.

ಅನೇಕ ಭಕ್ತ ಜನರು ಹಿಂದು ಮುಸ್ಲಿಂ ಜನರು ಅಲ್ಲಮ ಪ್ರಭುವಿನ ಗುಮ್ಮಜ ಎದುರುಗಡೆ ಅನೇಕ ದೀಪಗಳನ್ನು ಹಚ್ಚುತ್ತಾರೆ. ಈ ದೀಪಗಳು ಎರಡೂ ಮೂರು ದಿವಸ ತನಕ ಉರಿಯುತ್ತವೆ ಹಾಗೂ ಸ್ವಾಮಿಯನ್ನು ಅಷ್ಟೂರ್ ಗ್ರಾಮದ ತುಂಬ ಮೇರೆಸುತ್ತಾರೆ. ರಾತ್ರಿ ಭಜನೆ, ಕೀರ್ತನೆ ಇದು ಹಿಂದು ಮುಸ್ಲಿಂ ಎಲ್ಲ ಜಾತಿ ಜನಾಂಗದವರು ಮಾಡುತ್ತಾರೆ.

ಈ ಸ್ವಾಮಿ ಹೋದ ನಂತರ ಐದನೇ ದಿವಸ ಅಷ್ಟೂರ್ ಗ್ರಾಮದಲ್ಲಿ ಜಾತ್ರೆ ಆಗುತ್ತದೆ. ಅಲ್ಲಮ ಪ್ರಭು ಗುಮ್ಮಜದ ಸಮ್ಮುಖದಲ್ಲಿ ನಡೆಯುತ್ತದೆ. ಮುಂಜಾನೆ ಕುಸ್ತಿ ನಡೆಯುತ್ತದೆ. ಊಟ ಕೂಡಾ ಇರುತ್ತದೆ. ಎಲ್ಲಾ ಕಡೆಯಿಂದ ಜನರು ಬರುತ್ತಾರೆ. ಎಲ್ಲಾ ಜನಾಂಗ, ಜಾತಿಯ ಜನರು ಇಲ್ಲಿ ಬಂದು ಜಾತ್ರೆ ಮಾಡುತ್ತಾರೆ. ಹಿಂದೂ ಮತ್ತು ಮುಸ್ಲಿಂ ಜನರು ಅತ್ಯಂತ ಹರ್ಷದಿಂದ ಈ ಜಾತ್ರೆಯನ್ನು ಮಾಡುತ್ತಾರೆ.

ಭಗವಾನ ಪಾರ್ಶ್ವನಾಥ-೩

ಬೀದರ ಜಿಲ್ಲೆಯಲ್ಲಿ ಬರುವ ಮತ್ತೊಂದು ಪ್ರಮುಖವಾದ ಪುಣ್ಯಕ್ಷೇತ್ರ ಭಗವಾನ ಪಾರ್ಶ್ವನಾಥ ಅತಿಶಯ ಕ್ಷೇತ್ರ. ಈ ಕ್ಷೇತ್ರವು ಜೈನ ಧರ್ಮದ ಪ್ರಮುಖವಾದ ಪುಣ್ಯ ಕ್ಷೇತ್ರಗಳಲ್ಲಿ ಒಂದಾಗಿದೆ.

ಈ ಕ್ಷೇತ್ರವು ಬೀದರದಿಂದ ಸುಮಾರು ೧೦ ಕಿ.ಮೀ. ಅಂತರದಲ್ಲಿ ಊರ ಸುತ್ತಲೂ ಜೋಡು ಕಂದಕಗಳನ್ನು ಹೊಂದಿದ ದೊಡ್ಡ ಗ್ರಾಮ ಕಮಠಾಣಾದಲ್ಲಿ ಈ ಪುಣ್ಯಕ್ಷೇತ್ರಇದೆ. ಈ ಕ್ಷೇತ್ರಕ್ಕೆ ಜೈನ ಧರ್ಮದಲ್ಲಿ ಮಹತ್ತರ ಐತಿಹಾಸಿಕ ಹಿನ್ನೆಲೆ ಹೊಂದಿದೆ.

ಜೈನ ಧರ್ಮವು ಅತ್ಯಂತ ಪ್ರಾಚೀನವಾಗಿದ್ದು, ಕ್ರಿ.ಪು. ೪ ನೆಯ ಶತಮಾನದಲ್ಲಿ ದೈವ ಭಕ್ತನಾದ ಮೌರ್ಯ ಚಕ್ರವರ್ತಿ ಚಂದ್ರಗುಪ್ತನಿಗೆ ಕರ್ನಾಟಕದ ಶ್ರವಣ ಬೆಳಗೊಳ ಆಂತರಿಕ ಶುದ್ಧಿಗಾಗಿ ಆಸರೆ ನೀಡಿತ್ತು. ಉತ್ತರ ಭಾರತದಲ್ಲಿ ಜೈನ ಧರ್ಮವು ಹುಟ್ಟಿದರೂ ಹೆಚ್ಚು ಪ್ರಸಾರಗೊಂಡಿದ್ದ, ಕರ್ನಾಟಕದಲ್ಲಿ ಎಂಬುದಕ್ಕೆ ಕನ್ನಡ ನಾಡಿನ ಚರಿತ್ರೆಯೇ ಸಾಕ್ಷಿಯಾಗಿದೆ. ಆತ್ಮ ದರ್ಶನವೇ ಜೈನ ದರ್ಶನದ ತಿರುಳು. ಅಹಿಂಸಾ ಮಾರ್ಗಜೈನ ಧರ್ಮದ ದಿಕ್ಸೂಚಿ. ವಿಶ್ವ ಶಾಂತಿಗೆ ಜೈನರ ಕೊಡುಗೆ ಅಪಾರವಾಗಿದೆ.

ವಿವಿಧ ಧರ್ಮಗಳ ಬೀಡು, ದೇವಾಲಯಗಳು, ಮಸೀದೆ, ಗುರುದ್ವಾರಗಳನ್ನು ಹೀಗೆ ಹಲವು ಧರ್ಮಗಳ ಪುಣ್ಯಕ್ಷೇತ್ರ ಹೊಂದಿದ ಬೀದರ ಜಿಲ್ಲೆಯ ಕರ್ನಾಟಕ ಕಿರೀಟ ಪ್ರಾಯವಾಗಿದೆ. ಬೀದರ ಜಿಲ್ಲೆಯ ಬಸವಕಲ್ಯಾಣ ಹಾಗೂ ಅದರ ನೆರೆಯ ಗ್ರಾಮ ಪಟ್ಟಣಗಳಾದ ಮಿರಖಲ್, ಚಿಟಗುಪ್ಪಾ, ಹುಮನಾಬಾದ ಹಾಗೂ ಭಾಲ್ಕಿ, ಔರಾದ, ಬೀದರ ತಾಲುಕುಗಳಲ್ಲಿಯೂ ಶಿಥಿಲವಾಗಿರುವ ಜಿನಾಲಯಗಳು ಕಂಡು ಬರುತ್ತಿವೆ. ಬೀದರದಿಂದ ೧೫ ಕಿ.ಮೀ. ಅಂತರದಲ್ಲಿ ಕಾಡವಾದ ಗ್ರಾಮ ದೇವರು ಶ್ರೀ ಸಿದ್ದೇಶ್ವರ ದೇವಾಲಯದ ಹೊರಬದಿಯಲ್ಲಿ ತಪೋನಿರತ ಭಗವಾನ ಮಹಾವೀರರ ಮೂರ್ತಿ ಭಘ್ನವಾದರೂ ಚಿತ್ತಾಕರ್ಷಕವಾಗಿದೆ. ಆದರೆ ಕಮಠಾಣಾದಲ್ಲಿ ಬರುವ ಜೈನ ಧರ್ಮ ಪುಣ್ಯಕ್ಷೇತ್ರ ತುಂಬಾ ಮಹತ್ವದಾಗಿದೆ. ಈ ಗ್ರಾಮದಲ್ಲಿ ವಿಠ್ಠಲ ಮಂದಿರ ಪುರಾತನ ಮಠ, ಶ್ರೀ ಭಗವಾನ ಪಾರ್ಶ್ವನಾಥ ದೇವಾಲಯವಿದ್ದು, ಧಾರ್ಮಿಕ ಉತ್ಸವಗಳಿಗೆ ಆಶ್ರಯ ನೀಡಿದೆ. ರಟ್ಟ ಅರಸರ ಕಾಲದಲ್ಲಿ ನಿರ್ಮಾಣಗೊಂಡ ಪಾರ್ಶ್ವನಾಥರ ಕಪ್ಪು ಶಿಲೆಯ ತಪೋನಿರತ ಸುಂದರವಾದ

೪.೫ ಅಡಿಗಳಷ್ಟು ಎತ್ತರವಾಗಿದ ಮೂರ್ತಿ ಇದೆ. ಇದು ೧೧ನೇ ಶತಮಾನದ ಇತಿಹಾಸವುಳ್ಳದ್ದಾಗಿದೆ. ಈ ಜಿನಾಲಯಕ್ಕೆ ೧.೫ ಎಕರೆಗಷ್ಟು ವಿಶಾಲವಾದ ಭೂಮಿಯಿದ್ದು, ಪೂರ್ವ ಮತ್ತು ದಕ್ಷಿಣಕ್ಕೆ ಮಹಾದ್ವಾರಗಳು ಹೊಂದಿದೆ.

ಈ ಗ್ರಾಮದಲ್ಲಿ ಪದ್ಮಣ್ಣ ಬೆಳಕೇರೆ ಎಂಬುವವರ ಪುತ್ರರಬಂದೇ ಕುಟುಂಬವಾದರೂ ಜಿನಾಲಯದ ರಕ್ಷಣೆ ಮಾಡುತ್ತ ಬಂದಿದ್ದಾರೆ. ೧೯೮೭ ರ ಮಾಘು ಶೂದ್ಧ ಪಂಚಮಿಯವರೆಗೆಜಿನಾಲಯದನೆಲಮಾಳಿಗೆಯಲ್ಲಿದ್ದ ಮೂರ್ತಿಯನ್ನು ೧೦೮ ಆಚಾರ್ಯ ಶ್ರೀ ಶ್ರೀತಸಾಗರ ಮುನಿಗಳು ಎತ್ತರದ ವೇದಿಕೆಯ ಮೇಲೆ ಪ್ರತಿಷ್ಠಾಪನೆ ಮಾಡಿಸಿದರು. ವರ್ಷದ ಎಲ್ಲಾ ದಿನಗಳಲ್ಲಿಯೂ ಭಗವಾನರಿಗೆ ಶಾಶ್ವತ ಧ್ರುವ ನಿಧಿಯಿಂದ ಪಂಚಾಮೃತ ಮಹಾಭಿಷೇಕ ಹಾಗೂ ಪೂಜೆ ನಡೆಯುವ ವ್ಯವಸ್ಥೆ ಮಾಡಿದ್ದಾರೆ. ಪ್ರತಿ ವರ್ಷ ಮಾಘ ಶುದ್ಧ ಪಂಚಮಿಯಿಂದ ಸಪ್ತಮಿಯ ವರೆಗೆ ರಥಯಾತ್ರಾ ಮಹೋತ್ಸವ ಜರುಗುತ್ತದೆ. ಈ ಮಹೋತ್ಸವದಲ್ಲಿ ೧೦೮ ಕಲಶಗಳ ಪೂಜೆ, ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಂದ ಅನೇಕ ಜನ ಭಕ್ತರು ಹಾಗೂ ಗುಲಬರ್ಗಾ ಜಿಲ್ಲೆಯಿಂದ ಭಕ್ತರು ಯಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಾರೆ. ಎಲ್ಲಾರೀತಿಯ ವ್ಯವಸ್ಥೆಯಿಂದ ಇಲ್ಲಿ ಆಧುನಿಕ ಪಾಕಶಾಲೆ, ಊಟದಮನೆ, ಸ್ನಾನಗೃಹ ೧೨ವಸತಿಗೃಹಗಳನ್ನು ಹೊಂದಿದೆ.

ಅದೇ ರೀತಿ ಇಲ್ಲಿ ಸುಮಾರು ೨೦೦ ಜನ ಕುಳಿತು ಪ್ರವಚನ ಕೇಳಲು ಅನುಕೂಲವಾಗುವಂತಹ ಪ್ರವಚನ ಮಂದಿರವಿದೆ. ಈಗ ಸುಮಾರು ೫೦೦ ಜನ ಕುಳಿತುಕೊಳ್ಳಲು ಅನುಕೂಲವಾಗುವ ಸಭಾ ಭವನದ ನಿರ್ಮಾಣ ಕಾರ್ಯ ಮುಕ್ತಾಯ ಹಂತ ತಲುಪಿದೆ. ಈಗ ಸುಮಾರು ೨ ಲಕ್ಷ ರೂಪಾಯಿ ವೆಚ್ಚದಲ್ಲಿ ಸುಂದರ ಹಾಗೂ ಭವ್ಯ ಮಾನಸ್ಥಂಬ ನಿರ್ಮಾಣವಾಗಿದ್ದು, ಪಂಚಕಲ್ಯಾಣ ಪೂಜೆಗೆ ಎದುರುನೋಡುತ್ತಿದೆ. ವಾಸ್ತು ಶಾಸ್ತ್ರದ ಪ್ರಕಾರ ಉತ್ತರ ದಿಕ್ಕಿನ ಮಹದ್ವಾರ ಮಹತ್ವವುಳ್ಳದ್ದು ಎಂದು ಅರಿತು ಉತ್ತರ ದಿಕ್ಕಿನ ಕಡೆಗೆ ಉತ್ತಮ ರಸ್ತೆ ನಿರ್ಮಾಣ ನಡೆದಿದ್ದು ಮಹಾದ್ವಾರದ ನಿರ್ಮಾಣ ಕಾರ್ಯ ಆಡಳಿತ ಮಂಡಳಿ ಕೈಗೆತ್ತಿಕೊಂಡಿದೆ.

ಹಿಂದೆ ಇಲ್ಲಿ ಗುರುಕುಲವಿತ್ತೆಂದು ಇಲ್ಲಿ ಶಿಕ್ಷಣ ಪಡೆದ ಹಿರಿಯರು ಹೇಳುತ್ತಾರೆ. ಅದನ್ನೇ ಈಗ ಪುನ: ನಿರ್ಮಾಣ ಮಾಡುವ ಯೋಜನೆ ಮಾಡಲಾಗಿದೆ. ಅದಕ್ಕಾಗಿ "ಶ್ರುತ ಜ್ಞಾನ ವಿದ್ಯಾರ್ಥಿನಿಲಯ" ಎಂಬ ಹೆಸರಿನ ಯೋಜನೆ ಸಿದ್ಧವಾಗಿದೆ. ಆದರೆ ಈ ಪುಣ್ಯ ಕ್ಷೆತ್ರಕ್ಕೆ ಯಾರಾದರೂ ಮುಂದೆಯಾಗಿ ಇದಕ್ಕೆ ಅಭಿವೃದ್ಧಿ ಮಾಡಬೇಕು, ಏಕೆಂದರೆ ಈ ಪುಣ್ಯ ಕ್ಷೇತ್ರ ಅಭಿವೃದ್ಧಿ ಪಥದಲ್ಲಿ ಮುಂದೆ ಸಾಗುತ್ತಿದ್ದು, ಜೋರ್ಣದ್ಧಾರದ ಕಾರ್ಯ ತೀವ್ರಗತಿಯಲ್ಲಿದೆ. ಆಸಕ್ತರು ದಾನಿಗಳು ಇಂತಹ ಒಂದು ಪುಣ್ಯ ಕ್ಷೇತ್ರದಲ್ಲಿ ಉದಾರ ಹಸ್ತದಿಂದ ಧನಸಹಾಯ ನೀಡುತ್ತಾ ಬಂದರೆ ಕೆಲವೇ ವರ್ಷಗಳಲ್ಲಿ ಬೀದರ ಜಿಲ್ಲೆ ಜೈನರ ಉತ್ತಮ ಮತ್ತು ಒಂದು ಮಹತ್ವ ಪೂರ್ಣವಾದ ವಿಶೇಷವಾದ ಪುಣ್ಯ ಕ್ಷೇತ್ರವಾಗುವುದು.

ಬೀದರ ನಗರದಲ್ಲಿ ೩೫-೪೦ ಜೈನ ಕುಟುಂಬಗಳಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಪಾರಿಗಳಾಗಿದ್ದಾರೆ. ಧಾರ್ಮಿಕ ಕೆಲಸಗಳಲ್ಲಿ ತನು ಮನ ಧನಗಳಿಂದ ಸಹಾಯಮಾಡಿ ಕೊಡಗೈದಾನಿಗಳೆನಿಸಿದ್ದಾರೆ. ಈ ದಾನ ಗುಣ ಇಂದಿಗೂ ನಾವು ಜೈನರಲ್ಲಿ ಸ್ಫುಟವಾಗಿದ್ದುದ್ದನ್ನು ಕಾಣುತ್ತೇವೆ. ಜಿನಬಿಂಬ, ಜಿನಶಾಸ್ತ್ರ, ಜಿನಮುನಿಗಳಲ್ಲಿ ಇವರದು ಅಪಾರವಾದ ನಿಷ್ಠೆ ಭಕ್ತಿತುಂಬಿದೆ. ತಾಗ್ಯದ ಪ್ರತಿಕವೇ ಜೈನ ಧರ್ಮ ೨೩ ನೇಯ ತೀರ್ಥಂಕರರಾದ ಭಗವಾನ ಪಾರ್ಶ್ವನಾಥರು ಆತ್ಮಸಂಯಮವೇ ಮೋಕ್ಷಕ್ಕೆ ಉತ್ತಮ ಮಾರ್ಗವೆಂದು ಹಾಗೂ ಅಹಿಂಸಾ ತತ್ವವನ್ನು ತೋರಿಸಿಕೊಟ್ಟ ಶಾಂತಿ ದೃಷ್ಟಾರರು ಅಹಿಂಸಾ ಶಾಂತಿ ಮಂತ್ರವನ್ನು ಹೊತ್ತ ತೀರ್ಥಂಕರರ ನಡೆ ಪಾವನ, ಶ್ರೀ ಜಯಭದ್ರ ಮುನಿಗಳು ಶ್ರೀ ಶೃತಸಾಗರ ಮುನಿಗಳು ಹಾಗೂ ಶ್ರೀ ಅಜೀತಸಾಗರ ಮುನಿಗಳು ಆಗಾಗ ಆಗಮಿಸಿ ಪ್ರವಚನ, ಆತ್ಮ ಚಿಂತೆಗಳಿಂದ ಈ ನೆಲವನ್ನು ಪಾವನಗೊಳಿಸಿದ್ದಾರೆ. ಜೈನ ಧರ್ಮದಲ್ಲಿ ಮಹತ್ವದ ಪುಣ್ಯ ಕ್ಷೇತ್ರವಾಗಿ ಮಾಡಿದ್ದಾರೆ.

ಈ ಪುಣ್ಯಕ್ಷೇತ್ರಕ್ಕೆ ಈವಾಗ ಜೈನರು ಮಾತ್ರ ಬರುವುದಿಲ್ಲ ಎಲ್ಲಾ ಜನಾಂಗದವರು ಎಲ್ಲಾ ರಾಜ್ಯದ ವಿದೇಶಿ ಜನರು ಸಹ ಈ ಪುಣ್ಯಕ್ಷೇತ್ರಕ್ಕೆ ಬಂದು ಪವಿತ್ರರಾಗುತ್ತಾರೆ.

ಸರ್ವ-ಮಂಗಲಂ-ಮಾಂಗಲ್ಯೋ ಸರ್ವಕಲ್ಯಾಣ ಕಾರಕಂ ಎಂಬ ತತ್ವ ಈ ಕ್ಷೇತ್ರದ ನೆಲಕ್ಕಿದೆ. ಕಮಠಾಣಾ ಗ್ರಾಮವು ಬೀದರ ಜಿಲ್ಲೆಯ ಒಂದು ಪವಿತ್ರ ಪುಣ್ಯಕ್ಷೇತ್ರ, ಜಿನ ಭಕ್ತರ ನಿರಂತರ ಓಡಾಟದಿಂದ ಈ ಕ್ಷೇತ್ರವು ತ್ವರಿತಗತಿಯಲ್ಲಿ ಜೀರ್ಣೋದ್ಧಾರವಾಗುತ್ತಲಿದೆ. ಅಹಿಂಸಾ ತತ್ವ "ಬದುಕು-ಬದುಕಲು ಬಿಡಿ" ಎಂಬ ತತ್ವಗಳು ದಶದಿಕ್ಕುಗಳಲ್ಲಿ ಹರಡುತ್ತಲಿವೆ. ಶಾಂತಿಯೋಗದ ಸಂಕೇತದಂತಿರುವ ಅತಿಶಯ ಕ್ಷೇತ್ರ ಕಮಠಾಣಾದ ಜಿನಾಲಯವು ಬೀದರ ಮನ್ನಾಎಖೇಳ್ಳಿಯ ಹೆದ್ದಾರಿಯಲ್ಲಿದೆ ಶಾಂತಿ ಬಯಸುವೊಡೆ ಓ ಯಾತ್ರಿಕನೇ ಬಾ ಇಲ್ಲಿ ಏಕಿಂತು ಅಲೆಯುತ್ತಿರುವೆ? ಎಂದು ಈ ಅತಿಶಯ ಪುಣ್ಯಕ್ಷೇತ್ರಕ್ಕೆ ಯಾತ್ರಿಕರು ಬಂದು ಪುಣ್ಯವಂತರಾಗಿ ಎಂಬುವುದೇ ಈ ಪುಣ್ಯಕ್ಷೇತ್ರದ ಭಗವಾನ ಪಾರ್ಶ್ವನಾಥಸಂದೇಶವಾಗಿದೆ.

ಶ್ರೀ ಅಮರೇಶ್ವರ-೭

ಬೀದರ ಜಿಲ್ಲೆಯ ಔರಾದ ತಾಲೂಕಿನಲ್ಲಿ ಸುಮಾರು ವರ್ಷಗಳ ಇತಿಹಾಸ ಹೊಂದಿದೆ. ಸಾಕ್ಷಾತ್ ದೇವರೆ ನೆಲಸಿದ ಪುಣ್ಯಕ್ಷೇತ್ರ ಶ್ರೀ ಅಮರೇಶ್ವರ ಪುಣ್ಯಕ್ಷೇತ್ರ ಈ ಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಿದೆ. ಅಮರೇಶ್ವರ ದೇವಸ್ಥಾನವು ಸುಮಾರು ೧೦೮ ವರ್ಷದ ಹಿಂದೆ ಉದ್ಭವವಾಯಿತು ಎನ್ನಲಾಗಿದೆ.

ಈ ಪುಣ್ಯಕ್ಷೇತ್ರ ಬೀದರ ಜಿಲ್ಲೆಯಿಂದ ೪೦ ಕಿ.ಮೀ. ದೂರದಲ್ಲಿದ್ದ ಔರಾದ ತಾಲೂಕಾದಲ್ಲಿದೆ. ಔರಾದ ಇದನ್ನು ಚಾಲುಕ್ಯರ ದೊರೆ ೪ ನೇ ವಿಕ್ರಮಾದಿತ್ಯ ಆಳ್ವಿಕೆ ಮಾಡಿದ್ದಾನೆ. ಅವನ ಕಾಲದಲ್ಲಿ ಇದಕ್ಕೆ ಅಮರವಾಡಿ ಎಂದು ಕರೆಯುತ್ತಿದ್ದರು. ಮುಂದೆ ಅಮರೇಶ್ವರ ದೇವರ ಉದ್ಭವನದಿಂದ ಇದಕ್ಕೆ ಅಮರವಾಡಿ ಎಂದು ಕರೆಯಲು ಆರಂಭಿಸಿದರು. ಸ್ವಾತಂತ್ರ್ಯ ನಂತರ ಇದಕ್ಕೆ ಔರಾದ ಎಂದು ಗುರುತಿಸಿ ಕರೆಯಲಾರಂಭಿಸಿದರು.

ಈ ಪುಣ್ಯಕ್ಷೇತ್ರವು ಎಲ್ಲಾ ಪುಣ್ಯಕ್ಷೇತ್ರಕ್ಕಿಂತ ವಿಶಿಷ್ಟವಾದುದು. ಏಕೆಂದರೆ, ಎಲ್ಲಾ ಕಡೆ ಹೆಚ್ಚಾಗಿ ದೇವರನ್ನು ಸ್ಥಾಪನೆ ಮಾಡಿದ್ದು ನೋಡುತ್ತೇವೆ. ಆದರೆ ಈ ಅಮರೇಶ್ವರ ದೇವರು ಉದ್ಭವವಾದ ದೇವರು . ಆದ್ದರಿಂದ ಇಲ್ಲಿ ದೇವರೇ ಸೃಷ್ಟಿಮಾಡಿ ಉದ್ಭವವಾದ ದೇವರು ಎಂದು ತುಂಬಾ ಭಕ್ತಿಯಿಂದನಮ್ಮ ಕರ್ನಾಟಕದಲ್ಲಿ ಸುತ್ತ ಮುತ್ತಲಿನ ಜನರು ಇಲ್ಲಿಗೆ ದರ್ಶನಕ್ಕೆ ಬರುವರು.

ಈ ಪುಣ್ಯಕ್ಷೇತ್ರದ ದೇವರ ಉದ್ಭವ ಬಗ್ಗೆ:

ಔರಾದವು ಕೇವಲ ಕೆಲವೇ ೩೦-೪೦ ಮನೆಗಳುಳ್ಳ ಒಂದು ಚಿಕ್ಕ ಹಳ್ಳಿಯಾಗಿತ್ತು. ಇಲ್ಲಿ ಒಂದು "ಅಗಸಿ" ಇದೆ ಇದು ಕಲ್ಲಿನಿಂದ ಕಟ್ಟಲಾಗಿದೆ. ಇದರ ಸುತ್ತಲು ಕೇವಲ ಮುಳ್ಳಿನ ಗಿಡಗಳು ಮತ್ತು ಕೆಲವೊಂದು ಗಿಡಗಳಿಂದ ಕೂಡಿದ ಬಯಲು ಪ್ರದೇಶವಾಗಿತ್ತು. ಈ ಬಯಲು ಪ್ರದೇಶದಲ್ಲಿ ಒಂದು ದೊಡ್ಡದಾದ ಅಂದರೆ ೫ ಮೀ. ಎತ್ತರದ ಹಾವಿನ ಹುತ್ತ ಇತ್ತು. ಆ ಹುತ್ತಿನಲ್ಲಿ ದಿನಾಲು ಒಂದು ಆಕಳು ಬಂದು ಹಾಲು ಬಿಡುತ್ತಿತ್ತು. ಆ ಆಕಳು ಬೀದರ ಹತ್ತಿರದ ೧೦ ಕಿ.ಮೀ. ದೂರದಲ್ಲಿರುವ ಕಮಠಾಣಾದಿಂದ ಬರುತ್ತಿತ್ತು ಎಂದು ಹೇಳುತ್ತಾರೆ.

ಇಲ್ಲಿಗೆ ಬಂದು ಆ ಹುತ್ತಿನಲ್ಲಿ ಹಾಲು ಎರೆದು ಬಿಟ್ಟು ಪುನ; ಕಮಠಾಣಾಗೆ ಹೋಗುತ್ತಿತ್ತು. ಇದೆ ರೀತಿ ಕೆಲವು ದಿನಗಳು ಕಳೆದವು. ಆ ಆಕಳಿನ ಮಾಲಿಕನು ದಿನಾಲು ರಾತ್ರಿ ಹಾಲುಕರೆಯಲು ಹೋದರೆ ಅದು ಹಾಲು ನೀಡುತ್ತಿದ್ದಿರಲಿಲ್ಲ. ಆ ಮಾಲಿಕನಿಗೆ ಚಿಂತೆ ಹತ್ತಲು ಪ್ರಾರಂಭಿಸಿ ಆತನು ಈ ಆಕಳಿಂದ ನನಗೆ ಏನು ಪ್ರಯೋಜನವಿಲ್ಲಾವೆಂದು ತಿಳಿದು ಈ ಆಕಳನ್ನು ಖಟುಕರಿಗೆ ಮಾರಿಬಿಟ್ಟ. ಆ ಖಟುಕರಿಗೆ ಆಕಳು ಹಿಡಿಯಲು ಸಾಧ್ಯವಾಗುವುದಿಲ್ಲ. ಅದರ ಹಿಂದೆ-ಹಿಂದೆ ಬಂದರು ಆ ಆಕಳು ಓಡಿಹೋಗುತ್ತಿತ್ತು. ಅಂತೇ ಆದರೆ ಆಕಳು ಮಾತ್ರ ತನ್ನ ದಿನ ನಿತ್ಯದಂತೆ ಔರಾದಿನಲ್ಲಿರುವ ಹಾವಿನ ಹುತ್ತಿಗೆ ಹಾಲು ಹಾಕಲಿಕ್ಕೆ ಬಂದಿತ್ತು. ಇದರ ಹಿಂದೆಯೇ ಹಿಂಬಾಲಿಸುತ್ತಾ ಬಂದ ಆ ಖಟುಕರು ಅದನ್ನು ದೂರದಿಂದ ಗಿಡದ ಅಡ್ಡ ನಿಂತು ನೋಡುತ್ತಿದ್ದರು. ಇದನ್ನು ನೋಡಿ ಅವರು ಒಂದು ಉಪಾಯ ಹುಡುಕಿದರು. ಈ ಆಕಳು ಹಾಕುವ ಈ ಹಾವಿನ ಹುತ್ತನ್ನೆ ತೆಗೆದು ಹಾಕಿದರೆ ಹೇಗೆ. ಈ ಆಕಳು ಈ ಕಡೆ ಬರುವುದಿಲ್ಲ. ನಮ್ಮ ಕೈಗೆ ಸುಲಭವಾಗಿ ಸಿಗುತ್ತದೆ ಎಂದು ಉಪಾಯ ಹುಡುಕಿ ಕೆದರಲು ಪ್ರಾರಂಭಿಸಿದಾಗ ಒಳಗಿನಿಂದ ಒಂದು ಶಬ್ದ ಕೇಳಿಬಂತು "ನೀವು ಯಾರು ಏಕೆ? ಹೊಡೆಯುತ್ತಿದ್ದಿರಿ" ಎಂಬ ಮಾತು ಕೇಳಿದಾಗ ಮೇಲೆ ಇದ್ದವರು ಕೇಳಿದರಂತೆ ನೀವು ಯಾರು ಎಂದು ಕೇಳಿದ್ದರು. ಅವರು ಒಳಗಿನಿಂದ ನಾನು ಅಮರೇಶ್ವರ ಇದಿನಿ ಎಂದು ಹೇಳಿದ್ದರು. ಆಗ ಈ ಜನ ಹಾಗೆಯೇ ಆ ಹುತ್ತನ್ನು ಬಿಟ್ಟು ಹೋದರು. ನಂತರ ಇವರು ಆಕಳ ಹಿಂದೆ ಹೋದರು. ಆದರೆ ಆ ಆಕಳು ಔರಾದದಿಂದ ೬ ಕಿ.ಮೀ. ದೂರದಲ್ಲಿರುವ ಎನಗುಂದಾ ಗ್ರಾಮಕ್ಕೆ ಹೋಯಿತು. ಮಧ್ಯರಾತ್ರಿಯಾಗಿತ್ತು. ಅಲ್ಲಿ ಆ ಅಗಸಿಯಬಾಗಿಲು ಮುಚ್ಚಿತ್ತು. ಅದರ ಹತ್ತಿರ ಒಂದು ಹಣಮಂತ ದೇವಸ್ಥಾನ ಇತ್ತು. ಆ ಹನುಮಂತ ದೇವರಿಗೆ ಹೋಗಿ ತಲೆಯಿಂದ ಬಾಗಿಸಿ, ಅಲ್ಲಿ ಒಂದು ಬಾವಿ ಇದೆ, ಅದರ ಮೇಲೆ ಕುಳಿತು ಅಲ್ಲೆ ಐಕ್ಯವಾಯಿತು. ಎಂದು ಇಲ್ಲಿನ ಭಕ್ತರು ಈ ಕಥೆ ಹೇಳುತ್ತಾರೆ. ಈ ಕಥೆಯ ಹಿನ್ನೆಲೆಯೇ ಈ ಪುಣ್ಯಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಿದೆ. ಇಲ್ಲಿ ಸಾಕ್ಷಾತ್ ಅಮರೇಶ್ವರ ದೇವರು ನೆಲಸಿದ್ದಾರೆ ಎಂಬ ನಂಬಿಕೆಯಿದೆ. ಮತ್ತು ಈ ಕ್ಷೇತ್ರಕ್ಕೆ ಬಂದ ಭಕ್ತರು ತಮ್ಮ ಕಷ್ಟಗಳಿಗೆ ಪರಿಹರಿಸಿಕೊಂಡೆಯೇ ಹೋಗುತ್ತಾರೆ.

ದೇವಸ್ಥಾನದ ಕಟ್ಟಡ:

ದೇವಸ್ಥಾನದ ಬಗ್ಗೆ ಹೇಳಬೇಕೆಂದರೆ ಈ ದೇವಸ್ಥಾನ ತುಂಬ ಸುಂದರವಾಗಿ ಐತಿಹಾಸಿಕ ಹಿನ್ನೆಲೆ ಒಳಗೊಂಡ ಪುಣ್ಯಕ್ಷೇತ್ರ. ಈ ಕ್ಷೇತ್ರ ನಿರ್ಮಾಣಕ್ಕೆ ಮೂಲ ಕಾರಣವೇ ಆ ಹುತ್ತಿನಿಂದ ಮತ್ತು ಆಕಳಿನಿಂದಲೇ ಇಲ್ಲಿ ಒಂದು ದೇವಸ್ಥಾನ ಕಟ್ಟಬೇಕು ಎಂದು ಎಲ್ಲರೂ ಸೇರಿ ಸಮಾಲೋಚಿಸಿ ಇಲ್ಲಿ ಹುತ್ತಿನಿಂದ ಕೇಳಿಬಂದ ಧ್ವನಿ ಮತ್ತು ಆಕಳು ದಿನಾಲು ಆ ಹುತ್ತಿಗೆ ಬಂದು ಯಾರದು ಸಹಾಯವಿಲ್ಲದೇ ಹಾಲು ಸುರಿದು ಹೋಗುವುದು ನೋಡಿ ಇದನ್ನೆಲ್ಲಾ ಮಾನವನಿಂದ ಸಾಧ್ಯವಿಲ್ಲ. ಇಲ್ಲಿ ಒಂದು ವಿಶಿಷ್ಟವಾದ ಏನೋ ಒಂದು ಶಕ್ತಿ ಅಡಗಿದೆ. ಈ ಶಕ್ತಿ ಅಥವಾ ಮಹಿಮೆ ನಾಡೇಲ್ಲೆಲ್ಲ ಜನರಿಗೆ ಪರಿಚಯವಾಗಲಿ. ಈ ಪುಣ್ಯಕ್ಷೇತ್ರ ಮಹಿಮೆ ಗೊತ್ತಾಗಲಿಲ್ಲ. ಎಂಬ ಉದ್ದೇಶದಿಂದ ಇಲ್ಲಿ ದೇವಸ್ಥಾನ ಕಟ್ಟಲು ಪ್ರಾರಂಭಿಸಿದರು. ೧೯೫೭ ರಲ್ಲಿ ದೇವಸ್ಥಾನಕ್ಕೆ ಅಡಿಪಾಯ ಹಾಕಿದ್ದರು. ಎಲ್ಲರು ಮನೆಯಿಂದ ಹಣವನ್ನು ಸಂಗ್ರಹಿಸಿ, ಆ ದೇವಸ್ಥಾನ ನಿರ್ಮಾಣಮಾಡಿ ಈ ಅಮರೇಶ್ವರ ದೇವರು ಈ ಊರಿನ ಜನರು ನಮ್ಮ ಊರಿನ ದೇವರು ಎಂದು ಭಕ್ತಿ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಹಾಗೆಯೇ (ಇಲ್ಲಿ ಒಂದು ಅರಬ್ಬಿ ಭಾಷೆಯ ಲಿಪಿಯಿದೆ, ಅದರಲ್ಲಿ ಇದನ್ನು ಚಾಲುಕ್ಯರ ೪ ವಿ.ಕ್ರ. ಆಳ್ವಿಕೆ ಮಾಡಿದ್ದನ್ನು ಎಂದು) ಇಲ್ಲಿ ಒಬ್ಬ ಮೈಸೂರಿನಿಂದ ಬಂದ ವಿದ್ವಾಂಸರು ಹೇಳಿದ್ದಾರೆ.

ಹಾಗೆಯೇ ಈ ಪುಣ್ಯಕ್ಷೇತ್ರ ಜಾತ್ರೆಯವು ಔರಾದ ಊರಿನಲ್ಲಿ ದೇಶಮುಖರ ಮನೆತನದ ಶಂಕರಾಮ ದೇಶಮುಖ ಎಂಬುವರು ೧೯೬೦ ರಲ್ಲಿ ಜಾತ್ರೆ ಪ್ರಾರಂಭಿಸಿದ್ದರು. ಜಾತ್ರೆ ಮಹಾಶಿವರಾತ್ರಿಯ ದಿನದಿಂದ ಐದು ದಿನ ಇರುತ್ತದೆ. ಐದು ದಿನ ತುಂಬಾ ವಿಶೇಷವಾದ ಪೂಜೆ, ಅಭಿಷೇಕ ನಡೆಯುತ್ತವೆ. ರಥ ಉತ್ಸವ ನಡೆಯುವುದು, ಈ ಜಾತ್ರೆ ಶಿವರಾತ್ರಿ ಇನ್ನೂ ೧೫ ದಿವಸಗಳ ಮುಂಚೆಯೇ ಊರಲ್ಲೆಲ್ಲಾ ಜಾತ್ರೆ ತಯಾರಿ ಮಾಡುವರು. ಈ ಜಾತ್ರೆಯು ಮಹಾಶಿವರಾತ್ರಿಯಿಂದ ಹೋಳೆಹುಣ್ಣಿಮೆಯವರಿಗೆ ೧ತಿಂಗಳ ವರೆಗೆ ನಡೆಯುತ್ತದೆ. ಈ ಜಾತ್ರೆಯ ಸಮಯದಲ್ಲಿ ಹರಕೆಗಳ ತೀರಿಸಲಿಕ್ಕೆ ಹೆಚ್ಚಾಗಿ ಬರುತ್ತಾರೆ. ಈ ಜಾತ್ರೆಯಲ್ಲಿ ಆಂಧ್ರ ಮತ್ತು ಮಹಾರಾಷ್ಟ್ರದ ಹಾಗೂ ಕರ್ನಾಟಕದ ವಿವಿಧ ಕಡೆಗಳಿಂದ ಭಕ್ತಾದಿಗಳು ಬರುತ್ತಾರೆ.

ಜಾತ್ರೆಯ ಸಮಯದಲ್ಲಿ ಅಗ್ನಿ ತುಳಿಯುವುದು ಮೊದಲನೇ ದಿನದದ್ದು, ಅದು ಗುಡಿಯನ್ನು ಬಿಟ್ಟು ೧/೪ ಕಿ.ಮೀ. ದೂರದಲ್ಲಿದ್ದ ಅಗ್ನಿ ಬಸವಣ್ಣನ

ಹತ್ತಿರ ಅಗ್ನಿ ತುಳಿಯುತ್ತಾರೆ. ಇಲ್ಲಿ ಒಂದು ವಿಶಿಷ್ಟವಾದ ಮಹಿಮೆ ನಡೆಯುತ್ತದೆ. ಅದು ಏನೆಂದರೆ, ಎಲ್ಲಾ ಭಕ್ತರು ಬೆಂಕಿಯ ಮೇಲಿಂದ ನಡೆಯುತ್ತಾರೆ. ಆದರೆ ಯಾರಿಗೂ ಏನು ಆಗುವುದಿಲ್ಲ. ಇಲ್ಲಿ ಚಿಕ್ಕ ವಯಸ್ಸಿನವರಿಂದ ಯುವಕರು, ವಯಸ್ಸಾದವರು ಎಲ್ಲರೂ ಬೆಂಕಿಯ ಮೇಲೆ ನಡೆಯುತ್ತಾರೆ. ಆದರೆ ಯಾರಿಗೂ ಏನು ಆಗದು, ಇದಲ್ಲದೇ ಈ ಪುಣ್ಯಕ್ಷೇತ್ರ ಮಹಿಮೆ ಎನ್ನುತ್ತಾರೆ. ಈ ಕ್ಷೇತ್ರಕ್ಕೆ ಯಾರು ಭಕ್ತಿಯಿಂದ ನಡೆಯುತ್ತಾರೆ ಅವರಿಗೆ ಏನು ಆಗುವುದಿಲ್ಲ. ಮತ್ತು ಯಾರು ಪಾಪ ಮಾಡಿ ಈ ದೇವರಿಗೆ ಅಗ್ನಿತುಳಿಯುತ್ತಾರೆ ಅವರಿಗೆ ಏನಾದರು ಒಂದು ತೊಂದರೆ ಕಾಣಿಸಿಕೊಳ್ಳುವುದು ಮತ್ತು ಈ ಒಂದು ಮಹಿಮೆಯಿಂದ ಜನರಿಗೆ ವಿಶೇಷವಾದ ನಂಬಿಕೆ, ಭಕ್ತಿ, ಶ್ರದ್ಧೆ, ವಿಶ್ವಾಸ ಈ ಪುಣ್ಯ ಕ್ಷೇತ್ರಕ್ಕೆ ಇದೆ. ಈ ಅಗ್ನಿ ತುಳಿಯುವುದು ಹರಕೆ ಕೂಡ ಮಾಡಿ ನಂತರ ಹರಕೆ ಪೂರ್ಣಗೊಂಡ ನಂತರ ಜಾತ್ರೆಯ ಸಮಯದಲ್ಲಿ ಅಗ್ನಿ ತುಳಿಯುವುದರ ಮೂಲಕ ಹರಕೆ ದೇವರಿಗೆ ಸಲ್ಲಿಸುತ್ತಾರೆ.

ಜಾತ್ರೆಯ ೫ ದಿನ ರಾತ್ರಿ ಊರಿನಲ್ಲಿ ಪಾಲಿಕೆಯ ಮುಖಾಂತರ ಮೆರವಣಿಗೆ ಮಾಡುತ್ತಾರೆ. ವಚನಗಳು ಹೇಳುವುದು, ಯುವಕರು ಕೋಲು ಆಡುವುದು ಈ ಕೋಲು ತುಂಬಾ ವಿಶೇಷವಾಗಿ ಆಡುತ್ತಾರೆ. ಊರಿನ ಎಲ್ಲಾ ಯುವಕರು ಕೂಡಿ ಜಾತ್ರೆಯ ಮುಂಚೆಯೇ ಈ ಕೋಲಿನ ಆಟಕ್ಕೆ ತಯಾರಿಮಾಡಿಕೊಳ್ಳುತ್ತಾರೆ. ಈ ಕೋಲಿನ ಆಟ ಆಡುವಾಗ ಇವರು ವಿಶೇಷವಾದ ಭಂಗಿಯಲ್ಲಿ ಹೆಜ್ಜೆ ಹಾಕುತ್ತಾ ದೇವರ ನಾಮಗಳನ್ನು ಹಾಡುತ್ತಾ ಕೋಲನಾಡುವರು. ಈ ಕೋಲನಾಡುವಾಗ ಸಹ ಅವರ ಶ್ರದ್ಧೆ ಭಕ್ತಿಯಿಂದ ಆಡಿದರೆ ಅವರಿಗೆ ಒಳ್ಳೆಯದಾಗುತ್ತದೆ ಮತ್ತು ತಮ್ಮ ಪಾಪಕರ್ಮಗಳನ್ನು ಕಳೆದು ಪುಣ್ಯಸಿಗುತ್ತದೆ ಎಂಬ ಭಾವನೆಯಿಂದ ತಮ್ಮ ಸ್ವ ಇಚ್ಛೆಯಿಂದ ಯುವಕರು ಕೋಲಾಟದಲ್ಲಿ ಭಾಗವಹಿಸುವರು

ಹಾಗೆಯೇ ಪಾಲಕಿಯ ಮೆರವಣಿಗೆ ಮಾಡುವಾಗ ಪಾಲಕಿಯನ್ನು ಹಿಡಿಯಲು ಎಲ್ಲರು ಮುಂದಾಗುತ್ತಾರೆ. ಕೈ ಹಿಡಿದರೆ ತಾವು ಮಾಡಿದ ಪಾಪ ಕರ್ಮಗಳನ್ನು ಮತ್ತು ಮೈಯಲ್ಲಿ ಇದ್ದ ರೋಗಗಳು ದೂರವಾಗಿ ಪುಣ್ಯ ದೊರೆಯುತ್ತದೆ ಎಂಬ ಭಾವನೆ ಮತ್ತು ನಂಬಿಕೆಯಿಂದ ಎಲ್ಲರೂ ತಮ್ಮ ಸಾಧ್ಯವಾದಷ್ಟು ಈ ಪಾಲಿಕೆಗೆ ಕೈಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಕ್ಷೇತ್ರದಲ್ಲಿ ದೇವರು ಸಾಕ್ಷಾತವಾಗಿ ಯಾವುದೋ ಒಂದು ರೂಪದಲ್ಲಿ

ಇದ್ದಾರೆ. ಎಂಬ ಭಾವನೆ ಈ ಕ್ಷೇತ್ರಕ್ಕೆ ಹೋದಾಗ ಅನಿಸುವುದು. ಈ ಕ್ಷೇತ್ರ ಇಷ್ಟೊಂದು ಪವಿತ್ರ ಪುಣ್ಯಕ್ಷೇತ್ರವಾಗಲು ಇಲ್ಲಿನ ಈ ದೇವರ ಬಗ್ಗೆ ಹಿಂದಿನಿಂದ ಬಂದ ಐತಿಹಾಸಿಕ ಕಥೆ ಮತ್ತು ಮಹಿಮೆಗಳೇ ಕಾರಣವೆನ್ನಬಹುದು.

ಪಾಲಿಕೆಯ ಮೆರವಣಿಗೆ ಬರುವಾಗ ಪ್ರತಿ ಒಂದು ಮನೆಯ ಮುಂದೆ ತೊಳೆದು ರಂಗೋಲಿ ಹಾಕಿ ದೇವರಿಗೆ ಸ್ವಾಗತಿಸುತ್ತಾರೆ. ಒಬ್ಬರ ತಲೆಯ ಮೇಲೆ ಹೊತ್ತಿಕೊಂಡು ಹೋಗುತ್ತಾರೆ. ಪ್ರತಿಯೊಂದು ಮನೆಯ ಮುಂದೆ ದೇವರಿಗೆ ಹೊದಿಕೆ ಹಂಚಿ, ತೆಂಗು ಒಡೆಯುತ್ತಾರೆ ಮತ್ತು ಭಕ್ತಿಯಿಂದ ದೇವರಿಗೆ ಕೈ ಮುಗಿದು ತಮ್ಮ ಕಷ್ಟಗಳು ಮತ್ತು ಮಳೆ, ಬೆಳೆ ಚೆನ್ನಾಗಿ ಬರಲಿ ಮತ್ತು ಊರಿಗೆ ಒಳ್ಳೆಯದಾಗಲಿ ಎಂಬ ಭಾವನೆಯಿಂದಲೋ ಆ ದೇವರಿಗೆ ಬೇಡಿಕೊಳ್ಳುತ್ತಾರೆ.

ಇಡೀ ರಾತ್ರಿಯೆಲ್ಲಾ ಊರಿನ ಎಲ್ಲಾ ಕಡೆ ಮೆರವಣಿಗೆ ತೆಗೆದು ಬೆಳಿಗ್ಗೆ ರಥದಲ್ಲಿ ದೇವರು ತಂದು ಕೂಡಿಸುತ್ತಾರೆ. ಜಾತ್ರೆಯ ಸಮಯದಲ್ಲಿ ಸಾಂಸ್ಕೃತಿಕ ಹಿನ್ನೆಲೆಯಾಗಿ ಕೂಡಾ ಕೆಲವು ಆಟಗಳು ಆಡುತ್ತಾರೆ. ಅದರಲ್ಲಿ ಊರಿನ ಜಾನುವಾರುಗಳ ಪ್ರದರ್ಶನ ನಡೆಯುತ್ತದೆ. ಅವರಲ್ಲಿ ಪ್ರಥಮ ಬಂದವರಿಗೆ ಎತ್ತುಗಳ ಮಾಲೀಕರಿಗೆ ಪುರಸ್ಕಾರ ನೀಡಲಾಗುವುದು.

ಕೊನೆಯ ದಿನ ಕುಸ್ತಿ ಇಡಲಾಗುತ್ತದೆ, ಔರಾದ ಗಡಿ ಭಾಗದಲ್ಲಿದ್ದರಿಂದ ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ವಿವಿಧ ಪೆಹೆಲ್ವಾನರು ಬರುತ್ತಾರೆ. ಅದನ್ನು ನೋಡಲು ಅನೇಕ ಜನರು ಪಾಲ್ಗೊಳ್ಳುತ್ತಾರೆ. ಈ ಕ್ಷೇತ್ರದ ಕಟ್ಟಡದ ಚಿತ್ರಣ ನೋಡಿದಾಗ ವಿಶಿಷ್ಟವಾಗಿ ಮತ್ತು ಸುಂದರವಾಗಿ ಕಂಡು ಬರುವುದು. ಈ ದೇವಸ್ಥಾನಕ್ಕೆ ಗೋಪುರವಿದೆ. ಗೊಪುರದ ಮೇಲೆ ಆಕಳು ಲಿಂಗದ ಮೇಲೆ ಹಾಲು ಹಾಕುತ್ತಿರುವ ದೃಶ್ಯವು ತುಂಬಾ ಸುಂದರವಾಗಿ ಕೆತ್ತಲಾಗಿದೆ. ಈ ಕ್ಷೇತ್ರ ಕಥೆ ಅಥವಾ ಹಿನ್ನೆಲೆ ಈ ಒಂದು ಗೋಪುರದಿಂದಲೇ ತಿಳಿದುಕೊಳ್ಳಬಹುದು.

ಈ ಪುಣ್ಯ ಕ್ಷೇತ್ರದಲ್ಲಿ ಪ್ರತಿ ವರ್ಷ ದೀಪಾವಳಿಯಿಂದ ಮುಂಜಾನೆ ಜಪ, ಓಂ ನಮ: ಶಿವಾಯವೆಂದು ೩ ತಿಂಗಳ ನಡೆಯುತ್ತದೆ. ಈ ಜಪ ಮಾಡುವುದು ಅವರಮಾಡಿದ ಪಾಪವನ್ನು ಕಳೆದುಕೊಂಡು ಪುಣ್ಯ ಪ್ರಾಪ್ತವಾಗಲಿ ಮತ್ತು ಊರಿಗೆ ಒಳಿತಾಗಲೆಂಬುದೇ ಇವರ ಜಪ ಮಾಡುವ ಉದ್ದೇಶ ಕೊನೆಗೆ ಮಹಾರಾಷ್ಟ್ರದ ಪರಳಿಯಿಂದ ೮೦ ಕಿ.ಮೀ. ದೂರದಲ್ಲಿರು

ಮನಮಂತ ಸ್ವಾಮಿ ಎಂಬುವಲ್ಲಿ ಹೋಗಿ ಐದು ದಿನ ಉಳಿದು ಬರುತ್ತಾರೆ. ಹಾಗೆಯೇ ದೇವಸ್ಥಾನದಲ್ಲಿ ಪ್ರತಿದಿನ ದಾಸೋಹ ಇರುತ್ತದೆ. ಈ ಕ್ಷೇತ್ರ ದೇವಸ್ಥಾನದ ಸ್ವಾಮಿಯ ಊರಿನಲ್ಲಿ ಸಂಚರಿಸಿ ಅಮರೇಶ್ವರ ಹೆಸರಿನಲ್ಲಿಊಟ ತರುತ್ತಾರೆ. ಅದು ಬೇರೆ ಕಡೆಯಿಂದ ಬಂದ ಭಕ್ತಾದಿಗಳಿಗೆ ದಾಸೋಹದಸಮಯದಲ್ಲಿ ಕೊಡುತ್ತಾರೆ. ಮಧ್ಯಾಹ್ನ ೨.೩೦ ರಾತ್ರಿ ೮ ಗಂಟೆಯವರೆಗೆ ದಾಸೋಹ ನಡೆಯುವುದು.

ಈ ಕ್ಷೇತ್ರದಲ್ಲಿ ಕಲ್ಯಾಣ ಮಂಟಪ ಇದೆ. ಅಲ್ಲಿ ಊರಿನ ಮತ್ತು ಊರಿನ ಸುತ್ತ ಮುತ್ತಲಿನ ಜನರು ಬಂದು ಇಲ್ಲಿ ಮದುವೆ ಮಾಡುತ್ತಾರೆ. ದಿನಾಲು ಮುಂಜಾನೆ ೬ ಗಂಟೆಗೆ ಪೂಜೆ ಪ್ರಾರಂಭಿಸುವುದು. ೬.೧೫ ಮಹಾಮಂಗಳಾರತಿ ಮಾಡುತ್ತಾರೆ. ಹಾಗೆಯೇ ರಾತ್ರಿ ೮ ಗಂಟೆಗೆ ಮಹಾಮಂಗಲಾರತಿ ಮಾಡುತ್ತಾರೆ. ಈ ಸಮಯದಲ್ಲಿ ದೇವರಿಗೆ ನೋಡಲು ಮತ್ತು ದರ್ಶನ ಪಡೆಯಲು ತುಂಬಾ ಜನರು ಬರುತ್ತಾರೆ. ಈ ಸಮಯದಲ್ಲಿ ವಿಶೇಷವಾಗಿ ದೇವರು ಸಾಕ್ಷಾತಾಗಿ ನಮ್ಮ ಎದುರಿಗೆ ನಮಗೆ ದರ್ಶನ ಕೊಟ್ಟಷ್ಟು ಅನುಭವ ಆನಂದವಾಗುತ್ತದೆ.

ಈ ಪುಣ್ಯಕ್ಷೇತ್ರ ಎಲ್ಲಾ ಪುಣ್ಯಕ್ಷೇತ್ರಕ್ಕಿಂತ ಕೆಲವು ವಿಶೇಷತೆಗಳು ಕಾಣಬಹುದು. ಆನರು ಈ ದೇವರಲ್ಲಿ ಇಷ್ಟೊಂದು ಭಕ್ತಿ ತೋರಿಸಲು ಮತ್ತು ಎಲ್ಲಾ ಕಡೆಯಿಂದ ಜನ ಸೇರಲು ಇಲ್ಲಿನ ನಿಜವಾದ ನಡೆದ ಕಥೆಯ ಕಾರಣವೆನ್ನಬಹುದು. ಜನರಿಗೆ ದೇವರ ಬಗ್ಗೆ ನಂಬಿಕೆ ಬರಬೇಕಾದರೆ ಆ ಕ್ಷೇತ್ರ ಒಂದು ಪವಿತ್ರ ಪುಣ್ಯಕ್ಷೇತ್ರಯಾಗಿರಬೇಕು. ಮತ್ತು ಆ ಕ್ಷೇತ್ರದ ದೇವರ ಬಗ್ಗೆ ನಿಜವಾದ ಘಟನೆಗಳು ನಡೆದಿರಬೇಕು ಮತ್ತು ಕ್ಷೇತ್ರ ಮಹಿಮೆ ವಿಶೇಷವಾಗಿರಬೇಕು ಮತ್ತು ಜನರ ಕಷ್ಟಗಳಿಗೆ ಆ ದೇವರು ಒಲಿದು ಅವರಿಗೆ ಸನ್ಮಾರ್ಗ ತೋರಿಸಬೇಕು. ಈ ತರಹ ನಡೆದ ಘಟನೆಗಳು ಉದಾಹರಣೆ ಇದ್ದಾಗ ಮಾತ್ರ ಆ ಕ್ಷೇತ್ರ ಪುಣ್ಯಕ್ಷೇತ್ರವಾಗುವುದು. ಮತ್ತು ಜನರ ನಂಬಿಕೆಯು ಹೆಚ್ಚಾಗಿ ಕಾಣುತ್ತದೆ. ಈ ಹಿನ್ನೆಲೆ (ದೃಷ್ಟಿಯಿಂದ) ನೋಡಿದಾಗ ಈ ಅಮರೇಶ್ವರ ದೇವಸ್ಥಾನ ಪವಿತ್ರ ಪುಣ್ಯಕ್ಷೇತ್ರವೆಂದು ಹೇಳಬಹುದು. ಏಕೆಂದರೆ, ಇಲ್ಲಿ ಇರುವ ಆಕಳು ಮತ್ತು ಹುತ್ತಿನ ಕಥೆ ತೆಗೆದುಕೊಂಡಾಗ ಈ ಆಕಳು ದಿನಾಲು ಹುತ್ತಿನ ಹತ್ತಿರ ಬಂದು ಯಾರದೂ ಸಹಾಯವಿಲ್ಲದೇ ಹಾಲು ಹುತ್ತಿಗೆ ಹಾಕುತ್ತಿತ್ತು ಎನ್ನುವರು. ಇದನ್ನು ನೋಡಿದಾಗ ಇಲ್ಲಿ ಏನಾದರೂ ಒಂದು ಶಕ್ತಿ ಅಡಗಿದೆ. ಎಂಬುದು ಕಾಣಬಹುದು. ಅಥವಾ ದೇವರೆ ಆಕಳದ

ರೂಪದಲ್ಲಿ ನೋಡಬಹುದು. ಮತ್ತು ಹಾಗೆಯೇ ಆ ಹುತ್ತಿನಲ್ಲಿ ಕೇಳಿಬಂದ ಧ್ವನಿಯಿಂದ ಇಲ್ಲಿ ದೇವರು ಇದ್ದಾರೆ. ಅಥವಾ ಯಾವುದೋ ಒಂದು ಶಕ್ತಿ ಇದೆವೆಂಬುವುದು ಸತ್ಯದ ಮಾತು.

ಈ ಕ್ಷೇತ್ರದಲ್ಲಿ ಈಗಿನ ಆಧುನಿಕ ಯುಗದಲ್ಲಿ ಕೂಡಾ ಈ ಕ್ಷೇತ್ರದ ಬಗ್ಗೆ ಪ್ರಸಿದ್ಧಿ ಇರಬೇಕೆಂದರೆ, ಈ ಪುಣ್ಯ ಕ್ಷೇತ್ರದಲ್ಲಿ ದೇವರು ಇದ್ದಾರೆ. ಭಕ್ತರ ಕಷ್ಟಗಳಿಗೆ ದೇವರು ಸ್ಪಂದಿಸಿ ಕಷ್ಟಗಳೆಲ್ಲದೂರ ಮಾಡಿ ಸುಖ:, ಶಾಂತಿ ನೆಮ್ಮದಿ ಈ ಕ್ಷೇತ್ರದಲ್ಲಿ ಸಿಗುತ್ತದೆ ಎಂಬುದು ಇಲ್ಲಿ ಬರುವ ಭಕ್ತರ ಉದಾಹರಣೆ ತೆಗೆದುಕೊಳ್ಳಬಹುದು. ಇಲ್ಲಿ ಬರುವ ಪ್ರತಿಯೊಬ್ಬರು ಹೇಳುತ್ತಾರೆ. ನಾವು ಈ ಕ್ಷೇತ್ರಕ್ಕೆ ಬರುವುದುರಿಂದ ನಮ್ಮ ಜೀವನದಲ್ಲಿ ಶಾಂತಿ ನೆಮ್ಮದಿ ಕಾಣಿಸಿದೆ. ಮತ್ತು ಒಳ್ಳೆದನ್ನೇ ಕಾಣುತ್ತೇವೆ ಎನ್ನುವರು.

ಈ ಪುಣ್ಯ ಕ್ಷೇತ್ರದಲ್ಲಿ ಜನರು ಹರಕೆ ತುಂಬಾ ಮಾಡುತ್ತಾರೆ. ಹೆಚ್ಚಾಗಿ ಮಕ್ಕಳಾಗದವರು ಮದುವೆಯಾಗದವರು, ಎಷ್ಟು ಭಕ್ತರಿಗೆ ಮಕ್ಕಳು ಈ ದೇವರ ದಯದಿಂದ ಮಕ್ಕಳಾಗಿವೆ. ಮದುವೆ ಸಹಯಾಗಿದ ಉದಾಹರಣೆ ಈ ಕ್ಷೇತ್ರದಲ್ಲಿ ಸಿಗುತ್ತವೆ. ಮತ್ತು ಮಾನಸಿಕ ರೋಗಕ್ಕೆ ಒಳಗಾಗಿದವರು. ಜೀವನವೇ ಸಾಕಾಗಿದೆ ಎಂಬುವುದು ಮತ್ತು ಸಂಸಾರದ ಕಲಹಗಳಿಗೆ ಬೇಸತ್ತವರು. ಇಲ್ಲಿ ದೀಪಾವಳಿ ಸಮಯದಲ್ಲಿ ನಡೆಯುವ ಜಪದಲ್ಲಿ ಭಾಗವಹಿಸಿ ಅಥವಾ ಅವರು ಸಹ ಜಪ ಮಾಡಿ ತಮ್ಮ ಮನಸ್ಸಿಗೆ ಶಾಂತಿ ನೆಮ್ಮದಿ ಕಾಣುತ್ತಾರೆ. ಹಾಗೆಯೇ ಇಲ್ಲಿ ದೇವಸ್ಥಾನದ ಮುಂದೆ ಒಂದು ಗುಂಡಾ ಇದೆ. ಹಾಗೆಯೇ ಒಳಗಡೆ ಭಾವಿ ಇದೆ. ಇಲ್ಲಿ ವರ್ಷವಿಡಿ ನೀರು ತುಂಬಿರುತ್ತದೆ. ಊರಲ್ಲಿ ಎಲ್ಲಾ ಭಾವಿಯಲ್ಲಿ ಬೇಸಿಗೆಯಲ್ಲಿ ಖಾಲಿ ಆದರೂ ಇಲ್ಲಿ ಮಾತ್ರ ಯಾವಾಗಲೂ ನೀರು ಸಿಗುತ್ತದೆ. ಊರಿನ ಜನಿಲ್ಲಿಗೆ ಬಂದು ನೀರು ಒಯ್ಯುತ್ತಾರೆ. ಈ ಕ್ಷೇತ್ರದಲ್ಲಿ ಇನ್ನು ತುಂಬಾ ಅಭಿವೃದ್ಧಿ ಹೊಂದಬೇಕು. ಆಧುನಿಕ ಸೌಲಭ್ಯಗಳು ಇನ್ನೂ ಇಲ್ಲಿ ಅಷ್ಟೊಂದು ಒದಗಿಸಿಲ್ಲ. ಇಲ್ಲಿ ಆಡಳಿತ ಮಂಡಳಿ ಮತ್ತು ಊರಿನ ಜನರು ಅದರಲ್ಲೂ ಯುವಕರೂ ಈ ಪುಣ್ಯಕ್ಷೇತ್ರದ ಬಗ್ಗೆ ತುಂಬಾ ಹೆಮ್ಮೆ ಅಭಿಮಾನ ಹೊಂದಿದ್ದಾರೆ. ಆದರೆ ಅವರಿಗೆ ಮಾರ್ಗದರ್ಶನ ಮತ್ತು ಹಣದ ತೊಂದರೆಯಿಂದ ಇಲ್ಲಿನ ವ್ಯವಸ್ಥೆ ಇನ್ನೂ ಹಿಂದೆ ಬಿದ್ದಿದೆ. ಹಾಗೆಯೇ ಇಲ್ಲಿ ಮುಖ್ಯವಾಗಿ ನೀರಿನ ವ್ಯವಸ್ಥೆ ಇಲ್ಲ ಮತ್ತು ರಸ್ತೆಗಳು ಸರಿಯಾಗಿಲ್ಲ.

ಭಕ್ತರಿಗೆ ಉಳಿಯಲು ಅನುಕೂಲತೆ ಇಲ್ಲ. ಈವಾಗ ಸ್ವಲ್ಪ ಮಟ್ಟ ಅಭಿವೃದ್ಧಿ ಹಂತದಲ್ಲಿ ಇದೆ. ಆದರೂ ಸಹ ಇಲ್ಲಿ ತುಂಬಾ ಅಭಿವೃದ್ಧಿ ಹೊಂದಬೇಕು. ಈ ತರಹ ಒಂದು ಪುಣ್ಯಕ್ಷೇತ್ರ ಸಿಗುವುದು ತುಂಬಾ ವಿರಳ. ಆದರೆ ಈ ತರಹೊಂದು ಪುಣ್ಯಕ್ಷೇತ್ರ ನಮ್ಮ ಜಿಲ್ಲೆಯಲ್ಲಿ ಇದೆ ಎಂಬುವುದು ನಮ್ಮೆಲ್ಲರ ಪುಣ್ಯವೆನ್ನಬೇಕು. ಆದ್ದರಿಂದ ಎಲ್ಲಾ ಭಕ್ತರು ದಾನಿಗಳು ಸರಕಾರ ಮುಂದೆ ಬಂದು ಕ್ಷೇತ್ರ ಅಭಿವೃದ್ಧಿ ಪಡಿಸಬೇಕು. ಮತ್ತು ಅನಾಥಾಶ್ರಮಗಳು ಬಡವಿದ್ಯಾರ್ಥಿಗಳಿಗೆ ವಿದ್ಯೆದಾನಮಾಡಬೇಕು. ಅವರಿಗೆ ಧನ ಸಹಾಯ ಮಾಡಿ ಅವರ ಜೀವನಕ್ಕೆ ದಾರಿ ಮಾಡಬೇಕು. ಇಲ್ಲಿ ಇನ್ನೂ ಅನ್ನದಾನ ನಡೆಯಬೇಕು. ಶಾಲಾ, ಕಾಲೇಜು ಹಲವು ಬಗೆಯ ಕೋರ್ಸುಗಳು ಈ ಪುಣ್ಯಕ್ಷೇತ್ರ ಅಡಿಯಲ್ಲಿ ನಡೆಯಬೇಕು. ಮತ್ತು ಸ್ವ ಸಹಾಯ ಸಂಘ ಸಂಸ್ಥೆಗಳು ಗುಡಿಕೈಗಾರಿಕೆಗಳು ಹೀಗೆ ಹಲವು ನಿಟ್ಟನಲ್ಲಿ ಅಭಿವೃದ್ಧಿ ಹೊಂದಬೇಕು ಎಂಬುವುದೇ ಈ ಊರಿನಲ್ಲಿ ಜನರ ಆಸೆ. ಇವುಗಳಿಂದ ಈ ಪುಣ್ಯಕ್ಷೇತ್ರ ಇನ್ನೂ ಇಡೀ ದೇಶದಲ್ಲೆಲ್ಲಾ ಪ್ರಚಾರವಾಗಬೇಕು. ಆದ್ದರಿಂದ ಇಲ್ಲಿಗೆ ಈ ಒಂದು ಪವಿತ್ರವಾದ ಪುಣ್ಯಕ್ಷೇತ್ರಕ್ಕೆ ಭೇಟಿನೀಡಿ ಪುಣ್ಯವಂತರಾಗಿ ಇಲ್ಲಿನ ಅಭಿವೃದ್ಧಿಗೆ ಕೈ ಜೋಡಿಸಿ.

ಸಂಗಮನಾಥ ದೇವಾಲಯ ಕೂಡಲ ಸಂಗಮ-ಲ

ನಮ್ಮ ನಾಡಿನಲ್ಲಿ ಮತ್ತು ನಮ್ಮ ಹಿಂಧೂ ಸಂಸ್ಕೃತಿಯಲ್ಲಿ ಎಲ್ಲಿನದಿಗಳ ಒಂದು ಕಡೆ ಸೇರುತ್ತವೆ. ಆ ಸ್ಥಳಕ್ಕೆ ನಾವು ಸಂಗಮವೆಂದು ಕರೆಯುತ್ತೇವೆ. ಹಾಗೆಂಬ ಆ ಸ್ಥಳಕ್ಕೆ ಕೂಡಾ ಪುಣ್ಯಸ್ಥಳ ಪುಣ್ಯಕ್ಷೇತ್ರವೆಂದು ಕರೆಯುತ್ತೇವೆ. ಇಲ್ಲಿಗೆ ಹೋಗಿ ಸ್ನಾನಮಾಡಿದಾಗ ನಾವು ಮಾಡಿದ ಪಾಪಗಳೆಲ್ಲಾ ತೊಳೆದು ಹೋಗಿ ಪುಣ್ಯ ಲಭಿಸುವುದು ಎಂಬ ನಂಬಿಕೆ ನಮ್ಮಲ್ಲಿ ಅಡಗಿದೆ. ಹಾಗೆಯೇ ತುಂಬಾ ದೊಡ್ಡ ವಿದ್ವಾಂಸರಾದ ಸ್ವಾಮಿಗಳು, ಸಾಧುಗಳು, ಸಂತರು ಕೂಡಾ ಈ ನಂಬಿಕೆಯನ್ನು ನಂಬಿ ಪಾಲಿಸುತ್ತಾರೆ. ಇಂತಹ ಒಂದು ಈ ಪುಣ್ಯಕ್ಷೇತ್ರ ನಮ್ಮ ಬೀದರ ಜಿಲ್ಲೆಯ ಔರಾದ ತಾಲೂಕಿನಲ್ಲಿ ಕೂಡಲ ಸಂಗಮವು ಒಂದು ಪವಿತ್ರ ಸಂಗಮ ಕ್ಷೇತ್ರವಾಗಿದೆ.

ಸಂಗಮನಾಥನ ದೇವಾಲಯವು ಮಾಂಜ್ರಾ ಮತ್ತು ದೇವಣಿ ನದಿಗಳೆರಡು ಕೂಡುವ ಸ್ಥಳದಲ್ಲಿ ನಿರ್ಮಾಣವಾಗಿದೆ. ನಿಸರ್ಗದ ಮಧ್ಯದಲ್ಲಿ ಅದರಲ್ಲೂ ನೀರಿನ ದಂಡೆಯ ಮೇಲೆ ನಿರ್ಮಾಣಗೊಂಡ ಸಂಗಮನಾಥನ ದೇವಾಲಯವು ಭಕ್ತಜನ ಸಮೂಹವನ್ನು ತನ್ನತ್ತ ಹೆಚ್ಚು ಆಕರ್ಷಿಸುತ್ತದೆ. ಕಾರಣ ಇಲ್ಲಿನ ಪ್ರಶಾಂತ ವಾತಾವರಣ, ನಿರ್ಜನ ಪ್ರದೇಶ, ಪ್ರಕೃತಿಯ ಮಧ್ಯದಲ್ಲಿ ಕಂಗೊಳಿಸುವ ಈ ದೇವಾಲಯ ಪವಿತ್ರ ಭಾವನೆಗಳನ್ನು ಅರಳಿಸುವ ಶಕ್ತಿ ಪಡೆದಿದೆ. ಇಲ್ಲಿಗೆ ಭಕ್ತಾದಿಗಳು ಬಂದು ಸ್ನಾನ ಮಾಡಿದರೆ ಅವರ ರೋಗಗಳೆಲ್ಲಾ ವಾಸಿಯಾಗುತ್ತವೆಂಬ ನಂಬಿಕೆ ಇಲ್ಲಿ ಬಲವಾಗಿದೆ. "ಗಂಗಾಸ್ನಾನ" ತುಂಗಾಪಾನ ಎನ್ನುವಂತೆ ಸಂಗಮನಾಥನ ಕ್ಷೇತ್ರ: ಹರಿದು ಬರುವ ಭಕ್ತರನ್ನು ಕಂಡರೆ ಈ ಮಾತಿಗೆ ಇನ್ನು ಹೆಚ್ಚಿನ ಅರ್ಥ ಮಾಡುತ್ತದೆ.

ಸಂಗಮನಾಥನ ಗೌಳಿಗ ಮನೆತನದ ಗೌಳಿಗನ ಹೆಂಡತಿ ಅಥವಾ ಗುಪ್ತಭಕ್ತೆಯೊಬ್ಬಳು ತನ್ನ ಮನೆಯವರೆಲ್ಲರಿಗೂ ಕದ್ದು, ದಿನಾಲು ಮುಂಜಾವಿನ ನಸುಕಿನ ಹೊತ್ತಿನಲ್ಲಿ ಎದ್ದು ನದಿಗೆ ಹೋಗಿ ನದಿಯೊಳಗಿದ್ದ ದೇವರಿಗೆ ಪೂಜೆ ಸಲ್ಲಿಸಿ ಮನೆಗೆ ಮರುಳುತ್ತಿದ್ದಳು. ಈ ಮಧ್ಯೆ ತುಂಬಿದ ನದಿ ಅವಳಿಗೆ ದಾರಿ ಕೊಟ್ಟ ಪ್ರಸಂಗ ಜರುಗುತ್ತದೆ. ಹೀಗೆ ದಿನಾಲು ಆ ನದಿಗೆ ಹೋಗಿ ಅಲ್ಲಿರುವ ಸಂಗಮನಾಥನಿಗೆ ಮತ್ತು ನದಿಗೆ ಪೂಜೆ ಸಲ್ಲಿಸುತ್ತಿರುವಾಗ ಅವಳ ಮನೆಯಲ್ಲಿ ಅನುಮಾನಪಟ್ಟ ಗಂಡ ಅತ್ತೆ ಇಬ್ಬರು ಇವಳು ದಿನಾಲು ಬೆಳಿಗಿನ ಜಾವ ಎಲ್ಲಿಗೆ ಹೋಗುತ್ತಾಳೆ ಎಂದು ತಿಳಿದು ಅವಳಿಗೆ ಹಿಂಬಾಲಿಸಿದರಿಂದ

ಸಂಗಮನಾಥ ಪ್ರತ್ಯಕ್ಷನಾಗಿ ತನ್ನ ಪೂಜೆಗಾಗಿ ಪುನ: ಬರಬೇಡವೆಂದು ಹೇಳಿ ಮೂರು ಮುಟ್ಟೆ ಉಸುಕನ್ನು ಕೊಟ್ಟು ಅದನ್ನು ಅಲ್ಲಿಯೇ ಪೂಜಿಸಲು ಹೇಳಿದಾಗ ಶಿವಭಕ್ತೆಯು ಹಾಗೆಯೇ ಮಾಡಲು ಅದು ದಿನನಿತ್ಯ ಬೆಳೆಯಲಾರಂಭಿಸಿತು. ಅದನ್ನು ನೆಟ್ಟ ಸ್ಥಳದಿಂದ ಉಸುಕಿನ ಲಿಂಗ ತೆಗೆಯಲು ಯತ್ನಿಸಿದಾಗ ಇಡೀ ಗುಡ್ಡವೇ ಅಲುಗಾಡಿತಂತೆ ನಂತರದಲ್ಲಿ ಲಿಂಗವಿರುವ ಸ್ಥಳದಲ್ಲಿಯೇ ದೇವಾಲಯ ನಿರ್ಮಿಸಲಾಯಿತೆಂದು ಇಲ್ಲಿನ ಪೂಜಾರಿಗಳು ಹೇಳುತ್ತಾರೆ. ಮತ್ತೆ ಇಲ್ಲಿನ ಸ್ಥಳ ನೋಡಿದಾಗ ನಮಗೆ ಈ ತರಹದ ಘಟನೆಯಾಗಿರಬಹುದು ಎಂಬ ಭಾವನೆ ಬರುವುದು. ದೇವಾಲಯ ನಿರ್ಮಾಣ ನಂಬಿಕೆಯಿಂದ ಪುಸ್ತಕದಲ್ಲಿ ಭಕ್ತರು ಕೊಡುವ ಈ ಸ್ಥಳ ಪವಿತ್ರ ಭಾವನೆಗಳ ಸಂಗಮವೆನಿಸುತ್ತದೆ. ಇಲ್ಲಿಗೆ ಆಗಮಿಸಿದ ಭಕ್ತರಿಗೆ ಪವಿತ್ರವಾದ ಭಾವದ ಜೊತೆಗೆ ಭಕ್ತಿರಸ ಉಕ್ಕಿ ಬರುತ್ತದೆ. ನೀರಿನ ದಂಡೆಯಲ್ಲಿದ್ದರೂ ಜನದಟ್ಟಣೆ ಹೆಚ್ಚಾಗಿಯೇ ಕಂಡು ಬರುತ್ತದೆ. ಹಲವಾರು ತೆರನಾದ ಹರಕೆಗಳನ್ನು ಹೊತ್ತವರು ಈ ದೇವರಲ್ಲಿಗೆ ಬಂದು ತಮ್ಮ ಹರಕೆ ತೀರಿಸಿ ಹೋಗುತ್ತಾರೆ. ಇಲ್ಲಿಗೆ ಹೆಚ್ಚಾಗಿ ದೇವರಲ್ಲಿ ಮಕ್ಕಳಿಗೆ ಆರೋಗ್ಯ ಕುರಿತು ಇಲ್ಲಿ ಹೆಚ್ಚಾಗಿ ಭಕ್ತರು ಬರುತ್ತಾರೆ. ಮತ್ತು ಮಕ್ಕಳಿಲ್ಲದವರು ಸಹ ಇಲ್ಲಿ ಹರಕೆ ಹೊತ್ತುಕೊಳ್ಳುವುದರ ಮೂಲಕ ಸಂತಾನ ಭಾಗ್ಯ ಲಭಿಸುವುದು, ಹಾಗೆಯೆ ರೋಗಗಳಿಂದ ಬಳಲುವವರು ಹೆಚ್ಚಾಗಿ ಈ ಕ್ಷೇತ್ರಕ್ಕೆ ಬಂದು ಸ್ನಾನ ಮಾಡಿ ಸಂಗಮನಾಥನ ದರ್ಶನ ಪಡೆಯುವರು. ಇಲ್ಲಿನ ನದಿಯ ನೀರು ತುಂಬಾ ಶುದ್ಧ ಮತ್ತು ಪವಿತ್ರವಾದ ನೀರು ಮಕ್ಕಳಿಗೆ ಎಲ್ಲಿಯಾದರೂ ಹೆದರಿದರೆ ಮತ್ತು ದೃಷ್ಟಿಯಾದರೆ ಮಾಯ ಮಂತ್ರವಾಗಿದರೆ ಇಲ್ಲಿಗೆ ಬಂದು ಸ್ನಾನಮಾಡಿ ದರ್ಶನ ಜಂಗಮಾರ್ಚನೆ, ರುದ್ರಾಭಿಷೇಕ ಮುಂತಾದ ವಿಶೇಷ ಪೂಜಾ ಕಾರ್ಯಗಳು ಮಾಡಿ ಇಲ್ಲಿನ ನೀರು ತೀರ್ಥರೂಪದಲ್ಲಿ ರೋಗರುಜಿನಗಳಿಂದ ಬಳಲುವವರಿಗೆ ಕೊಡುತ್ತಾರೆ. ನೀರಿನ ಒಂದು ವಿಶಿಷ್ಟವಾದ ಶಕ್ತಿಯಿದೆ. ಮತ್ತು ಹೆಚ್ಚಾಗಿ ಚರ್ಮ ರೋಗಗಳು ಇರುವವರು ಇಲ್ಲಿಗೆ ಬಂದು ಸ್ನಾನ ಮಾಡುತ್ತಾರೆ. ಒಟ್ಟಾರೆಯಾಗಿ ಇಲ್ಲಿಗೆ ಬಂದು ಸ್ನಾನ ಮಾಡಿದಾಗ ರೋಗರುಜಿನಗಳು, ಪಾಪ ಕರ್ಮಗಳನ್ನು ತೊಳೆದು ಹೋಗಿ ಅವರ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ. ಹಾಗೆಯೇ ಈ ನದಿಗೆ ಯಡಿ ರೂಪದಲ್ಲಿ ವಿವಿಧ ತಿನಿಸುಗಳು ಮಾಡಿ ನೈವೇದ್ಯ ರೂಪದಲ್ಲಿ ನದಿಯ ನೀರಿನಲ್ಲಿ ಬಿಡುತ್ತಾರೆ.

ಈ ಪುಣ್ಯ ಕ್ಷೇತ್ರಕ್ಕೆ ವಿವಿಧ ರಾಜ್ಯಗಳಿಂದ ಭಕ್ತರು ಬರುತ್ತಾರೆ. ಸಾಧುಸಂತರು, ಸ್ವಾಮಿಗಳು ಅಮವಾಸೆ ಮತ್ತು ಹುಣ್ಣಿಮೆ ಹಬ್ಬ ವಿಶೇಷ ಹಬ್ಬಗಳೆಂದು ಗ್ರಹಣ ಹಿಡಿದ ದಿವಸ ನಕ್ಷತ್ರಗಳ ಬದಲಾವಣೆ ಹೊಂದುವ ದಿವಸ ಅಥವಾ ಸೂರ್ಯಗ್ರಹಣದಂದು ತುಂಬಾ ಭಕ್ತರು ಇಲ್ಲಿ ಸ್ನಾನ ಮಾಡುತ್ತಾರೆ. ಭಕ್ತ ಸಮೂಹ ಸಂಗಮನಾಥನ ಮೇಲೆ ಇಟ್ಟಿರುವ ಭಕ್ತಿ-ಶ್ರದ್ಧೆಗಳು ತುಂಬಾ ಅಪಾರವಾಗಿದೆ ಎಂದು ಹೇಳಬಹುದು. ಜನರ ನಂಬಿಕೆಯಂತೆ ಬಲವಾಗಿದೆ. ಹಾಗೆಯೇ ತುಂಬಾ ಭಕ್ತರಿಗೆ ತಮಗೆಇದ್ದ ರೋಗಗಳು ಮತ್ತು ಕಷ್ಟಗಳು ಈ ಕ್ಷೇತ್ರ ದರ್ಶನದಿಂದ ಪರಿಹರಿಸಿಕೊಂಡ ತುಂಬಾ ಭಕ್ತರು ಸಾಕ್ಷಿ ಕೂಡಾ ನಾವು ನೋಡಬಹುದು. ಗಂಗೆ, ತುಂಗೆ ಹೀಗೆ ದೊಡ್ಡ ದೊಡ್ಡ ನದಿಗಳಿಗೆ ಹೋಗಲು ಎಲ್ಲರಿಗೂ ಆಗುವುದಿಲ್ಲ. ಹೀಗಾಗಿ ಎಲ್ಲಾ ವರ್ಗದ ಜನರಿಗೂ ದರ್ಶನ ಸಿಗುವಂತಹ ಈ ಮೇಲಿನ ನದಿಗಳಿಗೆ ಸಮಾನವಾದ ನಮ್ಮ ಜಿಲ್ಲೆಯ ಕೂಡಲಸಂಗಮ ಪುಣ್ಯಕ್ಷೇತ್ರಿರುವುದು ನಮ್ಮೆಲ್ಲರ ಪುಣ್ಯದ ಭಾಗ್ಯ. ಹೀಗಾಗಿ ಬೀದರ ಜಿಲ್ಲೆಯಲ್ಲಿ ಬಂದ ಭಕ್ತರೆಲ್ಲರೂ ಈ ನಮ್ಮ ಜಿಲ್ಲೆಯ ಸಂಗಮನಾಥನಲ್ಲಿ ಸ್ನಾನಮಾಡಿ ನಿಮ್ಮೆಲ್ಲರ ಪಾಪ ಕರ್ಮಗಳು ತೊಳೆದುಕೊಂಡು ಪುಣ್ಯವಂತರಾಗುತ್ತಾರೆಂಬ ಐತಿಹ್ಯ ಇದೆ.

ಮೈಲಾರ ಮಲ್ಲಣ್ಣ–೯

ಪುಣ್ಯಕ್ಷೇತ್ರಗಳೆಂದರೆ ಭಕ್ತರ ಪವಿತ್ರವಾದ ಸ್ಥಳ, ಮಾನವರಿಗೆಲ್ಲ ಪುಣ್ಯಕ್ಷೇತ್ರವೆಂದರೆ ಮನಸ್ಸಿನಲ್ಲಿ ಶಾಂತಿ, ನೆಮ್ಮದಿ ಸಿಗುವಂತಹ ಸ್ಥಳ ಎನ್ನುತ್ತೇವೆ. ಮನುಷ್ಯನಿಗೆ ಎಂತಹದೇ ಕಷ್ಟ ಬರಲಿ ಮತ್ತು ಮಾನಸಿಕವಾಗಿ ನೋವುಗಳನ್ನು ಅನುಭವ ವ್ಯಕ್ತಿಗೆ ಎಲ್ಲಿ ಸುತ್ತಾಡಿದರೂ ಕೊನೆಗೆ ಆತನು ಮರೆಹೊಗುವುದು ಪುಣ್ಯಕ್ಷೇತ್ರಕ್ಕೆ, ಏಕೆಂದರೆ ಪುಣ್ಯಕ್ಷೇತ್ರದಲ್ಲಿ ಸಿಗುವಂತಹ ನೆಮ್ಮದಿ, ಶಾಂತಿ, ಸನ್ಮಾರ್ಗ ನಮಗೆ ಎಲ್ಲಿಯೂ ಸಿಗುವುದಿಲ್ಲ. ಪುಣ್ಯಕ್ಷೇತ್ರಗಳು ನಿರ್ಮಾಣವಾಗಿ ಸನ್ಮಾರ್ಗ, ಸದಾಚಾರ, ಸದ್ಭಾವಗಳನ್ನು ಬೆಳೆಸುವ ಪುಣ್ಯಕ್ಷೇತ್ರವಾಗಿ ಮಾರ್ಪಟ್ಟಿವೆ. ಇಂತಹ ಕಾರಣಕ್ಕಾಗಿ ಪುಣ್ಯಕ್ಷೇತ್ರಗಳೆಲ್ಲ ಪವಿತ್ರ, ಭಾವನೆಯನ್ನು ಹುಟ್ಟಿಸುವಂತಹ ವಾತಾವರಣ ನಿರ್ಮಿಸಿಕೊಟ್ಟಿವೆ. ಹೀಗಾಗಿ ಪಾವಿತ್ರ್ಯ ಮತ್ತು ನಿರ್ಮಲ ಮನಸ್ಸನ್ನು ಸೃಷ್ಟಿ ಮಾಡುವ ದೇವಾಲಯಗಳೆಲ್ಲಾ ಪುಣ್ಯಕ್ಷೇತ್ರಗಳೆಂದು ಕರೆಸಿಕೊಂಡಂತಿವೆ. ಇಂತಹ ಒಂದು ಪುಣ್ಯಕ್ಷೇತ್ರ ಬೀದರ ಜಿಲ್ಲೆಯಲ್ಲಿ ಭಾಲ್ಕಿ ತಾಲೂಕಿನಲ್ಲಿ ಮೈಲಾರ ಮಲ್ಲಣ್ಣ ಎಂಬ ಪುಣ್ಯಕ್ಷೇತ್ರ ಇದೆ, ಭಾಲ್ಕಿಯು (ಭಲ್ಲುಂಕೆ) ನೆಲವು ಹದವಾದ ಮಣ್ಣಿನಿಂದ ಕೂಡಿದ್ದು, ಶರಣ, ಕುಂಬಾರ ಗುಂಡಯ್ಯನವರ ಕಾಯಕ ಕ್ಷೇತ್ರ ಇದಾಗಿದೆ. ೧೦೯ ವರ್ಷಗಳ ಬಾಳನ್ನು ಕಂಡ ಲಿಂ. ಡಾ. ಚನ್ನಬಸವ ಪಟ್ಟದ್ದೇವರು ತಮ್ಮ ಕಾಯಕ, ತತ್ವ, ಜಾತಿಯತೆ, ನಿರ್ಮೂಲನೆ, ಸಮಾನತೆಯ ಬದುಕಿಗಾಗಿ ಹಾಗೂ ಎಲ್ಲಕ್ಕಿಂತ ಮಹತ್ವಪೂರ್ಣವಾದದ್ದು ಅವರ ಕನ್ನಡ ಭಾಷೆ ಅಭಿವೃದ್ಧಿಗಾಗಿ ಮಾಡಿದ ಸೇವೆ ಅವಿಸ್ಮರಣೀಯವಾಗಿದೆ.

ಭಾಲ್ಕಿ ತಾಲೂಕಿನಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಸೇವೆ, ಐತಿಹಾಸಿಕ ಪರಂಪರೆ, ಧಾರ್ಮಿಕ ಮತ್ತು ನೈತಿಕ ನಡಾವಳಿಗಳು ತುಂಬಿ ತುಳುಕುತ್ತಿವೆ. ಭಾಲ್ಕಿ ತಾಲೂಕಿನಲ್ಲಿ ಬರುವ ಮೈಲಾರ ಮಲ್ಲಣ್ಣ ಪುಣ್ಯಕ್ಷೇತ್ರವು "ದಕ್ಷಿಣದ ಕಾಶಿ" ಎಂದೇ ಪ್ರಸಿದ್ಧಿ ಪಡೆದಿದೆ. ಹಾಗೆಯೇ ಬೀದರದಿಂದ ೧೬ ಕಿ.ಮೀ. ದೂರದಲ್ಲಿ ಈ ಪುಣ್ಯಕ್ಷೇತ್ರವು ಭಾಲ್ಕಿ ಮತ್ತು ಬೀದರ ತಾಲೂಕಿನ ಗಡಿಯಲ್ಲಿದೆ.

ಈ ಪುಣ್ಯಕ್ಷೇತ್ರವು ಪ್ರಾಚೀನ ಕಾಲದೇ ಆಗಿದೆ. ಮೈಲಾರ ಮಲ್ಲಣ್ಣನ ಸಂಪ್ರದಾಯ ಅಥವಾ ಚರಿತ್ರೆ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಚರಣೆಗಳಿಗೆ ಅತ್ಯಂತ ಪ್ರಸಿದ್ಧಿವಾಗಿದೆ. ಬೀದರ ಜಿಲ್ಲೆಯಲ್ಲಿ ಖಾನಾಪೂರ ಅಥವಾ ಮೈಲಾರ

ಗ್ರಾಮದಲ್ಲಿ ನೆಲೆಸಿ ಮೈಲಾರ ಮಲ್ಲಣ್ಣ, ಮೈಲಾರ ಖಂಡೋಬಾ, ಮೈಲಾರ ಲಿಂಗ ಎಂಬ ಅನೇಕ ಅರ್ಥಗಳಲ್ಲಿ ಪ್ರಸಿದ್ಧಿಗೆ ಹೆಸರುವಾಸಿಯಾಗಿದೆ. ಮೈಲಾರ ಲಿಂಗನ ಕರ್ನಾಟಕಕ್ಕೆ ಅಷ್ಟೇ ಸೀಮಿತವಾಗಿರದೇ ಬೇರೆ ಬೇರೆ ರಾಜ್ಯಗಳಿಗೂ ಅಂದರೆ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ಬಹಳ ಪ್ರಚಲಿತವಾಗಿರುವ ಮೈಲಾರ ಮಲ್ಲಣ್ಣನ ಪುಣ್ಯಕ್ಷೇತ್ರ. ತುಂಬಾ ವಿಶಿಷ್ಟವಾಗಿದೆ ಏಕೆಂದರೆ ಈ ಕ್ಷೇತ್ರದ ಮಹಿಮೆ ತುಂಬಾ ಇದೆ, ಈ ದೇವರು ಪ್ರತಿಯೊಬ್ಬರ ಆರಾಧ್ಯ ದೇವರಾಗಿದ್ದಾರೆ, ಸರ್ವೆಸಾಧಾರಣವಾಗಿ ಪ್ರತಿಯೊಂದು ಮನೆತನಕ್ಕೆ ಪೂರ್ವದ ಹಿನ್ನಲೆಯಾಗಿ ಕುಲದೇವರು, ಕುಲಸ್ವಾಮಿ, ಆರಾಧ್ಯ ದೇವ ದೇವರಾಗಿದ್ದಾನೆ. ಈ ಪುಣ್ಯಕ್ಷೇತ್ರವು ತುಂಬಾ ಪುರಾತನ ಕಾಲದ ಕ್ಷೇತ್ರವಾಗಿದೆ. ಏಕೆಂದರೆ, ಮನೆ ದೇವರು ಆಗಬೇಕಾದರೆ ನಮ್ಮ ಪೂರ್ವಿಕರು ತಮ್ಮ ತಮ್ಮ ಮನೆತನಕ್ಕೆ ಒಳ್ಳೆಯದನ್ನು ಮಾಡಿರುವ ದೇವರನ್ನೇ ಅವರು ಮನೆಯ ದೇವರಾಗಿ ಕುಲದೇವರು, ಕುಲಸ್ವಾಮಿ, ಆರಾಧ್ಯ ದೇವರಾಗಿದ್ದಾರೆ. ಹಾಗೆಯೇ ಹೆಚ್ಚಾಗಿ ಕುರುಬ ಜನಾಂಗದವರು ಹೆಚ್ಚಾಗಿ ಬರುತ್ತಾರೆ. ಮತ್ತು ಅವರ ಕುಲದೇವರಾಗಿದ್ದಾನೆ. ಮೈಲಾರ ಮಲ್ಲಣ್ಣ ಕುಲಸ್ವಾಮಿ, ಕುಲದೇವರು ಆ ಮನೆತನಕ್ಕೆ ಸಕಲ ಸಮೃದ್ಧಿ ಮತ್ತು ಸುಖ, ಶಾಂತಿ ನೀಡುವ ಹಾಗೂ ಎಲ್ಲಾ ಕಷ್ಟಗಳಿಂದ ರಕ್ಷಣೆ ಮಾಡುವ ಭಾವನೆಯಿದೆ, ಈ ಭಾವನೆಯಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲೂ ದೇವರ ಬಗ್ಗೆ ಅಪಾರ ಶ್ರದ್ಧೆ, ನಂಬಿಕೆ ಇರುತ್ತದೆ. ಭಾರತದಲ್ಲಿ ಇಷ್ಟೊಂದು ವ್ಯಾಪಕವಾಗಿ ಕುಲದೇವರೆಂದು ಪೂಜೆಗೊಳ್ಳುವ ಇನ್ನೊಂದು ದೇವರಿಲ್ಲ. ಶುಭ ಕಾರ್ಯವನ್ನು ಪ್ರಾರಂಭಿಸುವ ಮೊದಲು ದೇವರ ಪೂಜೆ ಮಾಡಲಾಗುತ್ತದೆ. ನಮ್ಮ ಸಂಕಷ್ಟವನ್ನು ದೂರ ಮಾಡಲ ಅನೇಕ ಕುಟುಂಬಗಳಲ್ಲಿ ಪೂಜೆ ಮಾಡಲಾಗುತ್ತದೆ. ಅದಕ್ಕಾಗಿ ಮೈಲಾರ ಲಿಂಗಣ್ಣ ಉಪಾಸನೆಯುನ್ನು ವಾರಗಳನ್ನು ಮಾಡಲಾಗುತ್ತದೆ. ಹೆಚ್ಚಾಗಿ ಮಂಗಳವಾರ ತುಂಬಾ ಭಕ್ತರು ಹರಕೆ ಮಾಡಿ ಉಪವಾಸ ಮಾಡುತ್ತಾರೆ.

ಅದಕ್ಕಾಗಿ ಮೈಲಾರ ಮಲ್ಲಣ್ಣ ಖಂಡೋಬಾ ದೇವರ ಬಗ್ಗೆ ಪೌರಾಣಿಕ ಮಾಹಿತಿ ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಏಕೆಂದರೆ, ಒಂದು ಸ್ಥಳ ಇಷ್ಟೊಂದು ಪವಿತ್ರ ಪುಣ್ಯಕ್ಷೇತ್ರವಾಗಬೇಕಾದರೆ ಅದರ ಹಿಂದೆ ಒಂದು ಬಲವಾದ ಪೌರಾಣಿಕ ಹಿನ್ನಲೆ ಇರಬೇಕು, ಅದಕ್ಕಾಗಿ ಭಕ್ತರು ಬರಬೇಕಾದರೆ ಮತ್ತು ಆರಾಧಿಸಬೇಕಾದರೆ ಅವರಿಗೆ ಆ ದೇವರ ಬಗ್ಗೆ ಮಹಿಮೆ, ಪವಾಡಗಳು ಮತ್ತು ವಿಶಿಷ್ಟವಾದ ಶಕ್ತಿ ಇದ್ದಾಗ ಮಾತ್ರ ಆ ದೇವರು

ಪುಣ್ಯಕ್ಷೇತ್ರದ ಬಗ್ಗೆ ನಂಬಿಕೆ, ವಿಶ್ವಾಸ ಹುಟ್ಟಲು ಸಾಧ್ಯ. ಹೀಗಾಗಿ ಮೈಲಾರ ಮಲ್ಲಣ್ಣ ಇಷ್ಟೊಂದು ಪ್ರಸಿದ್ಧಿಯ ಕಾರಣವನ್ನು ಪೌರಾಣಿಕ ಹಿನ್ನಲೆಯಲ್ಲಿ ನೋಡಬಹುದು. ಸುಮಾರು ೮೮೦೦೦ ವರ್ಷಗಳ ಹಿಂದೆ ಸತ್ಯ ಯುಗದಲ್ಲಿ ಅಂದರೆ ತೈತ್ರಾಯುಗದ ಪೂರ್ವದಲ್ಲಿ ನರಸಿಂಹನ ಅವತಾರದಿಂದ ಜನಿಸಿದ ಹಿರಣ್ಯಕಶ್ಯಪ್‌ನನ್ನು ಭಕ್ತ ಪ್ರಹ್ಲಾದದಿಂದ ಸಂಹಾರವಾದರು ಇಂದಿನ ಬೀದರ ಜಿಲ್ಲೆ ಭಾಗದವನ್ನು ಚಂಪಾಕಲಿ ಸರೋವರ ಎಂದು ಕರೆಯುತ್ತಿದ್ದರು. ಚಂಪಾಕಲಿ ಸರೋವರ ಪ್ರದೇಶದಲ್ಲಿ ಚಂಪಾಕಲಿ ಸರೋವರಕ್ಕಿಂತ ಮೊದಲು ಈ ಪ್ರದೇಶವನ್ನು ಮನಿಚರ ಎಂಬ ಪರ್ವತವಾಗಿತ್ತೆಂದು ಹೇಳಲಾಗುತ್ತದೆ. ಹಿರಣ್ಯ ಕಶ್ಯಪ್‌ವಿನ ಸಂಹಾರದ ನಂತರ ಸಪ್ತ ಋಷಿಗಳು ಚಂಪಕಲಿ ಸರೋವರದ ಮೇಲೆ ತಪಸ್ಸು, ಅನುಷ್ಠಾನ ನಡೆಸುತ್ತಿದ್ದರು. ಆಗ ಇಲ್ಲಿ ಪರಸ್ಪರ ವೈರಿ, ಪ್ರಾಣಿಗಳೂ ಸಹ ಸ್ನೇಹ ಭಾವದಿಂದ ಬಂದು ಸರೋವರದ ನೀರು ಕುಡಿಯುತ್ತಿದ್ದವೆಂದು ಹೇಳುತ್ತಾರೆ. ಹಾವು, ಮುಂಗಿಸಿ, ನರಿ, ತೋಳ, ಹಸು, ಹುಲಿ ಮೊದಲಾದ ಪ್ರಾಣಿಗಳು ಪರಸ್ಪರ ಕಚ್ಚಾಡದೇ ಹಿಂಸೆಗಳಲ್ಲಿ ಹೋಗದೆ ಸಪ್ತ ಋಷಿಗಳ ಆಶೀರ್ವಾದದಿಂದ ಸಂತೋಷವಾಗಿ ಜೀವಿಸುತ್ತಾ ಇತರೆ ಯಾವುದೇ ಕಾರಣದಿಂದ ಸಹೋದರ ಭಾವದಿಂದ ನಲಿದಾಡುತ್ತಿದ್ದವು. ಈ ಹಿನ್ನಲೆಗೆ ಕುರಿತು ಈ ಊರಿನವರು ಹೇಳುತ್ತಾರೆ. ಇಲ್ಲಿ ಯಾವುದೇ ರೀತಿಯ ಆಧಾರ ಸಿಗುವುದಿಲ್ಲ, ಜನಪದರ ನಂಬಿಕೆ, ಪೌರಾಣಿಕ ಕಥೆಯಾಗಿ ಹೇಳಲಾಗುತ್ತದೆ.

ಸಾಂಸ್ಕೃತಿಕ ಹಿನ್ನಲೆಯಲ್ಲಿ ಮೈಲಾರ ಮಲ್ಲಣ್ಣನ ಪುಣ್ಯಕ್ಷೇತ್ರ:

(ಮೈಲಾರ ಲಿಂಗಣ್ಣ ಸಂಪ್ರದಾಯ, ಆಚರಣೆ, ನಂಬಿಕೆಗಳು)

೧. ಪೂಜೆ, ನೈವಿದ್ಯೆ.

೨. ಗೊರವ ಮತ್ತು ಗೊರವಿ.

೩. ಭಂಡಾರ, ಕೊಬ್ಬರಿ ಉಣ್ಣೆ ಹಾರಿಸುವುದು

೪. ಏಳಕೋಟಿಗೆ.

ಹೀಗೆ ತಲೆಮಾರಿನಿಂದ ತಲೆಮಾರಿಗೆ ಬದಲಾಗದ ಹಾಗೆ ಉಳಿದುಬಂದ ರೂಡಿಯೇ ಸಂಪ್ರದಾಯ ಎಂದರ್ಥ. ಪ್ರತಿಯೊಂದು ಜನಾಂಗ ಸಂಸ್ಕೃತಿಯಲ್ಲಿ ಅವರದೇ ಆದಂತಹ ವಿಶಿಷ್ಟ ಸಂಪ್ರದಾಯ, ನಂಬಿಕೆಗಳು ಇರುತ್ತವೆ.

ನೈವಿದ್ಯೆ ಮತ್ತು ಪೂಜೆ:

ಮೈಲಾರ ಲಿಂಗನ ಪೂಜೆಯ ದಿವಸದಲ್ಲಿ ಎರಡು ಬಾರಿ ಪೂಜೆಯನ್ನು ಮಾಡುತ್ತಾರೆ. ಅದರಲ್ಲಿ ವಿಶೇಷವಾಗಿ ಪೂಜೆ ಮತ್ತು ಮೈಲಾರ ಲಿಂಗನ ಜಾತ್ರೆಯ ಸಮಯದಲ್ಲಿ ಚಟ್ಟಿ ಅಮವಾಸೆಯ ದಿನದಂದು ಮೈಲಾರ ಲಿಂಗನ ವಿಶೇಷ ಪೂಜೆ ಹಾಗೂ ನೈವಿದ್ಯೆ ಮಾಡುತ್ತಾರೆ. ಮೈಲಾರಪುರ ಮೈಲಾರ ಲಿಂಗನ ವಿಶೇಷವಾದ ನೈವಿದ್ಯೆ ಎಂದರೆ ಇಲ್ಲಿ ಬರುವ ಭಕ್ತಾದಿಗಳಲ್ಲಿ ಆ ಆರಾಧನೆಗೆ ವಿಶೇಷವಾದ ನೈವಿದ್ಯೇ ಎಂದರೆ ಹಸಿರು ಮೆಣಸಿನಕಾಯಿ, ಉಳ್ಳಗಡ್ಡೆ, ತಪ್ಪಲು, ಬದನೆಕಾಯಿಯಿಂದ ತಯಾರಿಸಿದ ಚಟ್ನಿ ಅಥವಾ ಭರ್ತಾ ಎಂದು ಕರೆಯುತ್ತಾರೆ. ಇದು ದೇವರ ವಿಶೇಷ ನೈವಿದ್ಯೆವಾಗಿದೆ.

ಗೊರವ ಮತ್ತು ಗೊರವಿ:

ಮೈಲಾರ ಲಿಂಗನ ಭಕ್ತರಿಗೆ ಗೊರವ ಎಂದು ಕರೆಯುತ್ತಾರೆ, ಮೈಲಾರ ಲಿಂಗನ ಭಕ್ತರಲ್ಲಿ ಗೊರವ ವಿಶಿಷ್ಟವಾದ ಸ್ಥಾನವಿದೆ. ಇವರನ್ನು ಗೊಗ್ಗಯ್ಯ, ಗೊಗ್ಗಪ್ಪ, ಮಲ್ಲಯ್ಯ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಬೀದರ ಜಿಲ್ಲೆಯಲ್ಲಿ ಮೈಲಾರ ಲಿಂಗನ ಭಕ್ತರಿಗೆ ಮಲ್ಲಯ್ಯ ಎಂದು ಕರೆಯುವ ವಿಶಿಷ್ಟತೆ ಇವೆ. ಇವರು ಭಂಡಾರ ಚೀಲ ಹೆಗಲ ಮೇಲೆ ಮತ್ತು ಕಂಬಳಿ ಹಾಕಿಕೊಂಡು ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಪ್ರತೀ ರವಿವಾರ ಮಾತ್ರ ಅವರು ಅಲೆದಾಡುತ್ತಿರುತ್ತಾರೆ. ಇಂದಿಗೂ ಕೂಡಾ ನಾವು ನೋಡಬಹುದು.

ಗೊರವಿ:

ಕರ್ನಾಟಕದಲ್ಲಿ ಬಹಳಷ್ಟು ಗೊರವ ಕಂಡು ಬರುತ್ತಾರೆ. ಆದರೆ ಗೊರವಿ ಕಂಡು ಬರುವುದು ಬಹಳ ವಿರಳ, ಹೆಣ್ಣು ಮಕ್ಕಳಿಗೆ ಗೊರವಿಯೆಂದು ಕರೆಯಲಾಗುತ್ತದೆ, ಗೊರವಿ ವಿಶೇಷತೆಯೆಂದರೆ, ಇವರು ಕೂದಲನ್ನು ಕಟ್ಟುವುದಿಲ್ಲ ಹಾಗೆ ತಲೆ ಕೂಡಾ ಬಾಚುವುದಿಲ್ಲ, ಇವರು ಜವರಿ, ಎಲೆ ಇಲ್ಲವೆ ಚಂಕಿ ಹಾಕಿಕೊಂಡು ಈ ತರಹ ವೇಷ ಹಕಿಕೊಂಡು ಕರಿ ಕಂಬಳಿ ಮತ್ತು ಕೊರಳಲ್ಲಿ ಕವಡೆ ಸರ, ಚಿಗರೆ ಚರ್ಮದ ವೇಷವನ್ನು ಧರಿಸುತ್ತಾರೆ.

ಕೊಬ್ಬರಿ, ಭಂಡಾರ ಉಣ್ಣೆ ಹಾರಿಸುವುದು:

ಕೊಬ್ಬರಿ, ಉಣ್ಣೆ, ಭಂಡಾರ ಹಾರಿಸುವುದು ಇದು ಒಂದು ಹರಿಕೆ ಮಾಡಿ ದೇವರಿಗೆ ಒಪ್ಪಿಸುವುದರ ಮೂಲಕ ಈ ಪದ್ಧತಿ ಬಹಳ ಮಹತ್ವ ಹೊಂದಿದೆ. ಇದು ವಿಶಿಷ್ಟವಾದ ಸಂಪ್ರದಾಯ ಇಲ್ಲಿ ಕಾಣಬಹುದು. ಭಂಡಾರ ಎಂದರೆ ಅರಿಶಿನ ಎಂದರ್ಥ, ಮೈಲಾರ ಲಿಂಗನ ದೇವಸ್ಥಾನದಲ್ಲಿ ಕೇವಲ ಭಂಡರ ಮಾತ್ರ ಉಪಯೋಗಿಸುತ್ತಾರೆ, ಆದರೆ ನಾವು ಬೇರೆ ಬೇರೆ ದೇವಸ್ಥಾನದಲ್ಲಿ ಕುಂಕುಮ, ಗಂಧ, ಅರಿಶಿನ, ವಿಭೂತಿಗಳಿಂದ ಪೂಜಿಸುವುದು ನೋಡುತ್ತೇವೆ. ಆದರೆ ಈ ಪುಣ್ಯಕ್ಷೇತ್ರದಲ್ಲಿ ಅರಿಶಿನ ಭಂಡಾರ ತುಂಬಾ ಮಹತ್ವದ ಪ್ರಸಾದವಾಗಿದೆ. ಹೆಚ್ಚಾಗಿ ಹೆಣ್ಣು ಮಕ್ಕಳು ಇದನ್ನು ದರ್ಶನಕ್ಕೆ ಹೋಗಿ ಹಚ್ಚಿಕೊಂಡು, ಅದನ್ನು ಮನೆಗೆ ತಂದು ಇದನ್ನು ದಿನಾಲು ಹಚ್ಚಿಕೊಳ್ಳುತ್ತಾರೆ. ಮೈಲಾರ ಲಿಂಗನ ದೇವಸ್ಥಾನದಲ್ಲಿ ಭಂಡಾರ ಹಾರಿಸುವುದರ ಜೊತೆಗೆ ಭಂಡಾರದಲ್ಲಿ ಕೊಬ್ಬರಿ ಬೆರೆಸಿ ಹಾರಿಸುವುದು ಸಂಪ್ರದಾಯ, ಈ ಪುಣ್ಯಕ್ಷೇತ್ರದಲ್ಲಿದೆ. ಪ್ರತಿಯೊಬ್ಬರೂ ಈ ದೇವಸ್ಥಾನಕ್ಕೆ ಬಂದು ತಮ್ಮ ಕಷ್ಟಗಳಿಗೆ ಹರಕೆ ಮಾಡಿ ಕಷ್ಟಗಳು ದೂರವಾದ ನಂತರ ಭಕ್ತರು ಹೆಚ್ಚಾಗಿ ಯಾತ್ರೆಯ ಸಮಯದಲ್ಲಿ ಕೊಬ್ಬರಿ, ಉಣ್ಣೆ, ಭಂಡಾರ ಹಾರಿಸುತ್ತಾ "ಏಳು ಕೊತ್ತಿಗೆ, ಏಳು ಕೋಟೆ" ಎನ್ನುತ್ತಾ ದೇವಾಲಯದ ಸುತ್ತು ಹಾಕುತ್ತ ಈ ಮಂತ್ರವನ್ನು ಹೇಳುತ್ತಾರೆ. ಇಲ್ಲಿ ಮದುವೆಯಾಗದವರು, ಮಕ್ಕಳಾಗದವರು ಹೆಚ್ಚಾಗಿ ಹರಕೆ ಮಾಡುತ್ತಾರೆ. ಇವುಗಳೆಲ್ಲಾ ಒಂದು ವಿಶಿಷ್ಟವಾದ ಇವುಗಳಿಗೆಲ್ಲಾ ಒಂದು ವಿಶಿಷ್ಟವಾದ, ಸಂಪ್ರದಾಯ, ನಂಬಿಕೆ ಒಳಗೊಂಡಂತಹ ಪುಣ್ಯಕ್ಷೇತ್ರವಾಗಿದೆ.

ವೀರಭದ್ರೇಶ್ವರ-೧೦

ಪುಣ್ಯಕ್ಷೇತ್ರಗಳ ಕಲ್ಪನೆ ತುಂಬಾ ವಿಶಾಲವಾದದ್ದು, ದೇವರ ಆಲಯವಾದ ದೇವಾಲಯವು ಭಕ್ತರ ಪವಿತ್ರವಾದ ಸ್ಥಳ, ದೇವರಲ್ಲಿಗೆ ಹೋದುವುದೆಂದರೆ ಪಾವನವಾಗುವುದು ಎಂದರ್ಥ. ಇಂತಹ ಒಂದು ಪುಣ್ಯಕ್ಷೇತ್ರ ಬೀದರ ಜಿಲ್ಲೆಯಲ್ಲಿ ಬರುವ ಹುಮನಾಬಾದದಲ್ಲಿ ಶ್ರೀ ವೀರಭದ್ರೇಶ್ವರ ಪುಣ್ಯಕ್ಷೇತ್ರ ಒಂದಾಗಿದೆ. ಈ ಕ್ಷೇತ್ರವು ತುಂಬಾ ಹಳೆಯ ಮತ್ತು ಪುರಾತನ ಹಿನ್ನಲೆ ಹೊಂದಿರುವ ಪುಣ್ಯಕ್ಷೇತ್ರವಾಗಿದೆ.

ಮಹಾಭಾರತ ಶಾಂತಿ ಪರ್ವತದಲ್ಲಿ ವೀರಭದ್ರನು ಶಿವನ ಬಾಯಿಯಿಂದ ಹುಟ್ಟಿ ಬಂದ ಎಂಬ ಉಲ್ಲೇಖವಿದ್ದರೆ, ವೀರಭದ್ರನು ಶಿವನ ಹಣೆಗಣ್ಣಿನಿಂದ ಉದ್ಭವಿಸುವಾಗ ಸಾವಿರ ತಲೆ. ಮೂರು ಸಾವಿರಕಣ್ಣು ಎರಡು ಸಾವಿರ ಕೈ ಮುಂತಾದ ಅವಯುವಗಳಿಂದ ಕಾಣುತ್ತಿದ್ದನೆಂದು ಶಿವಪುರಾಣ ಮತ್ತು ಲಿಂಗಪುರಾಣ ಸಾರುತ್ತವೆ. ಇವರ ಕಾಲದ ಬಗ್ಗೆ ಚನ್ನಬಸವಣ್ಣ ತನ್ನ ವಚನದಲ್ಲಿ "ತ್ರೇತಾಯುಗದವರೆಂದು (ನಾಲ್ಕು ಯುಗಗಳಲ್ಲಿ ಎರಡನೆಯ ಯುಗದವನು) ಹೇಳಿದ್ದಾನೆ.

ಒಟ್ಟಿನಲ್ಲಿ ವೀರಭದ್ರೇಶ್ವರನಿಗೆ ವೀರಶೈವ ಧರ್ಮದಲ್ಲಿ ವಿಶೇಷ ಸ್ಥಾನವಿದೆ. ಇತರ ಭಾಷೆ ವೀರಭದ್ರೇಶ್ವರ ಕಾಣಿಸಿಕೊಂಡಿದ್ದಾರೆ. ಅದರಲ್ಲೂ ಕರ್ನಾಟಕದಲ್ಲಿ ಬೀದರ ಜಿಲ್ಲೆಯ ಕಲ್ಯಾಣ ನಾಡಿನ ಉತ್ತರದ ಹೆಬ್ಬಾಗಿಲಾದ ಹುಮನಾಬಾದ ಎಂದು ಕರೆಯಲ್ಪಡುವ ಈ ನಗರದ ಮೂಲ ಹೆಸರು ಜಯಸಿಂಹ ನಗರ ಎಂದಿರುತ್ತದೆ. ಈ ನಗರವನ್ನು ಮೊಟ್ಟ ಮೊದಲು ಬಾರಿಗೆ ಚಾಲುಕ್ಯ ಮನೆತನದ ಮಹಾಪರಾ ಕಲಾಪ್ರೇಮಿಯ ಆದ ಜಯಸಿಂಹ ಕಿ.ಶ.ಕ. ೧೦೪೦ ರಂದು ಕಟ್ಟಿಸಿದನೆಂದು ಪುರಾತನ ದಾಖಲೆಗಳಿಂದ ತಿಳಿದು ಬರುತ್ತದೆ.

ಅಲ್ಲಿಂದಲೆ ೧೭೨೫ ಚಂದ್ರಸೈನ ಜಾದವನ್ನು ಈ ನಗರವನ್ನು ಪುನರ್ ನಿರ್ಮಾಣಮಾಡಿದನು. ಎತ್ತರ ಕೆಮ್ಮಣ್ಣಿನ ಪ್ರದೇಶದ ಮೇಲೆ ಈ ನಗರವನ್ನು ಯೋಜನಾಬದ್ಧವಾಗಿ ಕಟ್ಟಲಾಗಿದೆ.

ಧಾರ್ಮಿಕ ಜಾಗೃತಿಯ ಕೇಂದ್ರವಾದ ಇಲ್ಲಿ ೧೦೮ ಮಠಗಳಿರುವುವೆಂದು ಕಂಡು ಬರುತ್ತದೆ. ಇಲ್ಲಿ ಮುಖ್ಯವಾದ ವೀರಭದ್ರೇಶ್ವರ ಪುಣ್ಯಕ್ಷೇತ್ರ. ಈ ಕ್ಷೇತ್ರ ವಿಶಿಷ್ಟ ವಾಸ್ತು ಶೈಲಿಯಿಂದ ಕೂಡಿದೆ. ಉತ್ತರ ನಾಗರ ಶೈಲಿ ದಕ್ಷಿಣಗೋಪುರಗಳ ಶೈಲಿ ಸಂಗಮದಂತಿದೆ. ಗರ್ಭಗುಡಿಯುವು ಕರಿಶೀಲೆಗಳಿಂದ

ಕಟ್ಟಲಾಗಿದ್ದು, ಗೋಪುರ ಹಾಗೂ ಪ್ರವೇಶ ದ್ವಾರದ ಮೇಲೆಗಡೆಯಲ್ಲಿ ಗಾರೆ, ಸುಣ್ಣ ಹಾಗೂ ಕಬ್ಬಿಣದ ಸರಳಗಳನ್ನು ಉಪಯೋಗಿಸಲಾಗಿದೆ. ಗರ್ಭ ಗುಡಿಯಲ್ಲಿ ನಿಂತಿರುವ ಶ್ರೀ ವೀರಭದ್ರಸ್ವಾಮಿಯ ಮೂರ್ತಿಯನ್ನು ಸಮೀಪದ "ಗಡವಂತಿ" ಗ್ರಾಮದಿಂದ ತಂದು ಪ್ರತಿಸ್ಥಾಪಿಸಲಾಗಿದೆ. ಲಕ್ಷಾವಧಿ ಭಕ್ತರ ಆರಾಧ ದೈವನಾದ ಶ್ರೀ ವೀರಭದ್ರ ಸ್ವಾಮಿಯ ನಗರಕ್ಕೆ ಬಂದೊವಂದಿಗಿದ್ದ ವಿಪತ್ತುಗಳನ್ನು ಪರಿಹರಿಸಿ ಅನುಗ್ರಹಿಸಿದೆ. ಈ ದೇವರ ಕಥೆ ಈ ನಗರದವರು ಮರೆಯುವಂತಿಲ್ಲಾ.

ಗರ್ಭಗುಡಿಯಲ್ಲಿ ೩ ಅಡಿ ಎತ್ತರದಲ್ಲಿ ಕರಿಶೀಲೆಯ ಕಟ್ಟೆಯ ಮೇಲೆ ಸುಮಾರು ೫ ಅಡಿ ಎತ್ತರದು ನುಣಪಾದ ಕರಿಶೀಲೆಯ ವೀರಭದ್ರನ ಮೂರ್ತಿ ನೋಡಲು ಮೋಹಕವಾಗಿದೆ. ಕೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಬಲಭಾಗದಲ್ಲಿ ದಕ್ಷ ಬ್ರಹ್ಮಕ್ಕೆ ಜೋಡಿಸಿ ನಿಂತಿದ್ದಾನೆ.

ಬೆಳ್ಳಿಯ ಮುಖವಾಡ ಹೊತ್ತು ನಿಂತ ವೀರಭದ್ರನ ಅವಯುವಗಳು ಕೂಡ ಒಳ್ಳೆಯ ಮೇಲು ಹೊಂದಿಕೆಗಳಾಗಿವೆ. ಭಯಂಕರವಾದ ರೂಪಹೊಂದಿದೆ. ಮೂರ್ತಿ ನೋಡಿದ ಕ್ಷಣವೇ ಸಾಕ್ಷಾತ್ ವೀರಭದ್ರೇಶ್ವರ ನೋಡಿದ ಹಾಗೆಯೇ ಕಾಣಿಸುತ್ತದೆ.

ಹಾಗೆಯೇ ಈ ದೇವರಿಗೆ ನೋಡಿದ ಕ್ಷಣವೇ ಮನದಲ್ಲಿ ಶಾಂತಿ ನೆಮ್ಮದಿ ದೊರೆಯುವ ರೀತಿಯಲ್ಲಿ ಹೊಂದಿದೆ. ಇಲ್ಲಿ ದೇವರ ದರ್ಶನ ಪೆಡದರೆ ನಮ್ಮ ಪಾಪ ಕರ್ಮವು ದೂರಹೋಗಿ ಪುಣ್ಯಸಿಗುವುದು. ಈ ಪುಣ್ಯಕ್ಷೇತ್ರ ಸಾವಿರಾರು ಜನರ ಕಷ್ಟಗಳು ದೂರವಾಗಿ ಒಂದು ಹೊಸಜೀವನ ಮುಕ್ತಿ ಸಿಗುತ್ತದೆ. ಎಂಬುವುದು ಉದಾಹರಣೆ ಮಾಹಿತಿ ಸಿಗುತ್ತವೆ. ಇಲ್ಲಿ ಬಂದ ಭಕ್ತರು ದೇವರ ದರ್ಶನ ಪಡೆದು ತಮ್ಮ ಕಷ್ಟಗಳು ಪರಿಹರಿಸಲು ಅನೇಕ ಹರಕೆಗಳು ಬೇಡಿಕೊಳ್ಳುತ್ತಾರೆ.

ವರ್ಣನೆ ಈ ಹಾಡಿನಲ್ಲಿ ನೋಡಬಹುದು

ವೀರಭದ್ರರು ದೇವರು ಹುಟ್ಟಿರೇ
ಪ್ರತಾಪುರದ ಪರಾಗಾಘುಣಗಾ
ಮಾನವದೇವರ ಕೂಡಿತಂದರ ಹುಮನಾಬಾದ ಪಾಟ್ಯಾಗ
ಕರಿವೀರ ಭದ್ರ ಮಹಿಮೆ ತಿಳಿಯಿಲ್ಲಾ ಸತ್ಯ ಕೊಟ್ಟರು
ಕುಲಭಕ್ತರಿಗೆ.

“ಜಾಗ ನೋಡಿ ತಳನ ಮಸಿ ಹರಷಬಿಟ್ಟಾರಾ ಮನದಾಗ” ಈ ಹಾಡಿನಲ್ಲಿ ಈ ದೇವರು ಹೇಗೆ ಈ ಊರಿಗೆ ಬಂದರು ಈ ದೇವರ ಮಹಿಮೆ ಕುರಿತು ತಿಳಿಸಲಾಗಿದೆ.

ಈ ಕ್ಷೆತ್ರ ತುಂಬಾ ಪವಿತ್ರವಾದ ಪುಣ್ಯಕ್ಷೇತ್ರ ಇಲ್ಲಿ ಪ್ರತಿಯೊಬ್ಬರು ತಮ್ಮ ಕಷ್ಟಗಳಿಗೆ ಪರಿಹಾರ ಸಿಗುತ್ತದೆ ಎಂಬ ದೃಢವಾದ ನಂಬಿಕೆ ಇದೆ. ಪುಣ್ಯ ಕ್ಷೇತ್ರಕ್ಕೆ ಮದುವೆಯಾದ ನಂತರ ಇಲ್ಲಿಯೇ ಬಂದು ದರ್ಶನ ಪಡೆಯುವರು. ಮತ್ತು ಮಕ್ಕಳ ಜಾವುಳು ತೆಗೆಯುತ್ತಾರೆ. ಮದುವೆಯ ಸಹ ನಡೆಯುತ್ತವೆ.

ಇಲ್ಲಿ ಗರ್ಭಗುಡಿಯಲ್ಲಿ ಎಲ್ಲರಿಗೂ ಒಳಗಡೆ ಹೋಗಲು ಅನುಮತಿ ಇಲ್ಲಾ. ಕೇವಲ ಗುಡಿಯ ಪೂಜಾರಿಗಳು ಅಷ್ಟೇ ಹೋಗುತ್ತಾರೆ. ಭಕ್ತಾದಿಗಳು ಹೊರಗಿನಿಂದಲೇ ದರ್ಶನ ಪಡೆಯಬೇಕು. ಇಲ್ಲಿ ಪ್ರತಿಯೊಂದು ವರ್ಗದ ಜನರು ಬರುತ್ತಾರೆ. ಎಲ್ಲರಿಗೂ ಸಮಾನವಾದ ಸ್ಥಾನ ಕೊಡುತ್ತಾರೆ.

ಇಲ್ಲಿನ ಒಂದು ವಿಶೇಷವೆಂದರೆ ದೇವರ ಮುಂಭಾಗದಲ್ಲಿ ಎರಡು ಕಂಬಗಳು ಇವೆ, ಆ ಕಂಬಗಳಲ್ಲಿ ಎಡಗೈಯದ ಕಂಬ ಮೇಲಿಂದ ಅಲ್ಲಾಡಿಸಿದರೆ ಅದು ಊಯ್ಯಾಲೆ ಅಂತೆ ಅಲಗಾಡುವುದು ಆದರೆ ಇದನ್ನು ಅಲ್ಲಾಡಿಸುವ ಅಧಿಕಾರ ಮಾತ್ರ ದೇವಸ್ಥಾನ ಪೂಜಾರಿ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟಿದವರಿಗೆ ಮಾತ್ರ ಅವಕಾಶವಿದೆ. ಇದು “ಜಗತ್ತಿನ ಕೆಲವು ಆಶ್ಚರ್ಯಗಳಲ್ಲಿ ಇದು ಒಂದು ಹೇಳಬಹುದು. ಈ ತರಹ ಕೆಲವು ಸಂಗತಿ ನೋಡಿದಾಗ ದೇವರು ಇಲ್ಲಿ ಸಾಕ್ಷಾತ್‌ವಾಗಿ ನೆಲೆಸಿದ್ದಾರೆ ಎಂಬ ಭಾವನೆ ಬರುವುದು. ಆದ್ದರಿಂದ ಇದು ಮಹತ್ತರ ಪುಣ್ಯಕ್ಷೇತ್ರವೆಂದು ಹೇಳಬಹುದು. ಅಲ್ಲದೇ ಅಗಲವಾದ ಪುಷ್ಕರಣಿ ಇದೆ. ಮೂರ್ತಿಗಳು ಆಕರ್ಷವಾಗಿದೆ. ಪ್ರತಿವರ್ಷ ಜನೆವರಿ ೨೬ ರಂದು ನಡೆಯ ರಥೋತ್ಸವಕ್ಕೆ ಆಂಧ್ರ, ಮಹಾರಾಷ್ಟ್ರ ಮುಂತಾದ ಪ್ರಾಂತಗಳಿಂದ ಲಕ್ಷಾವಧಿ ಯಾತ್ರಾರ್ಥಿಗಳು ಈ ಪುಣ್ಯಕ್ಷೇತ್ರಕ್ಕೆ ಆಗಮಿಸುತ್ತಾರೆ.

ಹಾಗೆಯೇ ಈ ನಗರವು ವ್ಯಾಪಾರ ಕೇಂದ್ರವಾಗಿತ್ತು. ಕುದರೆ, ಬಂಗಾರ ಕಸ್ತೂರಿ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ಹೀಗೆ ಒಂದು ಸಮಯದಲ್ಲಿ ವೈಭವದಿಂದ ಮೆರದ ಈ ನಗರ ಆಕ್ರಮಣಕಾರರು ದಾಳಿ ಕಾಲಾರದಂತಹ ಭಯಂಕರ ಪೀಡಿಗೆ ಬಲಿಯಾಗಿತ್ತು. ಈ ಸ್ವತಂತ್ರ ಭಾರತದ ಈ ಒಕ್ಕೂಟಕ್ಕೆ

ಸೇರಿದ ನಂತರ ಈ ಪ್ರದೇಶ ಪುನ: ಚೇತರಿಸಿಕೊಳ್ಳುತ್ತಿದ್ದು ಪ್ರಗತಿಯತ್ತ ಮುನ್ನಡೆಯುತ್ತದೆ.

ಈ ಪುಣ್ಯ ಕ್ಷೇತ್ರಕ್ಕೆ ಬಂದವರು ತಮ್ಮ ಕಷ್ಟಗಳಿಗೆ ಪರಿಹರಿಸುವ ಈ ಪುಣ್ಯ ಕ್ಷೇತ್ರ ತುಂಬಾ ಪವಿತ್ರವಾದ ಸ್ಥಳವಾಗಿದೆ. ಈ ಕ್ಷೇತ್ರದಲ್ಲಿ ದೇವರಿಗೆ ಹರಕೆ ಹೊತ್ತುತ್ತಾರೆ. ಹೆಚ್ಚಾಗಿ ಮಕ್ಕಳಾಗದವರು ಹರಕೆ ಹೊರುವರು. ನಂತರ ತಮಗೆ ಪರಿಹಾರ ಸಿಕ್ಕಿದನಂತರ ತಮ್ಮ ಹರಕೆಯನ್ನು ಮಕ್ಕಳ ಜಾವುಳು ತೆಗೆಯುವುದು (ಮಕ್ಕಳ ಕೂದಲು ದೇವರಿಗೆ ಕೊಡುವುದು) ಹಾಗೆಯೇ ಮಕ್ಕಳಿಗೆ ಈ ದೇವರ ಹೆಸರು ವೀರಭದ್ರವೆಂದು ಹೆಸರಿನಿಂದ ನಾಮಕರಣ ಮಾಡುತ್ತಾರೆ. ಹಾಗೆಯೇ ನವದಂಪತಿಗಳು ಪುಣ್ಯಕ್ಷೇತ್ರಕ್ಕೆ ಮೊದಲು ಬಂದು ದರ್ಶನ ಪಡೆದು ನಂತರ ಅವರ ವೈವಾಹಿಕ ಜೀವನ ಪ್ರಾರಂಭಿಸುವುದು. ಈ ಕ್ಷೇತ್ರದಲ್ಲಿ ಮದುವೆಗಳು ನಡೆಯುತ್ತವೆ.

ಈ ದೇವಾಲಯದ ಕಟ್ಟಡ, ವಾಸ್ತುಶಿಲ್ಪ, ಕಂಬಗಳು ಹೆಬ್ಬಾಗಿಲು ಪ್ರತಿಯೊಂದು ಕಟ್ಟಡಗಳು ತನ್ನದೇ ಆದ ವೈಶಿಷ್ಟ ಪೂರ್ಣವಾದ ಗತವೈಭವವನ್ನು ಸಾರುತ್ತದೆ. ಹಾಗೆಯೇ ಒಂದು ವಿಶೇಷವಾದ ರೀತಿಯಲ್ಲಿ ಜಾತ್ರೆ ನಡೆಯುತ್ತದೆ. ಪ್ರತಿವರ್ಷ ಜನೆವರಿ ೧೫ ರಂದು ಪ್ರಾರಂಭವಾದ ವಾರ್ಷಿಕ ಜಾತ್ರೆ ಜನೆವರಿ ೩೦ ರ ವರೆಗೆ ಮುಂದುವರಿಯುತ್ತದೆ. ಈ ಜಾತ್ರೆ ಪ್ರಾರಂಭವಾದ ಮೊದಲೆ ದೇವಾಲಯಕ್ಕೆ ಸುಣ್ಣ – ಬಣ್ಣ ಬಳಿದು ದೇವಾಲಯ ಸ್ವಚ್ಛಗೊಳಿಸುತ್ತಾರೆ.

ಈ ಜಾತ್ರೆ ಪ್ರಾರಂಭವಾಗುವ ಮುನ್ನವೆ ಈ ಊರು ಒಂದು ವಿಶೇಷ ರೀತಿಯಲ್ಲಿ ಕಂಡು ಬರುತ್ತದೆ. ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಕೂಡಾ ಪ್ರತಿಯೊಬ್ಬರು ತಮ್ಮ ತಮ್ಮ ಮನೆ ಅಂಗಡಿ ಎಲ್ಲವು ವಿಶೇಷ ರೀತಿಯಾಗಿ ಶುಭ್ರಗೊಳಿಸಿ ಅಲಂಕರಿಸುತ್ತಾರೆ. ಇದು ಒಂದು ಹಬ್ಬದ ಸಡಗರ ಹೊಂದಿರುತ್ತದೆ. ಆ ಊರಿನ ಜನರಿಗೆ ಹಾಗೆಯೇ ತಮ್ಮ ತಮ್ಮ ಸಂಬಂಧಿಕರನ್ನು ಜಾತ್ರೆಯನ್ನು ನೋಡಲಿಕ್ಕೆ ಕರೆಸಿಕೊಳ್ಳುತ್ತಾರೆ.

ಹಾಗೆಯೇ ಆ ದೇವಾಲಯದಲ್ಲಿ ಕೂಡ ಜಾತ್ರೆ ಪ್ರಾರಂಭವಾಗುವ ಮೊದಲೇ ದೇವಾಲಯಕ್ಕೆ ಸುಣ್ಣ–ಬಣ್ಣ ಬಳಿದು ದೇವಾಲಯ ಸ್ವಚ್ಛಗೊಳಿಸುತ್ತಾರೆ. ಭಕ್ತರಿಂದ ಅಥವಾ ಇನ್ನಾರಿಂದಾಗಲಿ ಚಂದಾ ಹಣ ಕೊಡಿಸುವ ಸಂಪ್ರದಾಯ ಇಲ್ಲಿಲ್ಲ. ಭಕ್ತರೆ ಸ್ವತ: ಬಂದು ದವಸ ಧಾನ್ಯಗಳು ಕೊಟ್ಟು ಹೋಗುತ್ತಾರೆ. ಇಲ್ಲವೆ, ಸಾಧ್ಯವಾದಷ್ಟು ನಗದು ಹಣ ದವಸ

ಧಾನ್ಯಗಳು ಜಾತ್ರೆ ಸಂದರ್ಭದಲ್ಲಿ ಉಪಯೋಗಕ್ಕೆ ಬಳಸಿಕೊಂಡು ವೈಭವ ಪೂರ್ಣ ಉತ್ಸವ ಆಚರಿಸುತ್ತಾರೆ.

ಒಂದು ವಿಶಿಷ್ಟವಾದ ರೀತಿಯಲ್ಲಿ ಮುಂದುರೆಸಿಕೊಂಡು ಬರುತ್ತಿದ್ದಾರೆ. ಈ ವೀರಭದ್ರೇಶ್ವರ ಜಾತ್ರೆ ಸಂದರ್ಭದಲ್ಲಿ ಈ ಕೆಳಕಂಡ ಪ್ರಮುಖ ಆಚರಣೆ ಜರುಗುತ್ತವೆ.

೧. ಆನೆಯ ಮೆರವಣಿಗೆ.

೨. ಕೀರ್ತನ ಗಾಯನ.

೩. ಉಚಾಯಿ ಮೆರವಣಿಗೆ.

೪. ಅಗ್ನಿ ಪೂಜಾ.

೫. ರಥೋತ್ಸವ.

೬. ಕುಸ್ತಿಯಾಟ.

೭. ಸಮಯ ರೋಶನಿ ಮತ್ತು ದರಬಾರ ಇತ್ಯಾದಿ.

ಆನೆಯ ಮೆರವಣಿಗೆ:

ಇದು ಜೀವಂತ ಆನೆಯ ಮೆರವಣಿಗೆ ಅಲ್ಲ. ಕೈಯಿಂದಮಾಡಿದ ದೊಡ್ಡ ಗಾತ್ರದ ಆನೆ ಇಲ್ಲಿದೆ. ಈ ಆನೆಯ ಮೇಲೆ ಈ ದೇವಾಲಯ ಪುನರ್ ನಿರ್ಮಾಣ ಮಾಡಿದ ರಾಜಚಂದ್ರಸೇನ ಜಾಧವನ ಪ್ರತೀಕವಾದ ಮೂರ್ತಿ ಇಲ್ಲಿದೆ. ಇದನ್ನು ಎತ್ತಿನ ಬಂಡಿಯ ಮೇಲಿಟ್ಟು ಬೀದಿಗಳಲ್ಲಿ ಮೆರವಣಿಗೆ ಕೊಂಡೊಯ್ಯುತ್ತಾರೆ. ಭಜನೆ, ಪುರವಂತರ ಕುಣಿತ, ಡೊಳ್ಳು ಹಲಗೆ, ಬ್ಯಾಂಡು ಮುಂತಾದ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತವೆ. ಸಹಸ್ರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಮೆರವಣಿಗೆ ಈ ನಾಡಿಗೆ ಕಲ್ಯಾಣ ನಾಡಾಗಿಸಿದ ರಾಜ ಜಾಧವನ ನೆನಪಿನ ಪ್ರತೀಕವಲ್ಲದೇ ಅವನ ಸೇವೆ ನಮಗೆಲ್ಲ ಚಿರಸ್ಥಾಯಿ ಆದರ್ಶವೆಂದು ಆನೆ ಮೆರವಣಿಗೆ ಮಾಡುವ ಸಂಪ್ರದಾಯ ಅಂದಿನಿಂದ ಇಂದಿನವರೆಗೆ ಜೀವಂತವಾಗಿದೆ.

ಕೀರ್ತನೆ ಮತ್ತು ಗಾಯನ:

ಜಾತ್ರೆಯ ಸಂದರ್ಭದಲ್ಲಿ ಪ್ರತಿದಿನ ಕೀರ್ತನೆ ಗಾಯನ ಕಾರ್ಯ ಕ್ರಮವಿರುತ್ತದೆ. ಧಾರವಾಡ, ಬೆಂಗಳೂರು, ಬಸವಕಲ್ಯಾಣ, ಹುಲಸೂರು ಮುಂತಾದ ಕಡೆಗಳಲ್ಲಿ ಕೀರ್ತನೆ ಮಾಡುವವರಿಗೆ ತಕ್ಕ ಸಂಭಾವನೆ ಇರುತ್ತದೆ.

ಅಕ್ಕಮಹಾದೇವಿ ಬಸವಣ್ಣ ಚನ್ನಬಸವಣ್ಣ ಮುಂತಾದವರ ಮಹಾನ ವ್ಯಕ್ತಿಗಳ ಸಾಹಸಮಹಿಮೆ ಅವರ ಕಾರ್ಯಗಳು ಆದರ್ಶ ಕುರಿತು ಮತ್ತು ಅವರ ಜೀವನದ ಚರಿತ್ರೆ ಕುರಿತು ಕೀರ್ತನೆಯ ಮೂಲಕ ಜನರಿಗೆ ಸರಳವಾದ ತಿಳಿಯುವ ರೀತಿಯಲ್ಲಿ ಕೀರ್ತನೆ ಹೇಳುವರು ಹಾಗೆಯೇ ಪಾಪ, ಪುಣ್ಯ, ಒಳ್ಳೆಯದು ಕೆಟ್ಟದ್ದು ಜೀವನದಲ್ಲಿ ಶಿಸ್ತು ನಡೆ ನುಡಿ, ಸರಳ ಜೀವನ ಕುರಿತು ಸವಿಸ್ತಾರವಾಗಿ ಜನರಿಗೆ ಮಾರ್ಗದರ್ಶನವನ್ನು ಕೀರ್ತನಗಳ ಗಾಯನ ಮೂಲಕ ಹೇಳುತ್ತಾರೆ. ಈ ಕೀರ್ತನೆ ಕೇಳುವುದರಿಮದ ಪುಣ್ಯಸಿಗುತ್ತವೆ. ಒಳ್ಳೆಯ ನಡೆ ನುಡಿ ಆಚಾರ ವಿಚಾರ ಬಗ್ಗೆ ತಿಳುವಳಿಕೆ ಸಿಗುತ್ತದೆ. ಜೀವನ ಸುಖಮಯವಾಗಬೇಕಾದರೆ ಕೀರ್ತನ ಮತ್ತು ಗಾಯನ ಕೇಳುವುದು ತುಂಬಾ ಅವಶ್ಯಕವಾಗಿದೆ.

ಉಚ್ಛಾಯಿ ಮೆರವಣಿಗೆ:

ರಥೋತ್ಸವ ಜರುಗುವ ಐದು ದಿನಗಳು ಮೊದಲ ಸಣ್ಣ ತೇರೊಂದನ್ನು ಜಗ್ಗುವರು. ಇದಕ್ಕೆ ಉಚಾಯಿ ಮೆರವಣಿಗೆ ಎಂದು ಕರೆಯುತ್ತಾರೆ. ಈ ಉಚಾಯಿ ಮೆರವಣಿಗೆ ದೇವಾಲಯದಿಂದ ಬಸವೇಶ್ವರ ಚೌಕಿನವರೆಗೆ ಇರುತ್ತದೆ. ಈ ಸಣ್ಣ ತೇರಿನಲ್ಲಿ ವೀರಭದ್ರೇಶ್ವರ ವಿಗ್ರಹದ ಜೊತೆಗೆ ಸ್ವಾಮಿಯನ್ನು ಕೂಡಿಸುತ್ತಾರೆ. ಉಚಾಯಿ ಜಗ್ಗುತ್ತಾರೆ. ಜಯ ಘೋಷಿಗಳನ್ನು ಹಾಕುತ್ತಾರೆ. ಪುರವಂತರ ಕುಣಿತ, ಶಸ್ತ್ರ ಹಾಕಿಕೊಳ್ಳುವುದು, ಕಣ್ಣಿಗೆ ಕಟ್ಟಿದಂತಿರುತ್ತದೆ ರಸ್ತೆಯ ಅಕ್ಕ ಪಕ್ಕದಲ್ಲಿರುವ ಮನೆಯ ಸುಮಂಗಲೆಯರು ಉಚಾಯಿಗೆ ಮಂಗಳಾರತಿ ಮಾಡುತ್ತಾರೆ. ತೆಂಗು ಒಡೆಯುತ್ತಾರೆ. ಶಲ್ಯ ಹಾಕುವರು ದರ್ಶನ ಪಡೆದುಕೊಳ್ಳುವರು.

ಇಲ್ಲಿ ಇದು ಒಂದು ವಿಶಿಷ್ಟವಾದ ಮಹತ್ವವಾದ ಪದ್ಧತಿಯಾಗಿದೆ. ಈ ಪದ್ಧತಿಯಿಂದ ಈ ಪುಣ್ಯಕ್ಷೇತ್ರ ಬಹಳ ಪ್ರಸಿದ್ಧಿ ಹೊಂದಿದೆ. ಈ ತರಹ ಪದ್ಧತಿ ಎಲ್ಲೂ ಸಹ ಕಂಡು ಬರುವುದಿಲ್ಲ. ಈ ಪುಣ್ಯ ಕ್ಷೇತ್ರದಲ್ಲಿ ಮಾತ್ರ ಕಾಣಬಹುದು.

ಅಗ್ನಿ ಪೂಜಾ:

ಇದಕ್ಕೆ ಅಗ್ಗಿ ತುಳಿಯುವುದು ಎನ್ನುತ್ತಾರೆ. ಹರಕೆ ಹೊತ್ತ ಭಕ್ತರು ಸೌದೆಗಳನ್ನು ಖರೀದಿಸಿ ಬೆಂಕಿಯ ಕೊಂಡದಲ್ಲಿ ಒಂದೊಂದು ಕಟ್ಟಿಗೆಯನ್ನು

ಹಾಕುತ್ತಾ ಕೊಂಡದ ಸುತ್ತು ಹಾಕುವರು. ಹೀಗೆ ೫-೧೧ ಇಲ್ಲವೇ ೨೧ ಸುತ್ತುಹಾಕುವರು. ವೀರಭದ್ರನ ದರ್ಶನ ಪಡೆದುಕೊಳ್ಳುತ್ತಾರೆ. ಹೀಗೆ ಮಾಡುವದರಿಂದ ವರ್ಷದಲ್ಲಿ ತಾನು ಮಾಡಿದ ಪಾಪಕರ್ಮಗಳೆಲ್ಲಾ ಸುಟ್ಟುಹೋಗಿ ಪುಣ್ಯಸಿಗುತ್ತದೆ ಎಂದು ಜನಪದರ ನಂಬಿಕೆಯಾಗಿದೆ. ಈ ಕ್ಷೇತ್ರ ಒಂದು ಮಹತ್ತರ ಪುಣ್ಯಕ್ಷೇತ್ರವೆನ್ನಲು ಉಚ್ಚಾಯಿ ಮೆರವಣಿಗೆ ಮತ್ತು ಅಗ್ನಿಪೂಜಾ ಇವೆರಡು ಪದ್ಧತಿ ಬಹುಮುಖ್ಯವಾದ ಕಾರಣವಾಗಿವೆ.

ಸಮಯ ರೋಶನಿ ಮತ್ತು ದರಬಾರ

ಇದು ಜಾತ್ರೆಯ ಕೊನೆಯ ದಿನದ ಕಾರ್ಯಕ್ರಮ ಜನೆವರಿ-೨೬ ರಂದು ಜರುಗುವ ವಿಶಿಷ್ಟ ಕಾರ್ಯಕ್ರಮ ಇದಾಗಿದೆ. ಜಾತ್ರೆ ಯಶಸ್ವಿಗೊಳಿಸಲು ದುಡಿದ ಮಹಾನುಭಾವರಿಗೆ ಗೌರವ ಧನ ಕೊಟ್ಟು ಧನ್ಯವಾದಗಳು ಹೇಳುವುದೇ ಸಮಯ ರೋಶನ ದರಬಾರ ಎಂದು ಕರೆಯಲಾಗಿದೆ.

ಈ ದರಬಾರ ಕಾರ್ಯಕ್ರಮ ಮುಂಜಾನೆ ೧೦-೧೧ ಗಂಟೆ ಸುಮಾರಿಗೆ ಸುರುವಾಗಿ ರಾತ್ರಿ ೧೦-೧೧ ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಸಾವಿರಾರು ಜನರು ದರಬಾರ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವ ಪರಿಪಾಠ ಇಲ್ಲಿದೆ.

ಈ ರೀತಿಯಲ್ಲಿ ಈ ಪುಣ್ಯಕ್ಷೇತ್ರದಲ್ಲಿ ವೈವಿದ್ಯಮಯ ಆಚರಣೆಗಳು ಪದ್ಧತಿಗಳು ಹೊಂದಿವೆ. ಅದರಲ್ಲೂ ಜಾತ್ರೆ ಸಮಯದಲ್ಲಿ ನಡೆಯುವ ಪದ್ಧತಿಯಂತು ತುಂಬಾ ವಿಶಿಷ್ಟವಾದುದು. ಈ ಜಾತ್ರೆಯ ಸಮಯದಲ್ಲಿ ಇಲ್ಲಿ ಸಾಕ್ಷಾತ್ ದೇವರ ದರ್ಶನ ಸಿಗುತ್ತದೆ ಎಂದು ಸಾವಿರಾರು ಜನರು ದೇವರ ದರ್ಶನಕ್ಕೆ ಬರುತ್ತಾರೆ. ಈ ತರಹ ಆಚರಣೆಗಳು ಕರ್ನಾಟಕದಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಆದ್ದರಿಂದ ಈ ಪುಣ್ಯಕ್ಷೇತ್ರ ಇಡೀ ರಾಜ್ಯಗಳಲ್ಲಿ ದೇಶದಲ್ಲಿ ಪ್ರಸಿದ್ಧ ಹೊಂದಿದೆ. ಇದು ಒಂದು ಬೀದರ ಜಿಲ್ಲೆಯ ಪವಿತ್ರವಾದ ಪುಣ್ಯಕ್ಷೇತ್ರವಾಗಿದೆ.

ಶ್ರೀ ಮಾಣಿಕ ಪ್ರಭು-೧೧

ಪುಣ್ಯಕ್ಷೇತ್ರಗಳು ಮನುಷ್ಯನನ್ನು ಹೊರತುಪಡಿಸಿಲ್ಲ. ಅದು ಆತನ ಅಭ್ಯುದಯಕ್ಕೆಂದೇ ಹುಟ್ಟುಕೊಂಡು ಬಂದಿರುತ್ತದೆ. ಮನುಷ್ಯನು ಒಂಟಿಯಾಗಿ ಬಾಳಲಾರನು ಅವನು ಸಂಘಜೀವಿ ಸಮಾಜದೊಂದಿಗೆ ಜನತೆಯ ಮಧ್ಯದಲ್ಲಿ ಬಾಳುವಂಥವನು. ಹೀಗೆ ಬಾಳುತ್ತಿರುವಾಗ ಪ್ರಾಪಂಚಿಕವಾಗಿ ಬದುಕು ಸಾಗಿಸುತ್ತಿರುವಾಗ ಆತನ ನಡೆ ನುಡಿಗಳಲ್ಲಿ ಗೋಚರಿಸುವ ರೀತಿ ನೀತಿಗಳಿಗೆ ಸಾಮಾಜಿಕ ಚೌಕಟ್ಟನಿಟ್ಟಾಗ ಅಂಥ ಆಚಾರವೇ ಧರ್ಮವಾಗಿ ಮನುಷ್ಯ ಧರ್ಮವಾಗಿ ಕಾಣುವಂತಾಗಿದೆ.

ಮನುಷ್ಯ ಪ್ರಾಪಂಚಿಕವಾಗಿ ಬದುಕುವಾಗ ಹಲವಾರು ಕಷ್ಟ - ನಷ್ಟಗಳನ್ನು ಅನುಭವಿಸುತ್ತಾನೆ. ಸ್ವಾರ್ಥಕ್ಕಂಟಿಕೊಂಡೋ ದುಷ್ಟರ ಸಹವಾಸ ದೋಷದಿಂದಲೋ ಅಹಮಿಕೆ ನೆಲೆಗೇರಿಯೋ ಆಗಾಗ ಮನುಷ್ಯನು ತಪ್ಪು ಮಾಡುವುದು ಮತ್ತು ಪಾಪಕರ್ಮಗಳು ಮಾಡುವುದು ಸಹಜ, ಇವುಗಳೆಲ್ಲಕ್ಕೂ ಪರಿಹಾರಗಳು ಕಂಡುಕೊಳ್ಳಬೇಕಾದರೆ ಸತ್ಸಂಗ ಬಯಸಿ ಪುಣ್ಯಕ್ಷೇತ್ರಗಳಿಗೆ ದರ್ಶನ ಮಾಡುವುದು ಮತ್ತು "ಸತ್ಸಂವದ ಧರ್ಮಂಚರ" "ಸತ್ಯವ ನುಡಿವುದೇ ಸ್ವರ್ಗಲೋಕ ಮಿಥ್ಯವ ನುಡಿವುದೆ ಮರ್ತ್ಯಲೋಕ. ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ" ಸತ್ಯಮೇವ ಜಯತೇ ಎಂಬಂತಹ ಅನುಭವದ ನುಡಿಗಳು ಕೇಳುವುದು ಪುಣ್ಯಕ್ಷೇತ್ರಗಳಿಂದ ಮಾತ್ರ ಸಾಧ್ಯ. ಇಂತಹ ಒಂದು ಪಾಪಕರ್ಮಗಳನ್ನು ಕಳೆದುಕೊಳ್ಳುವ ಪುಣ್ಯಕ್ಷೇತ್ರ ಶ್ರೀ ಸದ್ಗುರು ಮಾಣಿಕಪ್ರಭು ಪುಣ್ಯಕ್ಷೇತ್ರ ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನಲ್ಲಿ ಮಾಣಿಕಗಿರಿ ಇದೆ.

ಈ ಪುಣ್ಯಕ್ಷೇತ್ರ ನಮ್ಮ ದೇಶದಲ್ಲಿಯೇ ತುಂಬಾ ಪ್ರಸಿದ್ಧಿ ಹೊಂದಿದ ಕ್ಷೇತ್ರ. ಒಂದು ಕ್ಷೇತ್ರ ಪುಣ್ಯಕ್ಷೇತ್ರವಾಗಬೇಕಾದರೆ ಆ ಕ್ಷೇತ್ರ ಮಹಿಮೆ ಸತ್ಯಕ್ಕೆ ಹತ್ತಿರವಾಗಿರಬೇಕು. ಮತ್ತು ಆ ಕ್ಷೇತ್ರದ ಬಗ್ಗೆ ಜನರಿಗೆ ಒಳಿತಾಗಿರಬೇಕು. ಭಕ್ತರು ಪಾಪಕರ್ಮಗಳು ನಿರ್ಮೂಲ ಮಾಡಿ ಅವರಿಗೆ ಸನ್ಮಾರ್ಗದತ್ತ ದಾರಿ ತೋರಿಸುವುದೇ ಪುಣ್ಯಕ್ಷೇತ್ರದ ಕೆಲಸ. ಇವುಗಳಿಗೆಲ್ಲಾ ಸಾಕ್ಷಿಯಾಗಿ ಇರುವ ಕ್ಷೇತ್ರ ಮಾಣಿಕಪ್ರಭು ಆ ಕ್ಷೇತ್ರಕ್ಕೆ ಹಿಂಧೂ ಭಕ್ತರು ಎಷ್ಟೂ ಬರುತ್ತಾರೋ ಹಾಗೆಯೇ ಮುಸಲ್ಮಾನರು ಮತ್ತು ಎಲ್ಲಾ ಧರ್ಮದವರು ಸಹ ಇಲ್ಲಿಯ ದರ್ಶನಕ್ಕೆ ಬರುತ್ತಾರೆ. ಆದ್ದರಿಂದ ಈ ಕ್ಷೇತ್ರ ರಾಷ್ಟ್ರೀಯ ಭಾವೈಕ್ಯತೆಗೆ

[illegible]

ನಿದರ್ಶನವಾಗಿರುತ್ತದೆ. ಇದು ನಮ್ಮ ದೇಶದಲ್ಲಿ ಮಾದರಿಯ ಪುಣ್ಯಕ್ಷೇತ್ರವಾಗಿದೆ.

ಈ ಕ್ಷೇತ್ರದಲ್ಲಿ ಮಾಣಿಕಪ್ರಭುಗಳು ಸಾಕ್ಷಾತ್ ದೇವರ ಸ್ವರೂಪ ಹೊಂದಿದ್ದರು. ಈ ಕ್ಷೇತ್ರ ತುಂಬಾ ಪವಿತ್ರ. ಏಕೆಂದರೆ, ಗುರುವಿನ ರೂಪದಲ್ಲಿ ದೇವರು ಬಂದು ಈ ಕ್ಷೇತ್ರದಲ್ಲಿ ನೆಲೆಸಿದ ನಾಡು. ಹಾಗೆಯೇ ಇವರು ಇದ್ದ ಸಮಯದಲ್ಲಿ ಇವರು ಮಾಡುವ ಪವಾಡಗಳು ಮತ್ತು ಇವರ ದರ್ಶನದಿಂದ ಭಕ್ತರ ಸಮಸ್ಯೆಗಳಿಗೆ ಪರಿಹರಿಸಿದ. ಎಷ್ಟೊಂದು ಉದಾಹರಣೆಗಳು ಕಾಣಬಹುದು. ಇವರಿಗೆ ಎಲ್ಲಾ ಜನಾಂಗದ ಜನರು ಭಕ್ತರು ಶಿಷ್ಯರಾಗಿದರು. ಇವರಲ್ಲಿ ಯಾವುದೇ ಜಾತಿ, ಮತ, ಜನಾಂಗಗಳ ಭೇದ ಭಾವ ಇರಲಿಲ್ಲ. ಮುಸಲ್ಮಾನರು ಭಕ್ತರು ತುಂಬಾ ಜನ ಇದ್ದರು. ಮತ್ತು ಮುಸಲ್ಮಾನರು ಶಿಷ್ಯರಾಗಿದ್ದು ಇಲ್ಲಿ ನೋಡಬಹುದು. ಹುಮನಾಬಾದನಲ್ಲಿ ಗುಲಾಮ ಮುಸ್ತಪಾಶಾ ಹೆಸರಿನ ತಾಲೂಕಾದಾರ ನೊಬ್ಬನಿದ್ದನು. ಅವನೂ ಪ್ರಭುವಿನ ದರ್ಶನಕ್ಕೆ ಒಂದು ದಿನ ಬಂದನು. ಪ್ರಭುಗಳ ಜೊತೆಗೆ ಬಹಳ ಹೊತ್ತು ಮಾತನಾಡುತ್ತ ಕುಳಿತನು. ಅತ್ಯಂತ ಸಂತೋಷಭರಿತನಾಗಿ ಮುಸಲ್ಮಾನಿ ಧರ್ಮದ ರಹಸ್ಯ ನಿಜವಾಗಿ ಪ್ರಭುಗಳಿಗೆ ಮಾತ್ರ ತಿಳಿದಿದೆ ಎಂದು ಮನವರಿಕೆ ಮಾಡಿಕೊಂಡನು. ಪ್ರಭುಗಳ ವಿಷಯಕ್ಕೆ ಅತ್ಯಂತ ಆದರ ಭಾವ ಮೂಡಿಸಿಕೊಂಡ ಆ ತಾಲೂಕಾದಾರ ಇಂಥ ಮಹಾತ್ಮರು ದೊರೆಯುವುದು ದುರ್ಲಭ ಎಂದು ಉದ್ಗಾರ ತೆಗೆದಿರುವುದು ಪ್ರಭುಗಳ ಮಹಾತ್ಮೆಗೆ ಹಿಡಿದ ಕನ್ನಡಿಯಾಗಿರುತ್ತದೆ. ಮಾಣಿಕಪ್ರಭುಗಳಿಗೆ ಅರಬ್ಬಿ ಮತ್ತು ಪಾರಸಿ ಭಾಷೆಯ ಜ್ಞಾನ ಎಲ್ಲರಿಗಿಂತಲೂ ಅಧಿಕವಾಗಿದೆಯೆಂದೂ ಸಾರಿದನು. ಪ್ರಭುಗಳ ಬಗೆಗೆ ಅತ್ಯಂತ ಆದರ ಭಾವ ಮೂಡಿಸಿಕೊಂಡು ಪ್ರಭುಗಳು ಮುಸಲ್ಮಾನರಾಗಿದ್ದರೆ ಬಹಳ ಉತ್ತಮವಾಗುತ್ತಿತ್ತು ಎಂದು ಪ್ರಶಂಸಿಸಿದನು. "ಮಹಾರಾಜ, ತಾವು ಮುಸಲ್ಮಾನರಾಗಿದ್ದರೆ ನಾನು ಇದೇ ಕ್ಷಣ ತಮ್ಮ ಶಿಷ್ಯನಾಗಿ ಬಿಡುತ್ತಿದ್ದೆ" ಎಂದನು. ಆಗ ಮಾಣಿಕಪ್ರಭುಗಳು,

> "ಹೌದು ನನಗೂ ಮುಸಲ್ಮಾನನಾಗಬೇಕು ಎನಿಸುತ್ತಿದೆ ಆದರೆ ಏನು ಮಾಡಲಿ? ರಬ್-ಉಲ್-ಆಲಮೀನ್ ಹೀಗೆ ಅಲ್ಲಾ ಕುರಾನದಲ್ಲಿ ಹೇಳಿದ್ದಾರೆ. ವಿಶ್ವದ ಅಧಿಪತಿ ಪರಮೇಶ್ವರ ನಿದ್ದಾನೆ ಎಂದಿದ್ದಾರೆಯೇ ಹೊರತು ಪರಮೇಶ್ವರ ಮುಸಲ್ಮಾನರಿಗಷ್ಟೇ ಅಧಿಪತಿಯಾಗಿದ್ದಾನೆ ಎಂದು ಕುರಾನದಲ್ಲಿ ಹೇಳಿದ್ದರೆ ನನಗೆ ತೋರಿಸಿರಿ".

ಎಂದಾಗ ಆತ ನಿರುತ್ತರನಾಗಿ ಮಾಣಿಕಪ್ರಭುಗಳ ಮಾಣಿಕ ನಗರದ ಬೆಳವಣಿಗೆಗೆ ಎಲ್ಲಾ ರೀತಿಯ ಸಹಾಯ-ಸಹಕಾರ ನೀಡಿದನು. ಪ್ರಭುಗಳ ಮಹತಿಯನ್ನು ಎಲ್ಲಾ ಕಡೆಗೂ ಪ್ರಚಾರಗೊಳಿಸತೊಡಗಿದನು. ಪ್ರಭುಗಳ ದರ್ಶನಾಶೀರ್ವಾದಕ್ಕಾಗಿ ಮೇಲಿಂದ ಮೇಲೆ ಮಾಣಿಕಗಿರಿಗೆ ಹೋಗಿ ಬರುತ್ತಿದ್ದನು. ಹಿಂದೂ ಮತ್ತು ಮುಸಲ್ಮಾನರೂ ಮಾಣಿಕ ಪ್ರಭುಗಳ ಶಿಷ್ಯರಾಗಿ ಈಗಲೂ ಈ ಸಮಾಧಿಗೆ ನಡೆದುಕೊಳ್ಳುತ್ತಿರುವುದ ರಾಷ್ಟ್ರೀಯ ಭಾವೈಕ್ಯತೆಗೆ ಮಾದರಿಯಾಗಿದೆ.

ಪ್ರಭುಗಳ ದರ್ಶನಕ್ಕೆ ಭಿನ್ನಭಿನ್ನ ಮತ ಮತ್ತು ವಿಚಾರದ ತತ್ವ ಪ್ರಣಾಲಿಯ ಜನರೂ ಬಂದು ಸೇರುತ್ತಿದ್ದರು. ಶೈವರಿಗೆ ಶಂಕರನ ರೂಪದಲ್ಲಿ ಲಿಂಗವಂತರಿಗೆ ಬಸವೇಶ್ವರರ ರೂಪದಲ್ಲಿ ಅಗ್ನಿಹೋತ್ರಿಯವರಿಗೆ ಅಗ್ನಿನಾರಾಯಣನ ರೂಪದಲ್ಲಿ ಸೌಕರರಿಗೆ ಸೂರ್ಯನ ರೂಪದಲ್ಲಿ ವೈಷ್ಣವರಿಗೆ ವಿಷ್ಣು ರೂಪದಲ್ಲಿ ಶಾಕ್ತರಿಗೆ ದೈವಿ ರೂಪದಲ್ಲಿ ಪ್ರಭುಗಳು ದರ್ಶನ ಕೊಡುತ್ತಿದ್ದರು. ಪರಧರ್ಮಿಯರಿಗೆ ಅವರವರ ಧರ್ಮದ ಉಜ್ವಲ ಸ್ವರೂಪ ನೋಡಲು ಸಿಗುತ್ತಿತ್ತು. ಸರ್ವ ಧರ್ಮ - ಸರ್ವ ಮತದವರು ಪ್ರಭುವಿನ ಹತ್ತಿರ ತಮ್ಮ ಹಟವಾದವನ್ನು ಮರೆತು ಅನ್ಯನಭಾವದಿಂದ ಪ್ರಭುವಿನನ್ನು ಆರಾಧಿಸುತ್ತಿದ್ದರು, ಗೌರವಿಸುತ್ತಲಿದ್ದರು. ಆದ್ದರಿಂದಲೇ ಈ ಕೇತ್ರವು ಸರ್ವ ಮತದವರಿಗೂ ಪವಿತ್ರ ಪುಣ್ಯಕ್ಷೇತ್ರವಾಗಿದೆ.

ಶಕೆ ೧೭೩೯ ಮಾರ್ಗಶೀರ್ಷ ಶುದ್ಧಚತುರ್ದಶಿ ಅಂದರೆ ದಿನಾಂಕ: ೨೨-೧೨-೧೮೧೭ ರಂದು ಲಾಡವಂತಿ ಗ್ರಾಮದಲ್ಲಿ ಬಯಮ್ಮ ತಾಯಿ ಎರಡನೆಯ ಪುತ್ರನಿಗೆ ಜನ್ಮ ನೀಡಿದರು. ಅಂದು ದತ್ತ ಜಯಂತಿಯ ದಿನವನ್ನು ಆಚರಿಸುತ್ತಲಿದ್ದರು. ಪ್ರಕೃತಿಯ ಸುಂದರ ಪರಿಸರದಲ್ಲಿ ಜನಿಸಿದ ಈ ಮಗುವಿಗೆ ಅಜ್ಜಿ ಬಚ್ಚಮ್ಮ ಅವರು ಮಾಣಿಕ ಎಂದು ಹೆಸರಿಟ್ಟರು. ಹಿಗ್ಗಿನಿಂದ ನನ್ನ "ರತ್ನ" ಎಂದು ಕರೆದರು. ಹಡೆದ ತಂದೆ ತಾಯಿಗಳಿಗಂತೂ ಅತೀವ ಸಂತೋಷವಾಯಿತು. ಮಗನ ಲಾಲನೆ-ಪಾಲನೆಯಲ್ಲಿ ತಂದೆ ತಾಯಿಗಳು ಅಭಿಮಾನ ಹೆಚ್ಚಿಸಿಕೊಂಡರು.

ಈ ಮಾಣಿಕಪ್ರಭು - ದಿವ್ಯ ಪ್ರಭೆಯಾಗಿ ನಾಲ್ಕನೆಯ ದತ್ತ ಅವತಾರದಂತೆ ಕಂಡರು ಈ ಪ್ರಭು ಜನನದಿಂದ ಇಡೀ ಲೋಕವೇ ಆನಂದ ಸಾಗರದಲ್ಲಿ ಮುಳುಗಿತು. ಲಾಡವಂತಿ ಗ್ರಾಮದ ಜನ ಊರಿಗೆ ಸಡಗರ ಸಂಭ್ರಮದಲ್ಲಿ ನಲಿ ನಲಿದಾಡಿದರು.

ಜಗತ್ತಿನ ಪ್ರಳಯ ಕಾಲದಲ್ಲಿ ಭಗವಂತನು ಮತ್ಸ್ಯಾವತಾರ ತಾಳಿದನು ಜಗತ್ತು ಮುಳುಗಿ ಹೋಗುವ ಸಮಯ ಬಂದಾಗ ಕೂರ್ಮನಾಗಿ ಬೆನ್ನ ಮೇಲೆ ಎತ್ತಿ ಹಿಡಿದಿರುವನು. ಪ್ರಜೆಗಳನ್ನು ಕಷ್ಟದಲ್ಲಿ ಕೆಡುವಲು ಬಂದವರನ್ನುವಾಮನ ಅವತಾರ ತಾಳಿ ಪಾತಾಳಕ್ಕೆ ಹಾಕಿ ತುಳಿದನು. ಹೀಗೆ ಸೃಷ್ಟಿಯ ಕ್ರಮವನ್ನು ಮುರಿಯಲು ಬಂದವರನ್ನು ರಾಮಕೃಷ್ಣಾದಿ ಅವತಾರ ತಾಳಿ ಸದೆ ಬಡಿದಿರುವುದನ್ನು ಕೇಳುತ್ತೇವೆ. ಹೀಗೆ ಸ್ಥಿತ್ಯಂತರಗಳನ್ನು ಸರಿಪಡಿಸುವುದೇ ಅವತಾರದ ಮೂಲೋದ್ದೇಶವಾಗಿರುತ್ತದೆ. ಹಾಗೆಯೇ ಬದುಕಿನ ಮೌಲ್ಯಗಳೆಲ್ಲ ನಶಿಸಿ ಹೋಗುತ್ತಿದ್ದಾಗ ಮಹಾಪುರುಷರು ಹುಟ್ಟುತ್ತಿರುತ್ತಾರೆ. ಹೀಗೆ ನಮ್ಮ ನಾಡಿನಲ್ಲಿ ಕಷ್ಟಗಳು ಮತ್ತು ಪಾಪಕರ್ಮ ಜೀವನದ ಮೌಲ್ಯಗಳ ಸುಧಾರಣೆ ಮಾಡಲು ಹುಟ್ಟಿದ ಅವತಾರಿ ಪುರುಷರಾದ ಮಾಣಿಕ ಪ್ರಭುಗಳು.

ಮಾಣಿಕ ಪ್ರಭುಗಳು ಮಾಣಿಕ ನಗರ ಪುಣ್ಯಕ್ಷೇತ್ರವಾಗಿ ಮಾಡಿದ್ದು, ಬೀದರದಿಂದ ೫೫ ಕಿ.ಮೀ. ಅಂತರದಲ್ಲಿ ಹುಮನಾಬಾದ ಪಟ್ಟಣವಿದೆ. ಈ ಹುಮನಾಬಾದ ಪಶ್ಚಿಮಕ್ಕೆ ಒಂದು ಮೇಲು ದೂರದಲ್ಲಿ ಗುರುಗಂಗಾ ಮತ್ತು ವಿರಜಾ ಎರಡು ನದಿಗಳ ಸಂಗಮ ಸ್ಥಾನವಿದೆ. ಇಲ್ಲಿಯೇ ಮಾಣಿಕಪ್ರಭುಗಳು ಬೀಡು ಬಿಟ್ಟರು. ಇಲ್ಲಿಯೇ ಕ್ರಿ.ಶ. ೧೮೪೫ ರಲ್ಲಿ ಮಾಣಿಕ ನಗರ ಊರು ಸ್ಥಾಪನೆಯಾಯಿತು. ಮಾಣಿಕನಗರದ ಸುತ್ತಲೂ ಮೂರು ಊರುಗಳ ಹದ್ದು ಇದೆ. ಹುಮನಾಬಾದ ಗಡವಂತಿ ಮತ್ತು ಧುಮ್ಮನ್ಸೂರ ಈ ಮೂರು ಗ್ರಾಮಗಳ ಜನರೂ ತಮ್ಮ ತಮ್ಮ ಹದ್ದಿಯಲ್ಲಿಯ ತುಸು ಜಮೀನು ಕೊಟ್ಟಿದ್ದರಿಂದ ಇಲ್ಲಿ "ಮಾಣಿಕ ನಗರ" ಹೆಸರಿನ ಸ್ವತಃ ಊರಾಯಿತು. ಇದರ ಪೂರ್ವಕ್ಕೆ ಹುಮನಾಬಾದ ಪಶ್ಚಿಮಕ್ಕೆ ಗಡವಂತಿ ದಕ್ಷಿಣಕ್ಕೆ ನದಿ ಮತ್ತು ಉತ್ತರಕ್ಕೆ ಧುಮ್ಮನ್ಸೂರ ಹೀಗೆ ಮೂರು ಸೀಮೆಗಳ ಮಧ್ಯದ ಸ್ಥಾನವೇ ಈ ಮಾಣಿಕ ನಗರವಾಗಿ "ಮಾಣಿಕ ಗಿರಿ" ಮಾಣಿಕ ನಗರ ಪುಣ್ಯಕ್ಷೇತ್ರಯೆನಿಸಿದೆ.

ಮಾಣಿಕಪ್ರಭುಗಳು ಮಾಣಿಕ ನಗರಕ್ಕೆ ಬಂದಾಗ ಹುಮನಾಬಾದವು ಶಮಸುಲ ಉಮರಜಾನ ಎನ್ನುವವನ ತಾಬೇದಲ್ಲಿತ್ತು. ವ್ಯಾಪಾರ ಜೋರಾಗಿ ನಡೆಯುತ್ತಿತ್ತು. ಅಂದು ಇಲ್ಲಿ ಅಪ್ಪುವಿನ ವ್ಯಾಪಾರ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಲಿತ್ತು. ಇಲ್ಲೆಲ್ಲ ಪ್ರಭು ಸಮಾಧಿವರೆಗೆ ವ್ಯಾಪಾರ ಹೆಚ್ಚಿತು. ಮಾಣಿಕಪ್ರಭುಗಳು ಸಂಗಮದಲ್ಲಿ ಬಂದ ನೆಲೆನಿಂತರು. ಆಗ ಇಲ್ಲಿ ಎಲ್ಲಿ ನೋಡಿದಲ್ಲಿ ಅರಾಜಕತೆ ತುಂಬಿತ್ತು. ರಾಜ್ಯವ್ಯವಸ್ಥೆಯಂತೂ ಇದ್ದಿರಲೇ ಇಲ್ಲ. ಕಾಯದೆಯೆಂದರೆ ಏನು ಎನ್ನುವುದೇ ಗೊತ್ತಿದ್ದಿರಲಿಲ್ಲ. ಇದು

ಮೊಗಲಾಯಿಯಲ್ಲಿಯೇ ಒಬ್ಬ ಜಹಾಗೀರದಾರನನ ಸ್ಥಾನವಾಗಿತ್ತು. ಆಗ ತಾಲೂಕದಾರನೇ ನವಾಬನಂತೆ (ಜಿಲ್ಲಾಧಿಕಾರಿ) ವರ್ತಿಸುತ್ತಿದ್ದನು. ಭೂಕಂದಾಯ ಹೊರತಾಗಿಯೂ ಇತರ ಕರಗಳನ್ನು ಪ್ರಜೆಗಳಿಂದ ವಸೂಲು ಮಾಡುತ್ತಿದ್ದರು. ಇಲ್ಲಿ ಕೊಲೆ, ಸುಲಿಗೆ, ದರೋಡೆ, ಅವ್ಯಾಹತವಾಗಿ ನಡೆಯುತ್ತಲೇ ಇದ್ದವು. ಜಹಗೀರದಾರರೂ ಸಾಲಗಾರರಾಗಿರುತ್ತಿದ್ದರು. ಊರಲ್ಲಿಯ ಸಾಹುಕಾರನನ್ನೇ ಅವರು ಅವಲಂಬಿಸಿ ಇರುತ್ತಿದ್ದರು. ಪೋಲಿಸ್ ರಕ್ಷಣೆ ಇದ್ದಿರಲಿಲ್ಲ. ಹಗಲು ಹೊತ್ತಿನಲ್ಲಿಯೇ ಲೂಟಿ–ಸುಲಿಗೆ ನಡೆಯುತ್ತಿದ್ದರೂ ಯಾರು ಕೇಳುವವರಿರುತ್ತಿದ್ದಿರಲಿಲ್ಲ. ಸಾಹುಕಾರರು ವ್ಯಾಪಾರಗಳು ತಮ್ಮ ರಕ್ಷಣೆಗಾಗಿ ತಾವೇ ಅರಬ, ರೋಹಿಲ, ಶೀಖ ಮೊದಲಾದ ಜನರನ್ನು ಕಾವಲುಗಾರರನ್ನಾಗಿ ಇಟ್ಟುಕೊಂಡಿರುತ್ತಿದ್ದರು. ಅವರು ಅಸಂತುಷ್ಟರಾಗಿ ಗುಂಪುಗೂಡಿ ಲೂಟಿ ಮಾಡಲು ಹೋಗುತ್ತಿದ್ದರು. ಹೀಗಾಗಿ ಜನರು ಶಸ್ತ್ರಧಾರಿಗಳಾಗಿಯೇ ಇರಬೇಕಾಗುತ್ತಿತ್ತು. ಇಂಥ ಕರಾಳ ಛಾಯೆಯ ಪರಿಸರದಲ್ಲಿ ಮಾಣಿಕ ಪ್ರಭುಗಳು ಸಂಗಮದಲ್ಲಿ ಬಂದು ಇರತೊಡಗಿದರು. ಈ ಕ್ಷೇತ್ರದಲ್ಲಿ ಎಂಟು ಹತ್ತು ಜನರಿರುವ ಕುಟುಂಬದ ಗೃಹಸ್ಥನೊಬ್ಬನು ಮಾಣಿಕ ಪ್ರಭುಗಳ ದರ್ಶನಕ್ಕಾಗಿ ಹೊರಟವನು. ಇಲ್ಲಿ ವಸತಿ ಮಾಡಿದಾಗ ಕೊಲೆಗಡುಕರ ಕೈಗೆ ಸಿಕ್ಕಿ ಬಿದ್ದನು. ಮಾಣಿಕಪ್ರಭುಗಳು ಪ್ರಕಟರಾಗಿ ಬದುಕಿಸಿದರೆಂಬ ಕಥೆಯೂ ಇಲ್ಲಿನ ಭಕ್ತರು ಹೇಳುತ್ತಾರೆ. ಈ ಘಟನೆ ಆದಾಗಿನಿಂದ ಭಕ್ತರ ನಂಬಿಕೆ ಹೆಚ್ಚಾಗುತ್ತಾ ಹೋಯಿತು. ಈ ತರಹ ಪವಾಡ ನೋಡಿ ಭಕ್ತರಿಗೆ ಈ ಸ್ಥಳದಲ್ಲಿ ಸಾಕ್ಷಾತ್ ದೇವರು ನೆಲಸಿದ್ದಾರೆವೆಂಬ ನಂಬಿಕೆ ಭಕ್ತರಲ್ಲಿ ಮನೆಮಾಡಿತ್ತು. ಇದು ಒಂದು ಪ್ರಮುಖವಾಗಿ ಪುಣ್ಯಕ್ಷೇತ್ರವಾಗಲು ಮೊದಲು ಕಾರಣವಾಗಿದೆ.

ನಂತರ ಹೀಗೆ ಈ ಕ್ಷೇತ್ರ ಮಾಣಿಕಪ್ರಭುಗಳ ಪವಾಡಗಳಿಂದ ಈ ಕ್ಷೇತ್ರವು ಪ್ರಸಿದ್ಧಿ ಹೊಂದುತ್ತಾ ಪವಿತ್ರ ಪುಣ್ಯಕ್ಷೇತ್ರವಾಗುತ್ತಾ ಬೆಳೆಯಿತು. ಇಲ್ಲಿ ಭಕ್ತರು ಹೇಳುವ ಪ್ರಕಾರ ಇಲ್ಲಿ ತುಂಬಾ ಪವಾಡಗಳು ನಡೆದಿವೆ. ಅನೇಕರು ಭಕ್ತರ ಕಷ್ಟಗಳಿಗೆ ಸಾಕ್ಷಾತ್ ಪ್ರತ್ಯಕ್ಷರಾಗಿ ಮತ್ತು ವಿವಿಧ ರೂಪದಲ್ಲಿ ಬಂದು ಅವರ ಕಷ್ಟಗಳನ್ನು ಪರಿಹರಿಸುತ್ತಿದ್ದರು. ಒಂದು ಕ್ಷೇತ್ರ ಪವಿತ್ರ ಪುಣ್ಯಕ್ಷೆತ್ರವಾಗಬೇಕಾದರೆ ಆ ಕ್ಷೇತ್ರದ ಮಹಿಮೆ ಭಕ್ತರಲ್ಲಿ ನಂಬಿಕೆ ಬರುವಂತಹ ಸತ್ಯಕ್ಕೆ ಹತ್ತಿರವಾಗುವಂತಹ ಘಟನೆಗಳು ನಡೆಯಬೇಕು. ಆಗ ಮಾತ್ರ ಭಕ್ತರ ಆ ಕ್ಷೇತ್ರಕ್ಕೆ ಭಕ್ತಿಯಿಂದ ನಂಬಿಕೆಯಿಂದ ಹೆಚ್ಚಾಗಿ ಬರುತ್ತಾರೆ.

ಇವುಗಳ ಹಿನ್ನೆಲೆಯಾಗಿ ನೋಡಿದಾಗ ಮಾಣಿಕಪ್ರಭುಗಳ ಪುಣ್ಯಕ್ಷೇತ್ರ ಅನೇಕ ಉದಾಹರಣೆಗಳಿಗೆ ಸಾಕ್ಷಿಯಾಗಿ ನಿಂತಿದೆ. ಆದರೆ ಇವುಗಳಿಗೆ ಆಧಾರಗಳು ಅಷ್ಟೊಂದು ದೊರೆಯುವುದಿಲ್ಲ. ಆದರೆ ಜನಪದರು ಮತ್ತು ಭಕ್ತರು ಬಾಯಿಯಲ್ಲಿ ಇವು ಜೀವಂತವಾಗಿ ಸತ್ಯಕ್ಕೆ ಮೀರಿ ಜೀವಂತವಾಗಿವೆ.

ಈ ಪುಣ್ಯ ಕ್ಷೇತ್ರದಲ್ಲಿ ಇನ್ನೊಂದು ಘಟನೆ ಇಲ್ಲಿನ ಭಕ್ತರು ಹೀಗೆ ಹೇಳುತ್ತಾರೆ. ಒಬ್ಬ ಗ್ರಹಸ್ಥನು ತನ್ನ ಪತ್ನಿ ಸಮೇತ ಹಾಗೂ ಐದು ಹತ್ತು ಕುಟುಂಬಗಳ ಪರಿವಾರದೊಂದಿಗೆ ಬಸವಕಲ್ಯಾಣದ ಮಾಣಿಕಪ್ರಭುಗಳ ದರ್ಶನಕ್ಕೆಂದು ಹೊರಟಿದ್ದರು. ದಾರಿಯಲ್ಲಿ ದಣಿವಾದುದರಿಂದ ಈ ಹುಮನಾಬಾದ ಮತ್ತು ಗಡವಂತಿ ಪ್ರದೇಶದ ಮಧ್ಯದಲ್ಲಿ ನಿಂತರು. ಹರಿಯುತ್ತಿದ್ದ ನದಿಯಲ್ಲಿ ಸ್ನಾನ ಮಾಡಿದರು. ಬಟ್ಟೆ ತೊಳೆದುಒಂಡರು, ಅಲ್ಲಿಯೇ ಅಡುಗೆ ಮಾಡು ಊಟ ಮಾಡಿದರು, ವಿಶ್ರಾಂತಿ ಪಡೆದರು.

ಮುಂದೆ ಬಸವಕಲ್ಯಾಣಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗ ಅರಬ ಚೊರರೆನ್ನುವ ಹತ್ತಿಪ್ಪತ್ತು ಜನ ಹರಿತವಾದ ಆಯುಧಗಳನ್ನು ಹಿಡಿದುಕೊಂಡು ಝುಳಿಪಿಸುತ್ತ ಈ ಕುಟುಂಬದವರ ಮೇಲೆ ಹಲ್ಲೆ ಮಾಡಿದರು. ಅವರ ಹತ್ತಿರವಿದ್ದ ದ್ರವ್ಯವನ್ನೆಲ್ಲಾ ಲೂಟಿ ಮಾಡಿದರು. ಮಾನಹರಣ ಕೊಲೆಯನ್ನು ಮಾಡುವವರಿದ್ದಾಗ ಹಾ! ಪ್ರಭು-ರಕ್ಷಿಸು, ರಕ್ಷಿಸು ಎಂದು ಕೂಗಿಕೊಂಡರು, ಮಾಣಿಕಪ್ರಭುಗಳು ಪ್ರತ್ಯಕ್ಷರಾದರು. ಕಳ್ಳರು ಅಲ್ಲಿಂದ ಪಲಾಯನಗೈದರು. ಕತ್ತಲಿದ್ದುದರಿಂದ ದಾರಿ ಕಾಣದೇ ತಗ್ಗಿನಲ್ಲಿ ಬಿದ್ದರು. ಬಿದ್ದವರು ಮೇಲೇಳಲು ಸಾಧ್ಯವಾಗಲಿಲ್ಲ. ಪಶ್ಚಾತ್ತಾಪ ಪಟ್ಟರು, ಇನ್ನೆಂದಿಗೂ ಇಂಥ ಕೆಲಸ ಮಾಡುವುದಿಲ್ಲವೆಂದು ಆಣೆಯಿಟ್ಟುಕೊಂಡರು. ಪ್ರಭುಗಳ ದರ್ಶನ ಪಡೆದು, ಇನ್ನೆಂದಿಗೂ ಇಂಥ ಹೀನ ಕೃತ್ಯವೆಸಗುವುದಿಲ್ಲವೆಂದು ಚರಣಗಳಿಗೆ ಬಿದ್ದರು, ಪ್ರಭು ಕರುಣಿಸಿದರು. ಇಲ್ಲಿ ಇನ್ನೊಂದು ಸಂಗತಿ ಲಿಂಗವಂತ ಸಮಾಜದವರು ಎಂದು ಹೇಳುತ್ತಾರೆ. ಈ ಕ್ಷೇತ್ರದಲ್ಲಿ ಬಿಲ್ವ ಪತ್ರಿಯ ಗಿಡಗಳ ಮೇಲೆ ಎರಡು ಬ್ರಹ್ಮಸಂಬಂಧಗಳಿದ್ದವು. ಪ್ರಭುಗಳ ದರ್ಶನ ಮಾತ್ರದಿಂದ ಅವು ಮುಕ್ತವಾಗಿ ಉದ್ಧಾರವಾದವು ಎಂದರು. ಕೆಲವರು ಹುಮನಾಬಾದದ ಲಿಂಗವಂತ ಸಮಾಜದವರು ಇಲ್ಲಿಗೆ ಬಂದು ತಮ್ಮ ಮನದ ಅಳಲನ್ನು ತೋರಿಕೊಂಡು ಈ ಬಿಲ್ವವೃಕ್ಷಗಳು ಯಾವುದೋ ಭಾವಿ ಅನಾಹುತವನ್ನು ತೋರಿಸುವಂತಿದೆ ಎಂದರು ನಿವೆಲ್ಲರೂ ಶಂಕರನ ಭಕ್ತರಿರುವಿರಿ. ನೀವು ಏನಾದರೂ ಪ್ರಯತ್ನಪಟ್ಟರೆ ಸುಟ್ಟುಹೋದ ಗಿಡಗಳು ಸಜೀವವಾಗಬಹುದು. ತಪ್ಪದೇ

ದಿನಾಲು ಗಿಡದ ಕೆಳಗೆ ಹಾಲಿನಿಂದ ಅಭಿಷೇಕ ಮಾಡಿರಿ. ಅವು ಚಿಗಿಯಬಹುದು ಎಂದರು. ಇದನ್ನು ಕೇಳಿದ ಆ ಶಿವಭಕ್ತರು ಪ್ರಭುಗಳ ಸೂಚನೆಯಂತೆ ನಿತ್ಯಬಂದು ಹಾಲಿನಿಂದ ಅಭಿಷೇಕ ಮಾಡತೊಡಗಿದರು. ಶಂಕರನು ಪ್ರಸನ್ನನಾಗಿ ಆ ಗಿಡಗಳು ಮುಂಚಿನಂತೆ ಚಿಗಿಯತೊಡಗಿದವು. ಪ್ರಭುಗಳಿಗೂ ಸಂತೋಷವಾಯಿತು. ಜನತೆ ಪ್ರಭುಗಳ ಮಹಾತ್ಮೆಯನ್ನು ಬಣ್ಣಿಸತೊಡಗಿದರು. ಪ್ರಭುಗಳು ಅಲ್ಲಿಯೇ ವಸತಿ ಮಾಡಿಕೊಂಡಿರಲು ಗಟ್ಟಿ ಮನಸ್ಸು ಮಾಡಬೇಕೆಂದು ಜನತೆ ಒತ್ತಾಯಿಸತೊಡಗಿದರು.

ಈ ತರಹದ ಅನೇಕ ಮಾಣಿಕಪ್ರಭುಗಳ ಪವಾಡಗಳಿಂದ ಜನರು ಮಾಣಿಕಪ್ರಭುಗಳಿಗೆ ಗವಿನಿಂದ ದೇವರಾಗಿ ಭಾವಿಸತೊಡಗಿದ್ದರು. ಭಕ್ತರಲ್ಲಿ ಕ್ಷೇತ್ರವೇ ಸಾಕ್ಷಾತ್ ದೇವರು ಕಾಣುವ ಪುಣ್ಯ ಕ್ಷೇತ್ರವಾಗುತ್ತ ಹೋಗುತ್ತದೆ.

ಈ ಮಾಣಿಕನಗರವು ಮೊದಲು ಇದು ಕಳ್ಳಕಾಕರು, ಕೊಲೆಗಡುಕರು ಅಡಗಿ ಕೂಡ್ರುವ ತಾಣವಾಗಿದೆ. ದಟ್ಟಡವಿ ಬೇರೆ ನಿರ್ಜನ ಪ್ರದೇಶವಾಗಿದೆ. ಪಾಪಕೃತ್ಯವೆಸಗುವುದರಿಂದ ಈ ತಾಣ ಅಪವಿತ್ರವಾಗಿರುತ್ತದೆ. ಆದುದರಿಂದ ಮಾಣಿಕ ಪ್ರಭುಗಳು ಇಲ್ಲಿ ನೆಲೆಸುವುದು ಅಷ್ಟು ಸಮಂಜಸವಾಗದೆಂದು ತಮ್ಮ ತಮ್ಮ ವಿಚಾರಗಳನ್ನು ಶಿಷ್ಯರು ಮಾಣಿಕಪ್ರಭುಗಳಿಗೆ ನಿವೇದಿಸಿ ತೊಡಗಿದರು. ಪ್ರತಿ ದಿನಗಳು ಉರಿದು ಹೊಂದದ್ದು ಬ್ರಹ್ಮರಾಕ್ಷಸರು ಸುಟ್ಟು ಭಸ್ಮವಾದುದರ ಸಂಕೇತವಾಗಿದೆ. ಹೆದರುವ ಕಾರಣವಿಲ್ಲ. ದತ್ತ ಕೃಪೆಯಿಂದ ಎಲ್ಲವು ಸರಿಹೋಗುತ್ತದೆಯೆಂದರು.

ಮಾಣಿಕ ಪ್ರಭುಗಳು ನಿಜಾನಿಂದದಲ್ಲಿ ಅಲ್ಲಿಯೇ ಕುಳಿತುಕೊಂಡರು. ಬೈಲಿನಲ್ಲಿ ಚಳಿ, ಮಳೆ, ಬಿಸಿಲು, ಗಾಳಿಯೆನ್ನದೇ ಧ್ಯಾನಾಸಕ್ತರಾದರು. ಕ್ಷಣಾರ್ಧದಲ್ಲಿ ಸುತ್ತ ಮುತ್ತಣ ಪ್ರದೇಶವೆಲ್ಲವು ಪವಿತ್ರವಾಯಿತು. ಜನರೂ ಬದಲಾವಣೆಗೊಂಡರು, ಕಣ್ಣು-ಕಾಲು ಕೈಗಳನ್ನು ಕಳೆದುಕೊಂಡ ಕೊಲೆಗಡುಕರಿಗೆ ಬುದ್ಧಿ ಬಂದಿತು. ತಾವು ಮಾಡಿದತಪ್ಪುಗಳನ್ನು ಮನ್ನಿಸಿರೆಂದು ಮಾಣಿಕ ಪ್ರಭುಗಳ ಕರುಣೆ ಪಡೆದು ಅವರಿಗೆ ಶರಣಾಗತರಾದರು, ಪಾಪದ ಆ ರೂಪ ಅಪವಿತ್ರ ತಾಣ ಪವಿತ್ರ ಪುಣ್ಯಕ್ಷೇತ್ರವಾಯಿತು. ಈ ಕ್ಷೇತ್ರದ ಮಹಿಮೆ ಹೆಚ್ಚಿತು. ಬಸವಕಲ್ಯಾಣದ ಮಾಣಿಕಪ್ರಭುಗಳು ಇಲ್ಲಿಯೇ ಈ ಗಿರಿಯಲ್ಲಿ ವಾಡ ಮಾಡಿಕೊಂಡುಇರುವರು ಎಂಬ ಸುದ್ದಿ ನಾಡಿನ, ರಾಷ್ಟ್ರದ ಮೂಲೆ- ಮೂಲೆಗೆ ಪಸರಿಸಿತು. ದರ್ಶನಕ್ಕಾಗಿ ಬರುವ ಭಕ್ತರು ಸಾಗರೋಪಾದಿಯಲ್ಲಿ ಹರಿಯತೊಡಗಿತು.

ಬರುವ ಭಕ್ತಾದಿಗಳು ಸ್ವಯಂಪ್ರೇರಣೆಯಿಂದ ಮಹಾದೇವ ಮಂದಿರದ (ಸರ್ವೇಶ್ವರ) ಸುತ್ತ ಮುತ್ತಲಿನ ಸ್ಥಳವನ್ನು ಸ್ವಚ್ಛಗೊಳಿಸಿದರು. ಗುಡ್ಡದಲ್ಲಿ ವಾಸ ಮಾಡಿಕೊಂಡಿರಲು ಅನುಕೂಲವಾಗುವಂತೆ ರಸ್ತೆಗಳನ್ನು ಮಾಡಿದರು. ಗಿಡಗಂಟೆಗಳನ್ನು ಕಡಿದು ಹಾಕಿದರು. ಕುಳಿತು ಧ್ಯಾನ ಮಾಡಲು ಅನುಕೂಲವಾಗುವಂತೆ ಗುಡ್ಡದಲ್ಲಿ ಸ್ಥಳಾವಕಾಶ ಮಾಡಿದರು. ಇಂತಹ ಕಾಡಿನಲ್ಲಿ ಪುಣ್ಯಕ್ಷೆತ್ರವಾಯಿತು. ಇದಕ್ಕೆ ಮಾಣಿಕಗಿರಿ ಎಂದು ಕರೆದರು. ಹುಮನಾಬಾದದಿಂದ ನಾಯಬ, ಅಮೀನ ಇತ್ಯಾದಿ ಸರಕಾರಿ ಅಧಿಕಾರಿಗಳೂ ಕೂಡ ದರ್ಶನಾಕಾಂಕ್ಷಿಗಳಾಗಿ ಈ ಮಾಣಿಕ ಗಿರಿಪುಣ್ಯಕ್ಷೇತ್ರಕ್ಕೆ ಭಕ್ತರು ಬರತೊಡಗಿದರು. ಭಕ್ತಾದಿಗಳ ದರ್ಶನಾರ್ಥಿಗಳ ಸಂಖ್ಯೆ ಹೆಚ್ಚೆಚ್ಚಾದಂತೆ ಅಲ್ಲಿ ಪೂಜಾ ಸಾಮಗ್ರಿಗಳ ವಿವಿಧ ಅಂಗಡಿಗಳು ತೆರೆಯಲ್ಪಟ್ಟವು. ಹೂ ಕಾಯಿ ಕರ್ಪೂರದ ಅಂಗಡಿಗಳು ತಲೆಯೆತ್ತಿದ್ದವು. ನಿರ್ಜನವಾದ ಈ ಪ್ರದೇಶದಲ್ಲಿ ಹೋಗಲು ಜನ ಹೆದರುತ್ತಿದ್ದರು. ಆದರೆ ಈಗ ಪ್ರಭುಗಳ ಪಾದಸ್ಪರ್ಶದಿಂದ ಹಗಲು-ರಾತ್ರಿ ಕೂಡಿಯೇ ಭಕ್ತ ಜನರು ಯಾವದು ಹೆದರಿಕೆಯೂ ಇಲ್ಲದೇ ಬರ ಹೋಗತೊಡಗಿದರು. ಎಲ್ಲ ಕಡೆಗೂ ಮಾಣಿಕಪ್ರಭುಗಳ ಜಯ ಜಯಕಾರ ಮೊಳಗತೊಡಗಿತು.

ಮಾಣಿಕ ಪ್ರಭುಗಳ ದರ್ಶನ ಪಡೆಯಲು ದೂರ ದೂರದಿಂದ ಬರುತ್ತಿದ್ದ ಭಕ್ತ ಜನರು ಮೊದಲು ಅವರು ಹುಮನಾಬಾದದಲ್ಲಿ ವಸತಿ ಮಾಡಿಕೊಂಡು ಇರುತ್ತಿದ್ದರು. ಈಗ ಅಲ್ಲಿಯೇ ವಾಸ ಮಾಡತೊಡಗಿದರು. ಅವರಿಗಾಗಿ ಗುಡಿಸಲುಗಳು ನಿರ್ಮಾಣವಾದವು. ಹೀಗಾಗಿ ಬೆದರಿಕೆ ಎಂಬುದು ಇಲ್ಲದಂತಾಯಿತು. ಈ ಪುಣ್ಯಕ್ಷೇತ್ರಕ್ಕೆ ದರ್ಶನಕ್ಕೆ ಬರುವವರ ಸಂಖ್ಯೆ ಮಿತಿ ಮೀರಿ ಬೆಳೆಯತೊಡಗಿತು.

ಎಲ್ಲ ಕಡೆಗೂ ಚಾಕಿ ಮಾಡಿ ಶಾಂತಿ-ಸುವ್ಯವಸ್ಥೆ ಪಾಲನೆಗಾಗಿ, ರಕ್ಷಕ ದಳವನ್ನು ನೇಮಿಸಿದರು. ಪ್ರಭುಗಳ ಗುಡಿಸಲು ಮುಂದೆ ಪಹರೆ ಮಾಡಲು ಪದಸಿಂಗ ಎಂಬ ರಜಪುತನಿಗೆ ಒಪ್ಪಿಸಿದರು. ಅವನು ಅತ್ಯಂತ ನಿಷ್ಠೆಯಿಂದ ತನ್ನ ಜೀವನದಅಂತ್ಯದವರೆಗೂ ಈ ಕೆಲಸವನ್ನು ನಿರ್ವಹಿಸಿದನು. ಭಾಂಡಾರಖಾನಾ ಆರಂಭವಾಯಿತು. ಬಂದ ಭಕ್ತರಿಗೂ ಸೇವಕರಿಗೂ ಅಲ್ಲಿ ನಿತ್ಯವು ಅನ್ನದ ಪ್ರಸಾದ ದೊರೆಯುವ ಏರ್ಪಾಟುಮಾಡಿದರು. ಅನ್ನಪೂರ್ಣ ಗೃಹದಲ್ಲಿ ನಿತ್ಯವು ನೂರಾರು ಜನರು ಪ್ರಸಾದ ಸ್ವೀಕರಿಸುತ್ತಿದ್ದರು. ಈಗಲೂ

ಸಹ ದಿನಾಲು ದಾಸೋಹ ನಡೆಯುವುದು ಇಲ್ಲಿ ಬಂದ ಭಕ್ತರು ಎಲ್ಲರೂ ಇಲ್ಲಿ ಪ್ರಸಾದ ಸ್ವೀಕರಿಸಿಯೇ ಹೋಗುತ್ತಾರೆ. ಇಲ್ಲಿ ಪ್ರಸಾದದಲ್ಲಿ ಒಂದು ವಿಶಿಷ್ಟತೆ ಒಳಗೊಂಡಿದೆ ಅಂತೆ. ಆದ್ದರಿಂದ ಬಂದವರು ತಪ್ಪದೇ ಪ್ರಸಾದ ಸ್ವೀಕರಿಸಿಯೇ ಹೋಗುತ್ತಾರೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗುಜರಾತ್ ಹಾಗೂ ಉತ್ತರ ಹಿಂದುಸ್ತಾನದಿಂದಲೂಜ ಭಕ್ತರು ಬರತೊಡಗಿದರು. ಎಲ್ಲಾ ಜನಾಂಗದವರೂ ಈ ಪುಣ್ಯ ಕ್ಷೇತ್ರಕ್ಕೆ ದರ್ಶನಕ್ಕೆ ಬರುತ್ತಾರೆ. ಈಗಲೂ ಈ ಸಮಾಧಿಗೆ ನಡೆದುಕೊಳ್ಳುತ್ತಿರುವುದ ರಾಷ್ಟ್ರೀಯ ಭಾವೈಕ್ಯತೆಗೆ ನಿದರ್ಶನವಾಗಿರುತ್ತದೆ.

ನಾಗನಾಥ-೧೨

ಕಾಯಕಶೀಲರಾದ ಜನರಲ್ಲಿ ಸಹಜವಾಗಿಯೇ ಭಕ್ತಿ-ಶ್ರದ್ಧೆಗಳ ಮನೆಮಾಡುತ್ತವೆ. ಭಕ್ತಿಯ ಮೂಲಕವಾಗಿಯೇ ಮಾನವನು ದೇವರನ್ನು ಸೃಷ್ಟಿಸಿರುವುದು. ಪ್ರಕೃತಿಯಲ್ಲಿಯೂ ಒಂದು ಆಗೋಚರ ಶಕ್ತಿ ಇರುವುದನ್ನು ಗುರುತಿಸಿದ ಮಾನವ ಅದಕ್ಕೆ ಶರಣಾಗತನಾಗಿ ಬದುಕುವುದನ್ನು ಕಲಿತನು. ಹಾಗೆಯೇ ಪುಣ್ಯಕ್ಷೇತ್ರಗಳ ಕಲ್ಪನೆ ತುಂಬಾ ವಿಶಾಲ ಅರ್ಥವ್ಯಾಪ್ತಿಯನ್ನು ಹೊಂದಿದೆ. ಭಕ್ತರು ದೇವರಲ್ಲಿಗೆ ಹೋಗುವುದೆಂದರೆ ಪಾವನವಾಗುವುದು ಎಂದರ್ಥ. ದೇವರು ಕರುಣಾಮಯ ಯಾದುದರಿಂದಲೇ ಅವನಲ್ಲಿಗೆ ಹೋಗುವ ಭಕ್ತರಿಗೆ ಸದಾಕಾಲ ಶುಭವನ್ನು ಮಂಗಳ ಸೌಖ್ಯವನ್ನು ಸನ್ಮಂಗಲವನ್ನುಂಟು ಮಾಡುತ್ತಾನೆ ಎಂಬ ನಂಬಿಕೆ ಇದೆ. ಈ ನಂಬಿಕೆಗೆ ಸಾಕ್ಷಿಯಾಗಿ ನಿಲ್ಲುವ ಪುಣ್ಯಕ್ಷೇತ್ರ ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ಗ್ರಾಮದಲ್ಲಿ ಶ್ರೀ ಸಂಗಮನಾಥ ಪುಣ್ಯಕ್ಷೇತ್ರವಿದೆ. ಇದು ಊರಿನಿಂದ ಸುಮಾರು ೨ ಕಿ.ಮೀ. ದೂರದಲ್ಲಿದೆ. ಈ ಪುಣ್ಯಕ್ಷೇತ್ರವು ಹಳ್ಳಿಖೇಡದಿಂದ ಚಳಕಾಪುರಕ್ಕೆ ಹೋಗುವ ಮುಖ್ಯ ರಸ್ತೆಗೆ ಹತ್ತಿಕೊಂಡಿದೆ. ಬಯಲು ಪ್ರದೇಶವಾದ ಹೊಲಗದ್ದೆಗಳ ಮಧ್ಯೆದಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ. ದೇವರು ಯಾವ ಸ್ವರೂಪದಲ್ಲಿ ಭೂಮಿಯ ಮೇಲೆ ಇರುತ್ತಾನೆ ಎಂಬುದು ಒಂದು ಆಶ್ಚರ್ಯದ ಸಂಗತಿ ಇಲ್ಲ. ಭಕ್ತರು ಪ್ರಕೃತಿ ಮತ್ತು ಪ್ರಾಣಿಗಳಲ್ಲಿ ಆಗೋಚರ ಶಕ್ತಿ ಇರುವುದನ್ನು ಗುರುತಿಸಲು ಈ ಕ್ಷೇತ್ರ ಸಾಕ್ಷಿಯಾಗಿದೆ. ಮತ್ತು ಈ ಕ್ಷೇತ್ರವು ಎಷ್ಟು ಭಕ್ತರಿಗೆ ಪ್ರತ್ಯಕ್ಷವಾಗಿ ದರ್ಶನ ಕೊಡುವುದರ ಮೂಲಕ ಈ ಪುಣ್ಯಕ್ಷೇತ್ರವಾಗಿದೆ. ಹಾಗೆಯೇ ಭಕ್ತರು ತಮ್ಮ ಎಂತಹ ಕಷ್ಟಗಳು ಇದ್ದರೂ ಅವುಗಳ ಹರಕೆಯ ಮಾಡುವುದರ ಮೂಲಕ ಅವುಗಳನ್ನು ಪೂರ್ತಿ ಮಾಡುವುದರಲ್ಲಿ ತುಂಬಾ ಪ್ರಸಿದ್ಧಿಯಾಗಿ ಎಲ್ಲಕ್ಕಿಂತ ಮುಖ್ಯವಾಗಿ ಸಂತಾನ ಭಾಗ್ಯ ಕೊಡುವುದರಲ್ಲಿ ಇಡೀ ನಾಡಿನಲ್ಲಿ ಪ್ರಸಿದ್ಧಿ ಹೊಂದಿದ ಕ್ಷೇತ್ರ ಹಾಗೆಯೇ ಇವುಗಳಿಗೆ ಭಕ್ತರ ಮೂಲಕ ಸಾಕ್ಷಿ ಆಧಾರಗಳು ನೋಡಬಹುದು.

ಮತ್ತೊಂದು ವಿಷಯ ಇಲ್ಲಿ ಬಂದವರು ತಪ್ಪು ಮಾಡಿದವರು ಅವರಿಗೆ ಕಷ್ಟ ಬಂದೇ ಬರುತ್ತದೆ ಎಂಬುದು ಇಲ್ಲಿನ ಬಲವಾದ ನಂಬಿಕೆ. ಈ ಸ್ಥಳದ ಮಹಿಮೆ ತುಂಬಾ ವಿಶಿಷ್ಟವಾಗಿದೆ. ಇಲ್ಲಿ ನಡೆಯುವ ಘಟನೆಗಳು ಸತ್ಯಕ್ಕೆ ಹತ್ತಿರವಾದಂತಹವುಗಳು. ಮತ್ತು ಪಾಪ ಪುಣ್ಯವನ್ನು ಎಂಬುದು ಈ

ಕ್ಷೇತ್ರದಲ್ಲಿ ಕಾಣಬಹುದು. ಹಾಗೆಯೇ ಈ ಪುಣ್ಯಕ್ಷೇತ್ರವು ಬೇಡಿದ ಅಥವಾ ಹರಕೆ ಹೊತ್ತಿ ಬೇಡಿಕೊಂಡ ಇಷ್ಟಾರ್ಥಗಳು ಪೂರ್ಣಗೊಳ್ಳುವುದು ಸತ್ಯ. ಆದರೆ ಬೇಡಿಕೊಂಡ ಹರಕೆ ಮಾತ್ರ ಅದು ತೀರಸಲೇಬೇಕು. ಏಕೆಂದರೆ, ಇಲ್ಲಿನ ದೇವರು ಅವರಿಗೆ ಸಾಕ್ಷಾತ್ ಪ್ರತ್ಯಕ್ಷವಾಗಿ ಬಂದು ಕಷ್ಟಕೊಡುವುದಂತು ಖಚಿತವಾಗಿದೆ.

ಇದಕ್ಕೆ ನಾವು ಇಲ್ಲಿ ಅನೇಕ ಆಧಾರಗಳು ನೋಡಬಹುದು. ಇವುಗಳೆಲ್ಲ ನೋಡಿದಾಗ ಈ ಕ್ಷೇತ್ರ ಒಂದು ಪವಿತ್ರ ಪುಣ್ಯಕ್ಷೇತ್ರವೆನ್ನಬಹುದು. ಏಕೆಂದರೆ ಒಂದು ಪುಣ್ಯಕ್ಷೇತ್ರವಾಗಬೇಕಾದರೆ ಅಲ್ಲಿನ ದೇವರ ಬಗ್ಗೆ ಭಕ್ತರಲ್ಲಿ ನಂಬಿಕೆ ಬರಬೇಕು ಹಾಗೆಯೇ ನಡೆದ ಘಟನೆಗಳು ಮಹಿಮೆಗಳಿಗೆ ಆಧಾರಗಳು ಇರಬೇಕು. ಆಗ ಮಾತ್ರ ಆ ಕ್ಷೇತ್ರ ಪುಣ್ಯಕ್ಷೇತ್ರವೆನ್ನಿಸುವುದು. ಈ ಪುಣ್ಯಕ್ಷೇತ್ರಗಳಲ್ಲಿ ಎಲ್ಲವು ಕಾಣಬಹುದು. ಇಲ್ಲಿಗೆ ಭಕ್ತರ ಮಹಾಪೂರವೇ ಹರಿದು ಬರುವುದನ್ನು ಕಂಡಾಗ ನಿಜಕ್ಕೂ ಇದೊಂದು ಪುಣ್ಯ ಕ್ಷೇತ್ರವೆಂದು ಹೇಳಬಹುದು. ಇಲ್ಲಿಗೆ ಬರುವ ಭಕ್ತರುತಮ್ಮ ಇಷ್ಟಾರ್ಥ ಸಿದ್ಧಿಯನ್ನು ಪಡೆಯುವುದಕ್ಕಾಗಿ ಮತ್ತು ಕೆಲವರು ತಾವು ಈಗಾಗಲೇ ಹೊತ್ತಹರಕೆಗಳನ್ನು ತೀರಿಸಲು ಇಲ್ಲಿಗೆ ಬರುವುದುಂಟು. ಈ ಪುಣ್ಯ ಕ್ಷೇತ್ರದಲ್ಲಿನ ದೇವರಾದ ನಾಗನಾಥನೆಂದರೆ ಶಿವನ ಸಹಚರನಾಗಿರುವ ಆದಿಶೇಷನೆಂದೇ ಇಲ್ಲಿ ಹೇಳಲಾಗಿದೆ. ಶಿವನ ಕೊರಳಲ್ಲಿ ಶೋಭಾಯಮನವಾಗಿ ಕಾಣುವ ಆದಿಶೇಷ ಈ ಜತ್ತನ್ನೇ ಹೊತ್ತು ನಿಂತಿರುವ ಆದಿಶೇಷನೆಂಬ ನಂಬಿಕೆ ನಮ್ಮ ಜನಮನದಲ್ಲಿದೆ. ಹೀಗೆ ಇಡೀ ಬ್ರಹ್ಮಾಂಡವನ್ನೇ ತನ್ನ ತಲೆಯ ಮೇಲೆ ಹೊತ್ತು ನಿಂತಿರುವ ಆದಿಶೇಷನನ್ನು ಸ್ತುತಿಸುವುದು ಭಜಿಸುವುದು ಭಕ್ತರಪರಮ ಕರ್ತವ್ಯ ಹೌದು, ಅಂಥ ಮಹಿಮಾ ಪುರುಷನ ಕುರಿತು ಈ ಒಂದು ಸ್ಥಳದಲ್ಲಿ ದೇವಾಲಯ ನಿರ್ಮಾಣವಾಗಿರುವುದು ಸ್ತುತ್ಯಾರ್ಹವಾದ ಕಾರ್ಯವಾಗಿದೆ.

ನಾಗನಾಥ ದೇವರ ಕುರಿತು ಹಲವಾರು ನಂಬಿಕೆಗಳು ಚಾಲ್ತಿಯಲ್ಲಿವೆ. ಅವುಗಳನ್ನೆಲ್ಲಾ ಇಲ್ಲಿನ ಜನ ಪಾಲಿಸುತ್ತಾ ಬಂದಿದ್ದಾರೆ. ತಮ್ಮ ಸುತ್ತ ಮುತ್ತಲೂ ವಾಸಿಸುತ್ತಿರುವ ಹಾವುಗಳನ್ನೆಲ್ಲಾ ಇಲ್ಲಿಯಜನರು ನಾಗನಾಥನೆಂದೇ (ದೇವರು) ಬಗೆಯುತ್ತಾರೆ. ನಾಗನಾಥ ದೇವರೆಂದರೆ ಬೇರೆ ಯಾರೂ ಆಗಿರದೇ ಜೀವಂತ ಹಾವುಗಳನ್ನೇ ಇವರು ನಾಗನಾಥ ದೇವರ ಸ್ವರೂಪದಲ್ಲಿ ಕಾಣುತ್ತಾರೆ. ಇಲ್ಲಿಯಜನರು ಹಾವುಗಳನ್ನು ವಿಷಕಾರಿ ಎಂದು

ಹೊಡೆದುಹಾಕದೇ (ಕೊಲ್ಲದೇ) ಹಾವುಗಳು ಎದುರಾದಾಗ ಅವುಗಳಿಗೆ ಕೈಮುಗಿದು "ನಾಗನಾಥ ನೀನು ದೂರ ಹೋಗಪ್ಪಾ ನಿನಗೆ ಹರಕೆ ಒಪ್ಪಿಸುತ್ತೇವೆ. ನಾವು ನಿನ್ನಲ್ಲಿಗೆ ಬರುತ್ತೇವೆ" ಎಂದು ಮುಂತಾಗಿ ಬೇಡಿಕೊಳ್ಳುತ್ತಾರೆ. ಹೀಗೆ ಹೇಳಿದ ಕೂಡಲೇ ಹಾವುಗಳೂ ಯಾರಿಗೂ ಹಾನಿಮಾಡದೆ ನೇರವಾಗಿ ಅಲ್ಲಿಂದ ಹೊರಟು ಹೋಗುತ್ತವೆಂದು ಇಲ್ಲಿ ಹಲವಾರು ಭಕ್ತಾದಿಗಳು ಹೇಳುತ್ತಾರೆ. ಹಾವುಗಳು ಸುಮ್ಮನೆ ಯಾರನ್ನು ಕಚ್ಚುವುದಿಲ್ಲ. ಅವುಗಳಿಗೆ ತೊಂದರೆ ಕೊಟ್ಟದಾಗ ಮತ್ತು ಏನಾದರೂ ತಪ್ಪು ಮಾಡಿದವರಿಗೆ ಮಾತ್ರ ಹಾವುಗಳು ಕಚ್ಚುತ್ತವೆಂಬ ನಂಬಿಕೆಯೂ ಜನಮನದಲ್ಲಿದೆ. ವಾಸ್ತವದಲ್ಲಿ ಹಾವುಗಳು ಎದುರಾದಾಗ ಮನುಷ್ಯ ಭಯಭೀತನಾಗುವುದು ಸಹಜ. ಆದರೆ ಈ ಇಡೀ ಪ್ರದೇಶದ ಜನರೆಲ್ಲಾ ಹಾವುಗಳನ್ನು ಕಂಡು ಭಯಗೊಂಡರೂ ಅವರಲ್ಲಿ ಈ ಭಯದಜೊತೆಗೆ ಭಕ್ತಿಯು ಮನೆಮಾಡಿ ನಿಲ್ಲುತ್ತದೆ. ಹೀಗಾಗಿ ಇಲ್ಲಿನ ಬಹುಪಾಲು ಜನರು ತಮ್ಮ ಸಮೀಪದಲ್ಲಿರುವ ನಾಗನಾಥ ದೇವಾಲಯಕ್ಕೆ ಬಂದು ಹೋಗುವ ಮೂಲಕ ಹಾವುಗಳ ಕಾಟದಿಂದ ಮತ್ತು ನಾಗದೋಷವಿದ್ದವರು ಇಲ್ಲಿಗೆ ಬಂದು ಮುಕ್ತಿಯನ್ನು ಪಡೆಯುತ್ತಾರೆ.

ಈ ದೇವರಲ್ಲಿಗೆ ಬರುವ ಬಹುಪಾಲು ಜನರು ತಾವು ಹಾವುಗಳಿಂದ ಕಚ್ಚಿಸಿ (ಕಡಿಸಿ) ಕೊಂಡರು ತಮಗೆ ಯಾವ ಅಪಾಯವು ಆಗುವುದಿಲ್ಲವೆಂದು ನಂಬುತ್ತಾರೆ. ಅವರ ಬಲವಾದ ನಂಬಿಕೆಯೇ ಅವರನ್ನು ಬದುಕಿಸುವಲ್ಲಿ ಯಶಸ್ವಿಯಾಗುತ್ತದೆ. ವಾಸ್ತವದಲ್ಲಿ ನೂರಕ್ಕೆ ೯೦ ಪ್ರತಿಶತದಷ್ಟು ಹಾವುಗಳು ವಿಷಕಾರಿಯಲ್ಲವೆಂದು ವಿಜ್ಞಾನ ಲೋಕ ಇಂದು ದೃಢಪಡಿಸುವುದರಲ್ಲಿದೆ. ಈ ನೆಲೆಯಲ್ಲಿ ಹಾವುಗಳನ್ನು ನೋಡಿದ ಕೂಡಲೇ ಮನುಷ್ಯ ಭಯಭೀತನಾಗುವ ಮೂಲಕ ವಿಷಕಾರಿಯಿಲ್ಲದ ಹಾವುಗಳು ಸಾವನ್ನಪ್ಪುವ ಸಂದರ್ಭಗಳೇ ಹೆಚ್ಚಾಗಿರುತ್ತವೆ.

ಈ ಒಂದು ಕಾರಣಕ್ಕಾಗಿ ಈ ನಾಗನಾಥ ದೇವರನ್ನು ನಂಬುವಂಥ ಜನರು ಪ್ರಾಣಾಪಾಯದಿಂದ ಪಾರಾಗಿ ಸುಖಮಯ ಜೀವನವನ್ನು ನಡೆಸುತ್ತಿದ್ದಾರೆ. "ನಂಬಿ ಕರೆದರೆ ಓ ಎನ್ನನೇ ಶಿವ" ಎನ್ನುವ ಮಾತಿನಂತೆ ಇಲ್ಲಿನ ಜನರು ಶ್ರೀ ನಾಗನಾಥ ದೇವರ ಮೇಲೆ ಅತಿಯಾದ ನಂಬಿಕೆಯನ್ನಿಟ್ಟದ್ದು, ಆನಂದದ ಜೀವನವನ್ನು ಅನುಭವಿಸುತ್ತಲಿದ್ದಾರೆ. ಹೀಗಾಗಿ ಇಂಥ ದೇವರ ಅವಶ್ಯಕತೆ ನಮ್ಮೆಲ್ಲರಿಗೂ ಅತ್ಯಗತ್ಯವೆಂಬುವುದು ಹೇಳುವ

ಮೂಲಕ ಇಲ್ಲಿ ಜರುಗಿದ ಒಂದು ಹರಕೆಯ ಕಥೆಯನ್ನು ಬಿಚ್ಚಿಡಲು ಯತ್ನಿಸುವೆ.

ನಾಗನಾಥ ದೇವರಿಗೆ ಸೊಲಾಪುರದಿಂದ ಈ ಕ್ಷೇತ್ರಕ್ಕೆ ಬಂದಿದ್ದಳು. ಇವಳಿಗೆ ಮಕ್ಕಳಾದ ಕಾರಣ ಇವಳು ತನಗೆ ಮಕ್ಕಳ ಫಲಬೇಕೆಂದುಹರಕೆ ಹೊತ್ತು ಈ ರೀತಿ ದೇವರಲ್ಲಿ ಬೇಡಿಕೊಳ್ಳುತ್ತಾಳೆ. "ನನಗೆ ನೀನು ಮಕ್ಕಳ ಭಾಗ್ಯ ನೀಡಿದರೆ" ನಿನಗೆ ನಾನು ಕಣ್ಣಿಗೆ ಕಾಡಿಗೆಯನ್ನು ಹಚ್ಚಿ ನನ್ನ ಮೊಲೆಹಾಲನ್ನು ಉಣಿಸುತ್ತೆನೆ ಎಂದು ಬೇಡಿಕೊಳ್ಳುತ್ತಾಳೆ. ಈ ರೀತಿ ಬೇಡಿಕೊಂಡ ಹೆಣ್ಣು ಮಗಳಿಗೆ ಕೇವಲ ಒಂದೇ ವರ್ಷದಲ್ಲಿ ಗಂಡು ಮಗುವೊಂದು ಹೆರುತ್ತಾಳೆ. ಹುಟ್ಟಿದ ಮಗುವನ್ನು ಬೆಳೆಯುತ್ತಾಹೋಗುತ್ತಿದೆ. ಆದರೆ ಅವಳು ಹರಕೆ ಹೊತ್ತಿ ಮರೆತ್ತಿದ್ದಳು. ಆಗಾಗ ನಾಗನಾಥ ದೇವರು ಕಾಣಿಸಿಕೊಳ್ಳುವಾಗ ಅವಳು ಮಗುವನ್ನು "ಜಾವಳ ತೆಗೆಯಲೆಂದು ನಾಗನಾಥ ದೇವರಲ್ಲಿಗೆ ತೆಗೆದುಕೊಂಡು ಬರುತ್ತಾಳೆ. ತಾನು ಮಾಡಿದ ಹರಕೆಯಂತೆ ಹೆಣ್ಣು ಮಗಳು ನಾಗನಾಥನಲ್ಲಿಗೆ ಹೋಗಿ ಮೊಲೆಹಾಲು ಉಣ್ಣಿಸದೇ ಮತ್ತು ಕಣ್ಣಿಗೆ ಕಾಡಿಗೆ ಹಚ್ಚದೇ ತಾನು ಮಾಡಿದ ಹರಕೆಯಿಂದ ಜಾರಿಕೊಳ್ಳಲು ಪ್ರಯತ್ನಿಸುತ್ತಾಳೆ. ಇದೇನು ಜೀವಂತ ಹಾವಿನ ಮೂರ್ತಿಯೇ ಎಂದು ಬಗೆದು ಕೂಸಿನಜಾವಳ ಕಾರ್ಯಕ್ಕೆ ಅಣಿಯಾದಾಗ ನಾಗನಾಥನ ಮೂರ್ತಿಯಿಂದ ಜೀವಂತ ಹಾವೊಂದು ಎದ್ದು ಬರುವಂತೆ ಆಗ ಅದನ್ನು ಕಂಡ ಜನರು ಅಲ್ಲಿಂದ ದೂರಸರಿದಾಗ ತಾಯಿಯಾದವಳು ಕೂಡಾ ಕಂಡು ಮುಂದೆ ಬರದೇ ಕೂಸನ್ನು ಅಲ್ಲಿಯೇ ಬಿಟ್ಟು ದೂರ ಓಡಿಹೋದಳಂತೆ. ಆಗ ಕೂಸಿನಹತ್ತಿರ ಹಾವು ಬಂದು ಕೂಸಿನ ಸುತ್ತಾ ಮೂರು ಸುತ್ತು ಹಾಕಿ ಕೂಸಿನತಲೆಯ ಮೇಲೆ ತನ್ನ ಹೆಡೆಯಿಂದ ಹೊಡೆದು ಮಗುವನ್ನು ಸಾಯಿಸಿತಂತೆ ಆಗ ಆ ಮಗುವನ್ನು ಇದೇ ದೇವಾಲಯದ ಆವರಣದಲ್ಲಿಯೇ ಸಮಾಧಿ ಮಾಡಿದ್ದಾರೆ. ಅದಕ್ಕೆ ಮಗುವಿನ ಸಮಾಧಿ ಎಂದು ಕರೆಯುವ ವಾಡಿಕೆಯಿದೆ. ನಂತರ ಕೆಲವು ದಿನಗಳ ನಂತರ ಆ ಹರಕೆಹೊತ್ತ ಹೆಣ್ಣು ಮಗಳು ಕೂಡಾ ಇದೇ ದೇವಾಲಯದ ಹತ್ತಿರವೇ ಪ್ರಾಣಬಿಟ್ಟಾಗ ಅವಳನ್ನು ಕೂಡಾ ಇದೇ ದೇವಾಲಯದ ಆವರಣದಲ್ಲಿಯೇ ಸಮಾಧಿಗೈದರೆಂದು ಹೇಳುತ್ತಾರೆ. ಈ ಘಟನೆ ಕುರಿತು ಇಲ್ಲಿ ಪ್ರತಿಯೊಬ್ಬರು ಕೂಡಾ ಜನಪದ ಮಾತಿನಲ್ಲಿ ಜೀವಂತವಾಗಿದೆ. ಹಾಗೆಯೇ ಸಾಕ್ಷಿ ಆಧಾರಗಳು ಕೂಡಾ ಕೊಡುತ್ತಾರೆ. ಈ ಘಟನೆಯಿಂದ ಇದು ಒಂದು ಸತ್ಯವಂತ ದೇವರ ಪುಣ್ಯಸ್ಥಳವೆನ್ನುತ್ತಾರೆ. ಈ

ಘಟನೆಯಿಂದ ಇಡೀ ದೇಶದಲ್ಲಿ ತುಂಬಾ ಪ್ರಸಿದ್ಧಿ ಪಡೆದ ಪುಣ್ಯ ಕ್ಷೇತ್ರವಾಗಿದೆ. ಹಲವು ರಾಜ್ಯಗಳಿಂದ ಜನರು ಪಾಪವನ್ನೇ ಕಷ್ಟಗಳನ್ನು ಹೊತ್ತುಕೊಂಡು ಬಂದು ಇಲ್ಲಿ ಪುಣ್ಯ ಮತ್ತು ಸನ್ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಹಾಗೆಯೇ ಇನ್ನೊಂದು ಘಟನೆ ನೋಡಿದಾಗ ಇದು ವಿಜ್ಞಾನದ ದೃಷ್ಟಿಯಿಂದ ಇದು ಸತ್ಯವಾಗಿದೆ. ಈ ಕ್ಷೇತ್ರಕ್ಕೆ ಮತ್ತೊಬ್ಬ ಭಕ್ತರು ಇಲ್ಲಿ ಸಂತಾನಭಾಗ್ಯ ನೀಡಬೇಕೆಂದು ಭಕ್ತನು ಬೇಡಿಕೊಂಡಾಗ ಆ ದಂಪತಿಗಳಿಗೆ ನಾಗನಾಥ ದೇವರು ನೀವು ೪೧ ದಿವಸ ನಾಗದೇವರ ಪೂಜೆ ಮಾಡಿ ನಂತರ ನಿಮಗೆ ಮಕ್ಕಳ ಭಾಗ್ಯ ಸಿಗುತ್ತದೆ ಎಂದಾಗ ಈ ಮಾತನ್ನು ವಿಜ್ಞಾನದ ದೃಷ್ಟಿಯಿಂದ ನೋಡಿದಾಗ ಹೆಣ್ಣು ಮಕ್ಕಳಿಗೆ ೨೦ ದಿನಗಳಿಗೆ ಒಮ್ಮೆ ಋತಿಮತಿಯಾಗುವಳು. ಇದರಿಂದ ಋತುಮತಿಯಾದ ೧೦ ದಿನಗಳ ನಂತರ ಸಂತಾನ ಉತ್ಪತ್ತಿಯ ಸಮಯ ಇರುತ್ತದೆ. ಹೀಗಾಗಿ ಆ ದೇವರು ಹೇಳಿದ ಮಾತು ವಿಜ್ಞಾನದ ದೃಷ್ಟಿಯಿಂದ ಈ ಪ್ರಜೆ ಹೇಳಿದ ಮಾತು ಸರಿಯಾಗಿದೆ ಎಂದು ಈ ಕ್ಷೆತ್ರಕ್ಕೆ ಕ್ಷೇತ್ರಕಾರ್ಯಕ್ಕೆ ಹೋದಾಗ ಅಲ್ಲಿ ಬಂದ ಭಕ್ತರ ಅಭಿಪ್ರಾಯವಾಗಿದೆ. ನಂತರ ಆ ದಂಪತಿಗಳು ಪೂಜೆ ಮುಗಿಸಿ ಬಂದಾಗ ಅವಳಿಗೆಈವಾಗ ನಿಮ್ಮ ಸಂತಾನ ವ್ಯಾಪ್ತಿಯಾಗುವುದು ಎಂದಾಗ ಅವರಿಗೆ ಮಗು ಆಯಿತು ಎಂದು ಇಲ್ಲಿ ಪೂಜಾರಿಗಳು ಭಕ್ತರು ಹೇಳುತ್ತಾರೆ.

ಹೀಗೆ ವಾಸ್ತವದಲ್ಲಿ ಈ ದೇವರ ಮಹಿಮೆಯನ್ನು ಕುರಿತು ಹೇಳುತ್ತಾರೆ. ಇಲ್ಲಿ ಭಕ್ತರು ಮತ್ತು ಪೂಜಾರಿಗಳು ಇದೇನೆಯಿದ್ದರೂ ಹಾವುಗಳ ಬಗ್ಗೆ ಅಧೈರ್ಯವನ್ನು ತಾಳದೇ ಪ್ರಕೃತಿಯ ಒಂದಂಗವಾದ ವಿಷಜಂತುಗಳನ್ನು ಕೊಲ್ಲಲಾರದೇ ಬದುಕುವ ಕಲೆ ತುಂಬಾ ಅದ್ಭುತವಾದುದೆಂದೆ ಹೇಳಬೇಕು. ಒಂದೆಡೆ ಪ್ರಾಣಿ ಸಂಕಲವನ್ನು ನಾಶಗೊಳಿಸದೇ ಪರಿಸರದ ಅಸಮತೊಲನವನ್ನು ಕಾಪಾಡಿಕೊಂಡು ಬರುವ ಇಲ್ಲಿಯ ಭಕ್ತರು ನಿಜಕ್ಕೂ ಸ್ತುತ್ಯಾರ್ಹರೆಂದು ಹೇಳುವ ಮೂಲಕ ಶ್ರೀ ನಾಗನಾಥ ದೇವಾಲಯ ಸಾವಿರ – ಸಾವಿರ ಜೀವಗಳಿಗೆ ಸಂಜೀವಿನಿಯಾಗಿ ಬದುಕಿನ ಆಶಾಕಿರಣವಾಗಿ ಕಾರ್ಯನಿರ್ವಹಿಸುವುದನ್ನು ಕಂಡಾಗ ಇದೊಂದು ಪುಣ್ಯ ಕ್ಷೇತ್ರವೆಂದು, ಅಭಯ ಹಸ್ತ ನೀಡುವ ಕರುಣಾ ಮೂರ್ತಿಯ ದೇಗುಲವೆಂದೇ ಹೇಳಬೇಕು.

ಈ ದೇವರ ಕುರಿತು ಪ್ರತಿ ವರ್ಷವು ಜಾತ್ರೆ ರಥೋತ್ಸವಗಳು ಜರುಗುತ್ತವೆ. ಕಾರ್ತಿಕ ಮಾಸದ ಶುಕ್ಲಪಕ್ಷ ಇಲ್ಲವೇ ಕೆಲವೊಮ್ಮೆ ಕೃಷ್ಣ

[illegible]

ಪಕ್ಷದಲ್ಲಿ ಬರುವ ಶನಿವಾರದಂದು ಈ ದೇವರ ಜಾತ್ರೆ ಜರುಗುತ್ತಿದೆ. ಈ ಜಾತ್ರೆಯ ಒಂದು ವಿಶೇಷತೆಯೆಂದರೆ ಚಾಂಗಲೇರಾದ ಶ್ರೀ ವೀರಭದ್ರೇಶ್ವರ ದೇವರ ಜಾತ್ರೆಯಾದ ನಂತರದ ಶನಿವಾರವೇ ಇಲ್ಲಿನ ಜಾತ್ರೆ ಜರುಗುತ್ತದೆ. ಇದಕ್ಕೆ ಕಾರಣವು ಇಲ್ಲದಿಲ್ಲವೆನಿಸುತ್ತದೆ. ಈಗಾಗಲೇ ನಾವು ತಿಳಿದಿರುವಂತೆ ವೀರಭದ್ರ ಶಿವನ ಮಗನೆಂದು ಶಿವನ ಆಜ್ಞೆಯ ಮೇರೆಗೆ ಭೂಲೋಕಕ್ಕೆ ಬರುವ ವೀರಭದ್ರ ವಿಷಜಂತು (ಹಾವು, ಚೇಳು ಇತ್ಯಾದಿ) ಗಳೆಲ್ಲಾ ತನ್ನ ಜವಾಬ್ದಾರಿ ಎಂದು ಶಿವನಿಗೆ (ತಂದೆಗೆ) ಹೇಳಿದಾಗಲೇ ಹೇಳುತ್ತವೆ. ಅಂತೆಯೇಇಲ್ಲಿ ನಡೆಯುವ ಜಾತ್ರೆಯಲ್ಲಿ ವೀರಭದ್ರನ ಜಾತ್ರೆಯ ನಂತರವೇ ನಾಗನಾಥನ ಜಾತ್ರೆ ನಡೆಯುವಲ್ಲಿ ಈ ಒಂದು ಪುರಾಣದ ಅರ್ಥಕಲ್ಪಿಸಲಾಗಿದೆ ಎಂದು ಹೇಳಲು ಸಾಧ್ಯವಿದೆ. ಒಟ್ಟಿನಲ್ಲಿ ಇಲ್ಲಿನ ಜಾತ್ರೆಯ ಚಾಂಗಲೇರಾ ವೀರಭದ್ರನ ಜಾತ್ರೆಯ ನಂತರದ ಶನಿವಾರದಂದು ಜರುಗುತ್ತದೆ. ಈ ಜಾತ್ರೆಗೆ ಸಾವಿರಾರು ಭಕ್ತರು ದೂರದಿಂದ ಭಕ್ತರು ಈ ಜಾತ್ರೆಗೆ ಬಂದು ದರ್ಶನ ಪಡೆಯುತ್ತಾರೆ. ಜಾತ್ರೆಯೂ ಕೂಡಾ ವಿಶಿಷ್ಟವಾದ ರೀತಿಯಿಂದ ಕೂಡಿರುತ್ತದೆ. ಮತ್ತು ಈ ದೇವರ ಹರಕೆಗಳಲ್ಲಿನ ವಿಶೇಷತೆಯೆಂದರೆ ಬಡವರು ಬಲ್ಲಿದವರೆನ್ನದೇ – ಜಾತ್ರೆ ಸಂದರ್ಭದಲ್ಲಿ ತಮಗೆ ಕೈಲಾದ ಮಟ್ಟಿಗೆ ಬೆಳ್ಳಿಯ ಬಂಗಾರದ ತಾಮ್ರದ ಮುಂತಾದ ಲೋಹಗಳಿಂದ ಮಾಡಲಾಗಿರುವ ನಾಗನಾಥನ (ಹಾವಿನ) ಮೂರ್ತಿಯನ್ನು ದೇವರಿಗೆ ಅರ್ಪಿಸುವ ರೂಢಿಯಿದೆ. ತಮಗೆ ಹಾವು ಮುಂತಾದ ವಿಷಕಾರಿ ಜಂತುಗಳು ಮುಟ್ಟಿದರೆ (ಕಚ್ಚಿದರೆ) ಮತ್ತು ಚರ್ಮ ರೋಗಗಳಿಗೆ ಅದರಲ್ಲಿ ವಿಶೇಷವಾಗಿ ಹೊಟ್ಟೆಭಾಗಕ್ಕೆ ಮಾತ್ರವಾಗುವ "ಸುತನಾಗರ"ವೆಂದು ಆಗುತ್ತದೆ ಅಂತೆ ಇದೆಲ್ಲಾ ಆದಾಗ ಪುಣ್ಯ ಕ್ಷೇತ್ರಕ್ಕೆ ಬಂದು ಇಲ್ಲಿನ ಬಾವಿಯ ನೀರಿನಿಂದ ಸ್ನಾನಮಾಡಿ ದೇವರಲ್ಲಿ ಹರಕೆ ಹೊರುತ್ತಾರೆ. ಗುಣಮುಖವಾದಾಗ ಭಕ್ತರೆಲ್ಲಾ ಜಾತ್ರೆಯ ಸಂದರ್ಭದಲ್ಲಿ ಹರಕೆಯನ್ನು ಇಂಥ ಮೂರ್ತಿಗಳ ಮೂಲಕ ಸಲ್ಲಿಸುವ ಪದ್ಧತಿ ಇದೆ. ಹಾಗೆಯೆ ಇಲ್ಲಿಯ ಬಾವಿ ಕುರಿತು ಒಂದು ಹಿನ್ನೆಲೆ ಅಥವಾ ಪವಾಡ ನಡೆದ ಘಟನೆ ನೋಡಬಹುದು. ಇಲ್ಲಿ ಬಾವಿ ನಿರ್ಮಾಣ ಮಾಡುವಾಗ ತುಂಬಾ ಕಲ್ಲುಗಳು ತಂದು ಹಾಕಿದರಂತೆ ಆಗ ಅಲ್ಲಿ ಬಂದ ವ್ಯಕ್ತಿಯು ಅಲ್ಲಿನ ಕೆಲವು ಕಲ್ಲುಗಳು ಗಾಡಿಯಲ್ಲಿ ಹಾಕಿಕೊಂಡು ಹೋಗುವಾಗ ಈ ಪುಣ್ಯಕ್ಷೇತ್ರದ ಇನ್ನೂ ಹೊರಗು ಹೋಗಿರಲಿಲ್ಲ. ಅದರ ಆವರಣದಲ್ಲಿ ನಾಗರ ಹಾವು ಪ್ರತ್ಯಕ್ಷವಾಗಿ ಬಂದು ಕಲ್ಲುಗಳು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸುತ್ತದೆ. ಆತನು ಪುನ:

ಮರಳಿ ಕಲ್ಲುಗಳು ಅದೇ ಸ್ಥಳಕ್ಕೆ ಹಾಕಿದಾಗ ಮಾತ್ರ ಆ ಕ್ಷೇತ್ರದ ಹೊರಗಡೆ ಹೋಗಲು ಬಿಡಲಾಗಿದೆ. ಅಂತೆ ಹೀಗೆ ಇಲ್ಲಿ ಯಾವುದೇ ರೀತಿಯ ಕಳ್ಳತನವಾಗಲಿ, ವಂಚನೆಯಾಗಲಿ, ಪಾಪದ ಕೆಲಸ ಮಾಡಿದಾಗ ಮತ್ತು ಸುಳ್ಳು ಹೇಳುವಾಗ ಮತ್ತು ದೇವರ ಹತ್ತಿರ ತಪ್ಪಾಗಿ ನಡೆದುಕೊಂಡಾಗ ಕೂಡಾ ಈ ದೇವರು ಅವರಿಗೆ ತೊಂದರೆ ನೀಡಿ ಅವರಿಗೆ ಸನ್ಮಾರ್ಗವು ದಾರಿಸುತ್ತಾರೆ. ಈ ಪುಣ್ಯಕ್ಷೇತ್ರದಲ್ಲಿ.

ಈ ಹಿನ್ನೆಲೆ ಕುರಿತು ನೋಡಿದಾಗ ಇಲ್ಲಿ ಒಂದು ಸಾರಿ ಇಲ್ಲಿನ ಜಾತ್ರೆ ಕುರಿತು ಇಲ್ಲಿಗೆ ಬಂದ ತಹಸೀಲ್ದಾರ್ ಆಗಿದ ಅಧಿಕಾರಿ ಒಬ್ಬರು ಜಾತ್ರೆಯ ವಿರುದ್ಧವಾಗಿ ನಡೆದುಕೊಳ್ಳುವಾಗ ಆಗ ಈ ನಾಗನಾಥನು ನಾನಾ ರೀತಿಯಾಗಿ ಅವರಿಗೆ ಹಾವಿನ ರೂಪದಲ್ಲಿ ಬಂದು ತೊಂದರೆ ಕೊಡಲಾಗಿತ್ತು. ಅಂತೆ ಆಗ ಅಧಿಕಾರಿಗಳಿಗೆ ಯಾರು ಹೇಳಿದರಂತೆ ಆ ನಾಗನಾಥನಿಗೆ ಹೋಗಿ ನನ್ನಿಂದ ತಪ್ಪಾಗಿದೆ ಎಂದು ಏನಾದರೂ ಹರಿಕೆ ಹೊತ್ತಿಕೊಳ್ಳಿ ಆಗ ನಿಮ್ಮ ತೊಂದರೆ ಕೊಡುವುದನ್ನು ನಿಲ್ಲಿಸುತ್ತಾನೆ ಎಂದು ಹೇಳಿದಾಗ ಅಧಿಕಾರಿಗಳು ಇಲ್ಲಿಗೆ ಬಂದು ಹಾಗೆಯೇ ಮಾಡಿದಾಗ ಅವರ ಕಷ್ಟ ಬಗೆಹರಿತು. ಎಂದು ಇಲ್ಲಿ ಬರುವ ಬಕ್ತರು ಹೇಳುತ್ತಾರೆ. ಹೀಗೆ ಈ ಕ್ಷೇತ್ರದಲ್ಲಿ ತುಂಬಾ ಪವಾಡಗಳು ಮಹಿಮೆಗಳು ನೋಡಬಹುದು. ಇಲ್ಲಿಯ ಹೆಚ್ಚು ಹೆಚ್ಚು ಭಕ್ತರಿಗೆ ಹಾವಿನ ರೂಪದಲ್ಲಿ ನಾಗನಾಥ ದೇವರ ಪ್ರತ್ಯಕ್ಷ ಕಾಣಿಸುವುದು ತುಂಬಾ ಭಕ್ತರು ಹೇಳುತ್ತಾರೆ. ಒಂದು ಸಾರಿ ಒಬ್ಬ ಭಕ್ತರು ಭಜನೆಗೆ ಮಗನಿಗೆ ಕರೆದುಕೊಂಡು ಬಂದಿದ್ದರು. ಆದರೆ ಅವರು ಕೊನೆಗೆ ಮಂಗಳಾರತಿಯಾಗುವಾಗ ಅವಸರ ಮಾಡಿ ಅವರು ಮಗನನ್ನು ಕರೆದುಕೊಂಡು ಮನೆಗೆ ಮರಳುವಾಗ ದೇವಸ್ಥಾನದ ಈಚೆಗೆ ಕೂಡಾ ಬರಲಿಲ್ಲಾ. ಅಲ್ಲಿಯೇ ನಾಗನಾಥ ಬಂದು ಹೋಗಲು ಬಿಡಲಿಲ್ಲವಂತೆ ಆಗ ಮಾತ್ರ ಅವರು ತಪ್ಪಾಗಿದೆ ಎಂದು ಬೇಡಿಕೊಂಡಾಗ ಅದು ಮಾಯವಾಗಿ ಹೋಗಿತ್ತು. ಅಂತೆ ಈ ತರಹದ ಕ್ಷೇತ್ರದ ಕುರಿತು ಮಹಿಮೆ ನಮಗೆ ಹೆಚ್ಚಾಗಿ ಸಿಗುತ್ತವೆ. ಈ ಕ್ಷೇತ್ರದ ಮಹಿಮೆಯಿಂದ ಇಡೀ ನಮ್ಮ ಕರ್ನಾಟಕದಲ್ಲಿಯೇ ಇಂತಹ ಕ್ಷೇತ್ರವು ಕಂಡು ಬರುವುದು ತುಂಬಾ ವಿರಳ. ಹೀಗಾಗಿ ಇಂತಹ ಒಂದು ಪುಣ್ಯ ಕ್ಷೇತ್ರ ನಮ್ಮ ಬೀದರ ಜಿಲ್ಲೆಯಲ್ಲಿರುವುದು ನಮ್ಮೆಲ್ಲರ ಪುಣ್ಯವೆನ್ನಬಹುದು.

ಒಟ್ಟಿನಲ್ಲಿ ಈ ಒಂದು ಪುಣ್ಯಕ್ಷೇತ್ರ ಭಕ್ತರಲ್ಲಿ ಅಭಯಹಸ್ತ ನೀಡುವ ಕಾಯಕಲ್ಪವಾದ ದೇಗುಲವಾಗಿದೆ. ಇಂತಹ ವಿಶಿಷ್ಟತೆಯನ್ನು ಹೊತ್ತು ನಿಂತಿರುವ ದೇವಾಲಯ ಇದಾಗಿರುವುದರಿಂದ ಇದರ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಶಂಕರಲಿಂಗ-೧೩

ಸನ್ಮಾರ್ಗ ಸದಾಚಾರ, ಸದ್ಭಾವಗಳನ್ನು ಬೆಳೆಸುವ ಪುಣ್ಯ ಕ್ಷೇತ್ರಗಳಾಗಿ ಮಾರ್ಪಟ್ಟಿವೆ. ಪವಿತ್ರ ಭಾವನೆಯನ್ನು ಹುಟ್ಟಿಸುವಂತೆ ವಾತಾವರಣ ನಿರ್ಮಿಸಿಕೊಟ್ಟಿವೆ. ಹೀಗಾಗಿ ಪಾವಿತ್ರ್ಯ ಮತ್ತು ನಿರ್ಮಲ ಮನಸ್ಸನ್ನು ಸೃಷ್ಟಿ ಮಾಡುವ ದೇವಾಲಯಗಳೆಲ್ಲಾ ಪುಣ್ಯಕ್ಷೇತ್ರಗಳೆಂದು ಕರೆಯುತ್ತಾ ಬರಲಾಗಿದೆ.

ಈ ಎಲ್ಲಾ ಲಕ್ಷಣಗಳ ಆಗರದಂತಿರುವ ಪುಣ್ಯ ಕ್ಷೇತ್ರಗಳು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಘಾಟಬೋರಾಳ ಗ್ರಾಮವು ತಾಲೂಕಾ ಸ್ಥಳದಿಂದ ಸುಮಾರು ೨೦ ಮೈಲು ಅಂತರದಲ್ಲಿದೆ. ಊರಿನ ಉತ್ತರ ದಿಕ್ಕಿನಲ್ಲಿ ಶ್ರೀ ಶಂಕರಲಿಂಗ ಪುಣ್ಯಕ್ಷೇತ್ರವಿದ್ದು, ಊರಿನಿಂದ ಸುಮಾರು ಅರ್ಧ ಕಿಲೋ ಮೀಟರ್ ಅಂತರದಲ್ಲಿರುವ ಬೃಹತ್ ಆದ ಎರಡು ಬೆಟ್ಟಗಳ ಮಧ್ಯದಲ್ಲಿರುವ ಕಣಿವಿ ಪ್ರದೇಶವು ಈ ಪುಣ್ಯ ಕ್ಷೇತ್ರದ ಆವರಣ ಹೊಂದಿದೆ. ಬೆಟ್ಟದಲ್ಲಿ ಕೊರೆದು ಈ ದೇವಾಲಯ ನಿರ್ಮಾಣಗೊಂಡಿದೆ. ದೇವಾಲಯದ ಆ ಆವರಣದಲ್ಲಿ ಹಲವಾರು ಆಲದ ಮರಗಳು, ದಟ್ಟವಾದ ನೆರಳನ್ನು ಹಾಸು ನಿಂತಿವೆ. ಎರಡು ಬೆಟ್ಟಗಳ ಮಧ್ಯದಲ್ಲಿ ಕಣಿವೆಯನ್ನು ಸೀಳಿಕೊಂಡು ಹೋಗುವ ಪುಟ್ಟದಾರಿ ನೇರವಾಗಿ ದೇವಾಲಯದ ಮುಂಭಾಗಕ್ಕೆ ಕರೆದುಕೊಂಡು ಹೋಗುತ್ತದೆ. ಉತ್ತರಾಭಿಮುಖವಾಗಿರುವ ಶಂಕರಲಿಂಗ ದೇವಾಲಯದ ಎದುರಿನಲ್ಲಿ ಒಂದು ಬೃಹತ್ ಆದ ಕಲ್ಯಾಣಿ (ಗುಡ್ಡ) ಇದೆ. ಹಲವಾರು ಹೂವಿನ ತೆರನಾದ ಗಿಡ ಮರ, ಬಳ್ಳಿಗಳು ದೇವಾಲಯದ ಆವರಣವನ್ನು ಇನ್ನಷ್ಟು ಸುಂದರಗೊಳಿಸಿದೆ. ಇಂತಹ ಪ್ರಕೃತಿಯ ಮಡಿಲಿನ ಮಧ್ಯದಲ್ಲಿರುವ ಈ ಪುಣ್ಯ ಕ್ಷೇತ್ರ ಭಕ್ತರನ್ನು ಭಕ್ತಿ ರಸದಲ್ಲಿ ತೇಲುವಂತೆ ಮಾಡುವ ಶಕ್ತಿ ಪಡೆದಂತಿದೆ. ಒಂದೆಡೆ ಪ್ರಕೃತಿ ರಂಗಸ್ಥಳವಿದ್ದು, ಇನ್ನೊಂದೆಡೆ ಭಕ್ತರ ಆರಾಧ್ಯ ದೈವ ಶ್ರೀ ಶಂಕರಲಿಂಗನನ್ನು ಶಾಂತಿಯ ಪ್ರತೀಕವೆಂಬಂತೆ ಗುಹೆಯ ಒಳಗಡೆ ದೇವಾಲಯದಲ್ಲಿ ಪ್ರತಿಷ್ಠಾಪನೆ ಮಾಡಲಾಗಿದೆ.

ಶಂಕರಲಿಂಗ ಪುಣ್ಯಕ್ಷೇತ್ರ ಪ್ರವೇಶಿಸುವಾಗ ಪ್ರಥಮದಲ್ಲಿ ಕಾಣಿಸುವುದೇ ಗರುಢ ಗಂಭ ಈ ಕಂಬವು ದೇವರ ಎದುರಿನಲ್ಲಿರುವ ಬಸವಣ್ಣ ಮೂರ್ತಿಯ ಪಕ್ಕದಲ್ಲಿದೆ. ಈ ಮೊದಲು ದೀಪ ಹಚ್ಚಲು ಈ ಕಂಬವನ್ನು ಬಳಸುತ್ತಿದ್ದರಂತೆ. ಶಿವನ ಎದುರಿನಲ್ಲಿ ನಂದಿಯನ್ನು ಪ್ರತಿಷ್ಠಾಪಿಸುವಂತೆ ಇಲ್ಲಿಯೂ ಶಂಕರಲಿಂಗ ದೇವರ ಎದುರಿಗಿರುವ ವಿಶಾಲವಾದ ಪ್ರಾಂಗಣದಲ್ಲಿ ನಂದಿ ವಿಗ್ರಹವು

ದಕ್ಷಿಣಾಭಿಮುಖವಾಗಿ ಕಾಣಸಿಗುತ್ತದೆ. ಗುಡಿಯ ಬಾಗಿಲು ಪ್ರವೇಶವಾದ ಕೂಡಲೇ ನಮ್ಮನ್ನು ಹೊಸದೊಂದು ಅನುಭವ ಲೋಕಕ್ಕೆ ಕರೆದುಕೊಂಡು ಹೋಗುತ್ತದೆ. ಪುಣ್ಯಕ್ಷೇತ್ರ ಸಂಪೂರ್ಣವಾಗಿ ಗುಡ್ಡದಲ್ಲಿಯೇ ಕೊರೆದಿರುವುದರಿಂದ ಇಲ್ಲಿಯ ವಾತಾವರಣವು ಹವಾನಿಯಂತ್ರಣ ಕೊಠಡಿಯ ಅನುಭವ ನೀಡುತ್ತದೆ. ಬೇಸಿಗೆಯ ದಿನದಲ್ಲಂತೂ ಇಲ್ಲಿಯ ವಾತಾವರಣ ಇನ್ನೂ ನೂರ್ಮಡಿಗೊಂಡು ಭಕ್ತರನ್ನು ಶಾಂತಿಯ ನೆಲೆಬೀಡಿಗೆ ಕರೆದುಕೊಂಡು ಹೋಗುವಲ್ಲಿ ಯಾವ ಸಂಶಯವೂ ಇಲ್ಲ. ದೇವಾಲಯದ ಒಳಗಡೆ ಎದುರಿನ ಜಗುಲಿಯಲ್ಲಿ ಶಿವಲಿಂಗವಿದೆ ಇದುವೇ ಶಂಕರಲಿಂಗ. ಈ ಲಿಂಗದ ಎಡಗಡೆಯಲ್ಲಿ ಮತ್ತೊಂದು ಜಗುಲಿಯಿದ್ದು ಇದನ್ನು ಶಂಕರದಾಸಿಮಯ್ಯನ ಲಿಂಗವೆಂದು ಕರೆಯಲಾಗುತ್ತದೆ. ಈ ಎರಡು ಜಗುಲಿಗಳ ಸುತ್ತಲು ಓಡಾಡಲು ಸ್ಥಳಾವಕಾಶವಿದ್ದು, ಭಕ್ತರು ಇಲ್ಲಿಯ ದರ್ಶನ ಪಡೆದು ಒಂದಿಷ್ಟು ಕಾಲ ಕುಳಿತುಕೊಂಡೇ ಹೋಗುವ ಪರಿ ಇದೆ. ಅತ್ಯಂತ ಆನಂದ ನೀಡುವ ಮನಸ್ಸಿನ ಮುದ ನೀಡುವ ಹಿತವೆನಿಸುವ ಇಲ್ಲಿಯ ವಾತಾವರಣ ಲೌಕಿಕ ಬದುಕಿನ ಹಲವಾರು ಜಂಜಾಟಗಳಲ್ಲಿಯೂ ಮನಸ್ಸಿಗೆ ಶಾಂತಿಯನ್ನು ನೀಡುವ ಅವಿಸ್ಮರಣೀಯ ಸ್ಥಳಗಳಲ್ಲಿ ಇದು ಒಂದಾಗಿದೆ. ತಪ್ಪಾದ ಹವಾಮಾನದೊಂದಿಗೆ ಮನಸ್ಸನ್ನು ಹಗುರಗೊಳಿಸುವ ಮೂಲಕ ದೇವರ ಕುರಿತು ಭಕ್ತಿರಸ ಉಕ್ಕಿಬರಲು ಇಲ್ಲಿಯ ವಾತಾವರಣ ಸಹಕಾರ ಎನಿಸುತ್ತದೆ. ಗುಡಿಯ ಎದುರಿನಲ್ಲಿರುವ ಗುಂಡದ ಪಕ್ಕದಲ್ಲಿಯೇ ಹಲವಾರು ಬಿಲ್ವಪತ್ರೆಯ ವೃಕ್ಷಗಳಿವೆ. ಈ ಗಿಡಗಳ ಪಕ್ಕದಲ್ಲಿಯೇ ನೀರು ಹರಿಯುವ ಝುರಿಯೊಂದು ಕಾಣಸಿಗುತ್ತದೆ. ಮಳೆಗಾಲದ ಸಂದರ್ಭದಲ್ಲಂತು ಈ ಝುರಿ ಅತ್ಯಂತ ರಭಸವಾಗಿ ಹರಿದು ನೋಡುಗರ ಕಣ್ಮನ ಸೆಳೆಯುತ್ತದೆ. ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಇಂಥ ರಮಣೀಯ ಸ್ಥಳದಲ್ಲಿ ಶಂಕರಲಿಂಗ ಪುಣ್ಯ ಕ್ಷೇತ್ರವಿರುವುದನ್ನು ಕಾಣುತ್ತೇವೆ.

ಈ ಪುಣ್ಯಕ್ಷೇತ್ರ ಹೇಗೆ ನಿರ್ಮಾಣಗೊಂಡಿತ್ತೆನ್ನುವುದಕ್ಕೆ ಅಲ್ಲಿಯ ಪೂಜಾರಿಗಳು ನೀಡುವ ವಿವರ ತುಂಬಾ ಕುತೂಹಲಕರವಾದುದು. ಮತ್ತು ಸಂಶೋಧನಾತ್ಮಕ ನೆಲೆಯಡೆಗೆ ನಮ್ಮನ್ನು ಕರೆದುಕೊಂಡು ಹೋಗುವಂತದ್ದಾಗಿದೆ. ಒಂದು ಪುಣ್ಯ ಕ್ಷೇತ್ರವಾಗಬೇಕಾದರೆ ಅಲ್ಲಿಯ ದೇವರ ಬಗ್ಗೆ ಖಚಿತವಾದ ಕಥೆ, ಐತಿಹ್ಯ, ಪುರಾಣಗಳು ಹೊಂದಿದಾಗ ಮಾತ್ರ ಆ ಕ್ಷೇತ್ರದ ಬಗ್ಗೆ ಭಕ್ತರಿಗೆ ನಂಬಿಕೆ ವಿಶ್ವಾಸ ಬರುವುದು ಮತ್ತು ಚಾರಿತ್ರಿಕ

ಭೌಗೋಳಿಕ ಹಿನ್ನೆಲೆ ಒಳಗೊಂಡಿರಬೇಕು. ಆಗ ಮಾತ್ರ ಅದು ಪುಣ್ಯ ಕ್ಷೇತ್ರವೆನಿಸುವುದು. ಇವುಗಳ ಹಿನ್ನೆಲೆಯಲ್ಲಿ ಶಂಕರಲಿಂಗ ಪುಣ್ಯಕ್ಷೇತ್ರದ ಕೆಲವೊಂದು ಮೌಖಿಕ ಮಾಹಿತಿ ದೊರೆತಿವೆ. ಅವುಗಳನ್ನು ನಾನು ಈ ಪುಣ್ಯಕ್ಷೇತ್ರದ ಪೂಜಾರಿಗಳ, ಭಕ್ತರ ಮೇರೆಗೆ ಮೌಖಿಕವಾದ ಸಂದರ್ಶನವನ್ನು ನಾನು ಹಿನ್ನೆಲೆಯಾಗಿ ನೀಡಿದ್ದೇನೆ. ಈ ಪುಣ್ಯಕ್ಷೇತ್ರದ ನಿರ್ಮಾಣದ ಕುರಿತು ಹೇಳಲಾಗುವ ಕಥೆಯು ೧೨ ನೇ ಶತಮಾನದ ವಚನಚಳುವಳಿಯ ಸಂದರ್ಭಕ್ಕೆ ಕರೆದುಕೊಂಡು ಹೋಗುವಂಥದ್ದಾಗಿದೆ. ಈ ದೇವಾಲಯ ರಚನೆಯನ್ನು ಸುಮಾರು ಕ್ರಿ.ಶ. ೧೦೫೦ ರಿಂದ ೧೧೦೦ ಕಾಲದಲ್ಲಿ ಆಗಿರಬೇಕೆಂದು ಇಲ್ಲಿಯ ಪೂಜಾರಿಗಳು ಹೇಳುತ್ತಾರೆ. ಈ ದೇವರ ಬಹುಪಾಲು ಭಕ್ತರೆಲ್ಲ ಜೇಡರ (ಬಟ್ಟೆ ನೇಯುವ ಜನಾಂಗ) ಜನಾಂಗಕ್ಕೆ ಸೇರಿದವರಾಗಿದ್ದಾರೆ. ಬಟ್ಟೆ ನೇಯುವ ಕಾಯಕವನ್ನು ಹೊತ್ತಿರುವಂಥಹ ಈ ಜನರೇ ಇಲ್ಲಿನ ಬಹುಪಾಲು ಭಕ್ತರೆಂಬುವುದು ಗಮನಿಸಬೇಕು.

ಕಲ್ಯಾಣದಲ್ಲಿ ಒಬ್ಬರ ಜೇಡರ ದಾಸಿಮಯ್ಯ ಎನ್ನುವ ಶಿವಭಕ್ತ ಸುಮಾರು ೧೨ ವರ್ಷಗಳಿಂದಲೂ ಒಂದೇ ಶಲ್ಯವನ್ನು ನೇಯುತ್ತಿದ್ದನಂತೆ. ದಿನಾಲು ಒಂದೇ ಒಂದು ಎಳೆಯನ್ನು ತಪ್ಪದೇ ಹಾಕುತ್ತಾ (ನೂಲುತ್ತಾ) ದಾಸಿಮಯ್ಯ ಸತತವಾಗಿ ೧೨ ವರ್ಷಗಳಿಂದಲೂ ಒಂದೇ ಒಂದು ಶಲ್ಯವನ್ನು ನೇಯುತ್ತಾನೆ. ೧೨ ವರ್ಷಗಳ ನಂತರದಲ್ಲಿ ಆತನ ಮನೆತನದ ಪರಿಸ್ಥಿತಿ ತುಂಬಾ ಗಂಭೀರವಾಗಿತ್ತು. ಆ ಒಂದು ಕಾರಣಕ್ಕಾಗಿ ತಾನು ಅದುವರೆಗು ನೇಯಲಾದ ೧೨ ವರ್ಷದ ಶಲ್ಯವನ್ನು ಮಾರಾಟಕ್ಕೆ ಹಾಕುತ್ತಾನೆ. ಆದರೆ ಜನರಾರು ಅದಕ್ಕೆ ಯೋಗ್ಯವಾದ ಬೆಲೆಯನ್ನು ಕಟ್ಟುವುದಿಲ್ಲ. ಇದರಿಂದ ದಾಸಿಮಯ್ಯ ನಿರಾಸೆಹೊಂದಿ ತನ್ನ ಮತಿಯನ್ನು ಕಳೆದುಕೊಳ್ಳುತ್ತಾನೆ. ಮುಂದೆ ಅಲೆದಾಡುತ್ತಾ ಅಲೆದಾಡುತ್ತಾ ಬಂದ ದಾಸಿಮಯ್ಯ ಈಗಿರುವ ದೇವಾಲಯದ ಸ್ಥಳಕ್ಕೆ ಬಂದು ಕುಳಿತುಕೊಳ್ಳುತ್ತಾನೆ. ಅಲ್ಲಿಯೇ ತನ್ನ ದಣಿವನ್ನು ಆರಿಸಿಕೊಳ್ಳುತ್ತಾನೆ. ಹೀಗೆ ದಾಸಿಮಯ್ಯ ದಣಿವಾರಿಸಿಕೊಂಡು ಕುಳಿತಿರುವ ಸಮಯದಲ್ಲಿ ಶಿವನು ಒಬ್ಬ ನೂರು ವರ್ಷದ ವಯೋವೃದ್ಧನ ವೇಶದಲ್ಲಿ ದಾಸಿಮಯ್ಯನ ಹತ್ತಿರ ಬರುತ್ತಾನೆ. ಬಂದವನೇ ನೇರವಾಗಿ ತನಗೆ ವಿಪರಿತ ಚಳಿಯಾಗುತ್ತವೆ ನಿನ್ನಲ್ಲಿ ಏನಾದರೂ ವಸ್ತು ಇದ್ದರೆ ಕೊಡು ಎಂದು ಕೇಳುತ್ತಾನೆ. ವೃದ್ಧನ ಚಳಿಯ ಚಡಪಡಿಕೆಯನ್ನು ಕಂಡ ದಾಸಿಮಯ್ಯ ಹಿಂದು

ಮುಂದು ಗಮನಿಸದೇ ತನ್ನಲ್ಲಿರುವ ೧೨ ವರ್ಷಗಳಿಂದಲೂ ನೇಯ್ದುಕೊಂಡು ಬಂದಿರುವ ಶಲ್ಯ (ವಸ್ತ್ರ)ವನ್ನೇ ಕೊಟ್ಟುಬಿಡುತ್ತಾನೆ.

ದಾಸಿಮಯ್ಯನಿಂದ ವಸ್ತ್ರವನ್ನು ಪಡೆದಂಥ ವಯೋವೃದ್ಧ ಕೂಡಲೇ ಆ ವಸ್ತ್ರವನ್ನು ಹರಿದು ಎರಡು ತುಂಡನ್ನಾಗಿ ಮಾಡುತ್ತಾನೆ. ದಾಸಿಮಯ್ಯ ಈ ದೃಶ್ಯವನ್ನು ಕಣ್ಣಾರೆ ಕಂಡರೂ ವೃದ್ಧನಿಗೆ ಯಾವ ಮಾತನ್ನು ಆಡುವುದಿಲ್ಲ. ತಾನು ೧೨ ವರ್ಷದಿಂದಲೂ ನೇಯ್ದ ಶಲ್ಯವನ್ನು ತುಂಡಾಗಿ ಹರಿದರೂ ಯಾವ ಮಾತನ್ನು ಹೇಳದೇ ಮೌನವಾಗಿಯೇ ಇರುತ್ತಾನೆ. ದಾಸಿಮಯ್ಯ ಮೌನವಾಗಿರುವುದನ್ನು ಗಮನಿಸಿದ ವೃದ್ಧ ಮತ್ತೇ ಅವನನ್ನು ಕುರಿತು ಹೀಗೆ ನುಡಿಯುತ್ತಾನೆ. ನೀನು ನನಗೆ ಅರಿವೆಯನ್ನು ಕೊಟ್ಟೆ, ನಾನು ಅದನ್ನು ನಿನ್ನ ಎದುರಿನಲ್ಲಿಯೇ ಎರಡು ತುಂಡುಗಳನ್ನಾಗಿ ಮಾಡಿದೆ, ಇದರಿಂದ ನಿನಗೆ ನೋವಾಗಲಿಲ್ಲವೇ? ಎಂದು ಕೇಳುತ್ತಾನೆ. ಆಗ ದಾಸಿಮಯ್ಯನು ನಾನೊಬ್ಬ ದಾನಿಗೆ ನನ್ನಲ್ಲಿರುವುದನ್ನು ಕೊಟ್ಟೆ, ದಾನ ಕೊಟ್ಟ ವಸ್ತು ನನ್ನಿಂದ ಪರರಲ್ಲಿಗೆ ಹೋದಾಗ ಅದು ನನ್ನ ವಸ್ತು ಅಲ್ಲ. ಈಗ ಅದು ನಿನ್ನ ವಸ್ತು, ನೀನು ಅದನ್ನು ಏನು ಬೇಕಾದರೂ ಮಾಡಬಹುದು. ದಾನ ಕೊಡುವ ಯೋಗ್ಯತೆ ನನ್ನಲ್ಲಿರುವಾಗ ನಾನು ದಾನ ಕೊಟ್ಟೆ. ಆದರೆ ದಾನವನ್ನು ಸ್ವೀಕರಿಸಿದ ವ್ಯಕ್ತಿಯಾದ ನೀನು ಅದನ್ನು ಯೋಗ್ಯರೀತಿಯಲ್ಲಿ ಇಟ್ಟುಕೊಳ್ಳಬೇಕೆಂಬ ವಿಚಾರ ನಿನ್ನಲ್ಲಿರಬೇಕಾಗಿರುವಂಥದ್ದು. ದಾನವನ್ನು ಬಳಸಿಕೊಳ್ಳುವ ಯೋಗ್ಯತೆಯಲ್ಲವೂ ನಿನಗೆ ಬಿಟ್ಟಿದ್ದು. ನಾನು ಮಾತ್ರ ನನ್ನ ಕಾರ್ಯ ನಿರ್ವಹಿಸಿದೇನೆಂಬ ಭಾವ ನನ್ನಲಿದೆ ಎಂದು ಉತ್ತರಿಸಿದನು. ನಂತರ ವೃದ್ಧವೇಶದ ಶಿವನು ಒಂದು ತುಂಡನ್ನು ತನ್ನ ತಲೆಗೆ ಸುತ್ತಿಕೊಂಡ. ಇನ್ನೊಂದು ತನ್ನ ಲಂಗೋಟಿಯಾಗಿ ಸುತ್ತಿಕೊಳ್ಳುತ್ತಾನೆ. ಆಮೇಲೆ ವೃದ್ಧ (ಶಿವಶಂಕರ) ನೇರವಾಗಿ ಈಗಿರುವ ದೇವಾಲಯದ ಒಳಗಡೆ ಪ್ರವೇಶಿಸಿ ಗುಹೆಯನ್ನು ಹೊಕ್ಕನಂತೆ. ಅವನ ಹಿಂದೆಯೆ ದಾಸಿಮಯ್ಯನು ಬೆನ್ನುಹತ್ತಿ ಗುಡಿಯಲ್ಲಿರುವ ಇನ್ನೊಂದು ಗುಹೆಯನ್ನು ಹೊಕ್ಕನಂತೆ. ಹೀಗೆ ಶಿವ (ಶಂಕರ)ನು ಪ್ರಸನ್ನನಾಗಿ ಗುಹೆ ಸೇರಿ ಸ್ಥಳವನ್ನು ಶಂಕರಲಿಂಗ ಸ್ಥಳ ಪುಣ್ಯಕ್ಷೇತ್ರವೆಂದು ಕರೆಯುತ್ತಾರೆ. ಈ ಗುಹೆಗಳ ಸ್ಥಳೀಯ ಜನರು ಹೇಳುವ ಮಾತೆಂದರೆ ಗುಹೆಯಿಂದ ಒಂದು ಕುರಿ ಮರಿಯೊಂದನ್ನು ಓಡಿಸಿದಾಗ ಪೂರ್ವಕ್ಕೆ ಅದು ಬೀದರ ನಗರವನ್ನು ತಲುಪಿತಂತೆ. ಪಶ್ಚಿಮಕ್ಕೆ ಕಲ್ಯಾಣ ನಗರವನ್ನು ತಲುಪಿದೆ ಎಂದು ಹೇಳಲಾಗುತ್ತದೆ. ಆದರೆ ೨೧ ದಿನಗಳು ಮುಚ್ಚಲಾಗಿದೆ. ಏಕೆಂದರೆ ಹಲವಾರು

ವಿಷಕಾರಿಯಾದ ಜಂತುಗಳು ಆ ಗುಹೆಯಿಂದ ಬರುತ್ತಿದ್ದವೆಂದು ಅಲ್ಲಿಯ ಗುಡಿಯ ಪೂಜಾರಿಗಳ ಹೇಳಿಕೆಯಾಗಿದೆ. ಆದರೂ ದೇವಾಲಯ ಮಾತ್ರ ಸಂಪೂರ್ಣವಾಗಿ ಗುಹೆಯಲ್ಲಿಯೇ ನಿರ್ಮಾಣಗೊಂಡಿರುವುದೊಂದು ಇಲ್ಲಿಯ ವಿಶೇಷವಾಗಿದೆ.

ಪ್ರತಿ ವರ್ಷ ಭಾದ್ರಪದ ಮಾಸದ ಶುಕ್ಲಪಕ್ಷ ಪ್ರತಿಪದಿಯ ದಿವಸದಂದು ಜಾತ್ರೆ ಜರುಗುತ್ತದೆ. ಈ ಜಾತ್ರೆಗೆ ಯಾವುದೇ ಕುಲಜಾತಿಯನ್ನದೇ ಹಲವು ಜಾತಿಯ, ಪಂಥದ ಎಲ್ಲಾ ಜನರು ಒಟ್ಟಾಗಿ ಸೇರಿ ಜಾತ್ರೆ ನಡೆಸುತ್ತಾರೆ. ಜಾತ್ರೆಯಲ್ಲಿ ನಡೆಯುವ ಆಚರಣೆಗಳಲ್ಲಿ ಮುಖ್ಯವಾದವುಗಳೆಂದರೆ ಶಂಕರಲಿಂಗ ತಾಮ್ರದ ಮೂರ್ತಿಯನ್ನು ಜಾತ್ರೆಯ ದಿನದಂದೇ ಗುಡಿಯ ಪೂಜಾರಿಯ ಮನೆಯಿಂದ ಮೆರವಣಿಗೆ ಮೂಲಕ ತರಲಾಗುತ್ತದೆ. ಹೀಗೆ ತಂದ ಮೂರ್ತಿಯನ್ನು ಪೂಜಾರಿಗಳು ದೇವರ ಲಿಂಗದ ಮೇಲೆ ಪ್ರತಿಷ್ಠಾಪಿಸುತ್ತಾರೆ. ಮುಖ್ಯವಾಗಿ ಇಲ್ಲಿ ನಡೆಯುವ ಜಾತ್ರೆ ಎರಡು ದಿನಗಳಿಂದ ಕೂಡಿರುತ್ತದೆ. ಇಲ್ಲಿ ಕುಸ್ತಿಯಾಡಲು ಕರ್ನಾಟಕದ ಜನತೆ ಮಾತ್ರವಲ್ಲದೇ ಸುತ್ತ ಮುತ್ತಲು ನೆರೆಯ ರಾಜ್ಯಗಳಾದ ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದ ಜನರು ಬರುತ್ತಾರೆ. ಕೊನೆಗೆ ಕುಸ್ತಿ ಆಡಿ ಜಯಶಾಲಿಯಾದ ಕುಸ್ತಿಪಟುವಿಗೆ ಬೆಳ್ಳಿಯ ಕಡಗವನ್ನು ಹಾಕುವ ಸಂಪ್ರದಾಯ ಇಲ್ಲಿ ಬೆಳೆದು ಬಂದಿದೆ. ಭಾರತದ ಪ್ರಮುಖ ಕುಸ್ತಿ ಪಟುವೆನಿಸಿಕೊಂಡಿರುವ ಹಿಂದೆ ಕೇಸರಿ ಎಂದು ಕರೆಯಿಸಿಕೊಂಡಿರುವ ಹರಿಶ್ಚಂದ್ರ ಬಿರಾದಾರ ಅವರು ಈ ಒಂದು ಜಾತ್ರೆಯಲ್ಲಿ ಕುಸ್ತಿಯಾಡಿದ್ದು ಇಲ್ಲಿ ಸ್ಮರಣೀಯವಾದ ವಿಷಯವಾಗಿದೆ.

ಹೀಗೆ ಹಲವು ಬಗೆಯಲ್ಲಿ ಭಕ್ತರ ಕಷ್ಟಗಳು ಪರಿಹರಿಸಿ ಪಾಪಗಳನ್ನು ಮುಕ್ತಗೊಳಿಸುವ ಪುಣ್ಯದ ಅಥವಾ ಸನ್ಮಾರ್ಗದ ಕಡೆ ಭಕ್ತರನ್ನು ಸೆಳೆಯುತ್ತಿರುವ ಈ ಶಂಕರಲಿಂಗ ಪುಣ್ಯಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಿರುವ ಕ್ಷೇತ್ರ. ಈ ಕ್ಷೇತ್ರಕ್ಕೆ ತುಂಬಾ ಕಡೆಯಿಂದ ಭಕ್ತಾದಿಗಳು ಬರುತ್ತಾರೆ. ಒಂದೆಡೆ ಭಕ್ತಿಯಂತೆ ನಿಸರ್ಗದ ಮಡಿಲಿನಲ್ಲಿರುವ ಈ ಪುಣ್ಯ ಕ್ಷೇತ್ರ ಮನಸ್ಸಿಗೆ ಸಂತೋಷವನ್ನು, ಆನಂದವನ್ನು ನೀಡುತ್ತದೆ.

ಬಕ್ಕಪ್ರಭು-೧೪

ಪ್ರಾಚೀನಕಾಲದಿಂದಲೂ ಬೀದರ ಪ್ರದೇಶ ಶರಣ ಸಂತರ ಪವಿತ್ರವಾದ ಪುಣ್ಯಕ್ಷೇತ್ರ ವೈರಾಗ್ಯಮೂರ್ತಿ ಅಲ್ಲಮಪ್ರಭು, ಭಕ್ತಿಭಂಡಾರಿ ಬಸವಣ್ಣ ವಿರಕ್ತಿಸಿದ್ದಿ ಅಕ್ಕ ಮಹಾದೇವಿ ಮುಂತಾದ ಶಿವವ್ಯಕ್ತಿತ್ವ ಸಾಧಕರು ಈ ನೆಲದಲ್ಲಿ ನೆಲಸಿ ಕನ್ನಡ ನೆಲವನ್ನು ಕೈಲಾಸವನ್ನಾಗಿ ಮಾರ್ಪಡಿಸಿದರು. ಇಂಥ ಮಹಾನ ವಿಭೂತಿ-ಪುರುಷರ ಸಾಲಿನಲ್ಲಿ ಶ್ರೀ ಬಕ್ಕಪ್ರಭುಗಳೂ ಒಬ್ಬರು. ೧೯ನೇ ಶತಮಾನದ ಮೊದಲನೇ ಘಟದಲ್ಲಿ ಜೀವಿಸಿದ ಬಕ್ಕಪ್ರಭುಗಳು ಒಬ್ಬ ಧಾರ್ಮಿಕ ಮಹಾಪುರುಷರಾಗಿ ಸಾಮಾಜಿಕ ಐಕ್ಯತೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾನ್ ಜೀವಿಗಳು. ಬಡವ ದೀನ-ದಲಿತ, ದುರ್ಬಲರ, ದು:ಖವನ್ನು ಹೋಗಲಾಡಿಸಿದರು. ತಮ್ಮ ಜೀವಂತ ಸಮಾಧಿಯನ್ನು ಬೀದರ ಜಿಲ್ಲೆಯ ಕರಕನಳ್ಳಿ ಗ್ರಾಮದಲ್ಲಿ ಹೊಂದಿದರು.

"ಭಗವಂತನನ್ನು ಗುರುತಿಸಲ್ಪಡುವುದಕ್ಕೆ ಪ್ರಧಾನ ಲಕ್ಷಣ ಆತನ ಜ್ಞಾನ ಪರಿಪೂರ್ಣತ್ವವೆ ಆಗಿದೆ. "ಆಶ್ಚರ್ಯ, ಶೌರ್ಯ, ವೀರತನ, ಯಶಸ್ಸು, ಜ್ಞಾನ, ವೈರಾಗ್ಯ ಈ ಆರು ಲಕ್ಷಣಗಳಿಗೆ "ಭಗ" ಎಂದು ಹೆಸರು. ಈ ಆರು ಲಕ್ಷಣಗಳು ಲೋಪರಹಿತವಾಗಿ, ಸಮಗ್ರವಾಗಿ ಇರುತ್ತವೆಯೋ ಆ ಸ್ಥಳವನ್ನು ಇಲ್ಲವೇ, ಆ ಮಹಾತ್ಮನನ್ನು ಭಗವಂತನೆ ನಾವು ಕರೆಯುತ್ತೇವೆ. ಒಂದೊಂದು ಸಂದರ್ಭದಲ್ಲಿ ಪ್ರಧಾನವಾಗಿ ಒಂದು ಲಕ್ಷಣ ಕಾಣಿಸಿಕೊಂಡರೆ, ಉಳಿದ ಲಕ್ಷಣಗಳು ಅಂತರ್ಧಾನವಾಗಿರುತ್ತವೆ. ಎಲ್ಲರಲ್ಲಿ ಅನುಗ್ರಹವಾದ ಲಕ್ಷಣ ತೋರದ ಮೇಲೆ ಎಲ್ಲ ಸಂದರ್ಭದಲ್ಲೂ ಕೃಪೆ ನೀಡಲು ಸಮರ್ಥನೀಯವಾಗಿದೆ. ಈ ಅನುಗ್ರಹದಿಂದ ಈಶ್ವರನು ತನ್ನ ಸೃಷ್ಟಿಕಾರ್ಯವನ್ನು ನಡೆಸುವಲ್ಲಿ ಅವರನ್ನು ಜ್ಞಾನಿಗಳನ್ನಾಗಿ ಮಾಡಿ ತಮ್ಮ ಕರ್ಮಬಂಧನಗಳಿಂದ ವಿಮುಕ್ತಿಗೊಳಿಸಿ ಮುಕ್ತಿ ಮಾರ್ಗದಲಿ ನಡೆಸಲು ಕಾರ್ಯಪ್ರವರ್ತಕನಾಗುತ್ತಾನೆ.

ಶಾಲಿವಾಹನ ಶಕೆ ೧೭೩೭ ಶ್ರೀಮುಖ ಸಂವತ್ಸರ ಮಾಘ ಬಹಳ ಚತುರ್ದಶಿ ಕ್ರಿ.ಶ. ೧೯-೦೩-೧೮೧೪ ರಂದು ಭೌರಮ್ಮತೇಜಸ್ವಿಯಾದ, ಕಾಂತಿಯುಕ್ತವಾದ ಎರಡನೇ ಗಂಡು ಮಗುವಿಗೆ ಜನ್ಮವಿತ್ತಳು. ಆ ಮಗುವಿನ

ಜನನದಿಂದ ಭೌರಮ್ಮ-ಭೋಜಪ್ಪ ದಂಪತಿಗಳು ತುಂಬಾ ಸಂತೋಷಪಟ್ಟರು. ಮುತ್ತಿನಂಥ ಆ ಮಗುವಿನ ಹೆಸರು ಬಕ್ಕಪ್ಪ ಎಂದು ನಾಮಕರಿಸಿದರು.

ಬಕ್ಕಪ್ರಭುಗಳು ತಮ್ಮ ಮಿತ್ರರಿಗೆ ಅನೇಕ ಚಮತ್ಕಾರಗಳನ್ನು ಮಾಡಿ ಆಶ್ಚರ್ಯಪಡಿಸುತ್ತಿದ್ದರು. ಅದಕ್ಕೆ ಧನ್ಯಪ್ರಭು ಬಕ್ಕಪ್ರಭು ಎಂದು ಪ್ರೀತಿಯ ಮಾತುಗಳು ಮಿತ್ರರಿಂದ ಬರುತ್ತಿದ್ದವು. ಬಕ್ಕಪ್ರಭುವಿನಲ್ಲಿ ಗುರುವಿನ ದರ್ಶನವು ಆಗಲೆ ಕೆಲವರಿಗೆ ದರ್ಶಿಸಿದ್ದರು. ಅಂದರಂತೆ ಮಹಾತ್ಮರನ್ನು ಗುರುತಿಸುವುದು. ಮಹಾತ್ಮರಿಗೆ ಮಾತ್ರ ಸಾಧ್ಯವಾದ ಅಂಶ ಬಾಲ್ಯದಲ್ಲಿಯೇ ಪ್ರಭುವಿನ ಮುಖದ ಮೇಲಿನ ತೇಜಸ್ಸುಕಾಂತಿ, ಅಂತರ್ಗತ ಭಾವವನ್ನು ಗುರುತಿಸಿದ ಕೆಲವು ಮಹಾಜನರು ಈತ ಅವತಾರ ಪುರುಷನೆಂದು ಭಾವಿಸುತ್ತಿದ್ದರು. ಸಮಚಿತ್ತರಾದ ಪ್ರಭುಗಳು ಸುಖ: ದು:ಖಗಳನ್ನು ಸಮ್ಮಿಶ್ರವಾಗಿ ಸ್ವೀಕರಿಸುತ್ತಿದ್ದರು. ಅಲ್ಲದೇ ಸುತ್ತಲಿನ ಜನರ ಜೊತೆ ಪ್ರೀತಿ ಪ್ರೇಮದಿಂದ ವರ್ತಿಸುತ್ತಾ ಶತ್ರುಗಳನ್ನು ಮಿತ್ರರನ್ನಾಗಿ ಅವಮಾನಗಳನ್ನು ಸನ್ಮಾನಗಳನ್ನಾಗಿ ಮಾರ್ಪಾಡು ಮಾಡುತ್ತಿದ್ದರು. ಅವರು ಮುಖದಲ್ಲಿನ ಈಶ್ವರನ ತೇಜಸ್ಸು ಕಾಂತಿ ನಿರಂತರ ಪ್ರಕಾಶಮಾನವಾಗಿ ಹೊಳೆಯಿತು. ಇವರ ಹತ್ತಿರ ಹಲವು ಕಡೆಯಿಂದ ಭಕ್ತರು ತಮ್ಮ ಕಷ್ಟಗಳಿಗೆ ಪರಿಹಾರಕ್ಕಾಗಿ ಪ್ರಭುವಿನ ದರ್ಶನಕ್ಕಾಗಿ ಬರುತ್ತಿದ್ದರು. ಇವರು ಮಹಾನ ದಿವ್ಯಶಕ್ತಿ ಹೊಂದಿದ ಪ್ರಭುಗಳು ಎಂಬುದಕ್ಕೆ ಇಲ್ಲಿ ನಡೆದ ಪವಾಡಗಳೇ ಕಾಣಬಹುದು.

ಬೀದರ ಜಿಲ್ಲೆಯ ಚಿಟಗುಪ್ಪಾ ಎಂಬ ಗ್ರಾಮದಲ್ಲಿ ದೇಶಪಾಂಡೆ-ಕಾವಲಮ್ಮ ಎಂಬ ದಂಪತಿಗಳಿದ್ದರು. ಅವರು ಬಕ್ಕಪ್ರಭುವಿನ ಭಕ್ತರಾಗಿದ್ದರು. ಅವರಿಗೆ ಸಂತಾನ ಭಾಗ್ಯವಿರಲಿಲ್ಲ. ಹೀಗಿರಲು ಪ್ರಭುವಿನ ಭಕ್ತನೊಬ್ಬ ಅವರಿಗೆ ಗೊಟ್ಟಂ ಗೊಟ್ಟದಲ್ಲಿ ನೆಲೆಸಿರುವ ಪ್ರಭುವಿನ ವಿಷಯವನ್ನು ತಿಳಿಸಿ ಅವರು ನಿಮಗೆ ಆಶೀರ್ವಾದ ನೀಡಿದರೆ ತಪ್ಪದೇ ನಿಮಗೆ ಸಂತಾನ ಪ್ರಾಪ್ತಿ ದೊರಕುವುದು ಎಂದು ತಿಳಿಸಿದರು. ದೇಶಪಾಂಡೆ ವರಪ್ರಧಾನದಕ್ಷರು, ಅಂತರ ಜ್ಞಾನಿಯು, ಭೂತ ಭವಿಷತ್, ವರ್ತಮಾನಗಳನ್ನೆಲ್ಲಾ ಅರಿಯುವ ಮಹಾತ್ಮರೂ ಆಗಿರುವ ಅವರು ದೇಶಪಾಂಡೆಯವರ ಕೋರಿಕೆಯನ್ನು ಇಡೇರಿಸುವುದು ಅವರಿಗೆ ಮಹತ್ತರವಾದ ಕಾರ್ಯವೇನು ಆಗಿರಲಿಲ್ಲ. ಹೂ ಎತ್ತಿದಷ್ಟೆ ಸಲಿಸಾಗಿತ್ತು. ಪ್ರಭುವಿನ ದರ್ಶನವನ್ನು ಪಡೆದು ತಮ್ಮ ಕೋರಿಕೆಯನ್ನು ಭಿನ್ನವಹಿಸಿಕೊಂಡ ಆ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಯ್ತು, ಅಂದಿನಿಂದ ಪ್ರಭುವು ಸಾಕ್ಷಾತ್ ಪರಮಾತ್ಮನೆಂದೆ ತಿಳಿದು ಪೂಜಿಸತೊಡಗಿದರು. ಈ

ತರಹದ (ಮಹಿಮೆ) ಪ್ರಭುಗಳ ದರ್ಶನದಿಂದ ನಡೆದಿವೆ. ಹಾಗೆಯೇ ಈಗಲೂ ಸಹ ಭಕ್ತರು ಇಲ್ಲಿ ಬಂಧು ಬೇಡಿಕೊಂಡ ಎಲ್ಲಾ ಕೋರಿಕೆಗಳು ಪೂರ್ಣಗೊಳ್ಳುತ್ತವೆ. ಇವರ ಹತ್ತಿರ ಜಾತಿ, ಭೇದ, ಭಾವ ಯಾವುದು ಇರಲಿಲ್ಲ. ಎಲ್ಲಾ ಭಕ್ತರು ಸಮಾನರು ಎಂಬುದು ತಿಳಿದು ಬರುತ್ತದೆ. ಏಕೆಂದರೆ, ಮುಸ್ಲಿಂ ಅಧಿಕಾರಿಯು ಶರಣಾಗತಿಯಾಗಿ ಗುರುವಿನ ಭಕ್ತನಾಗಿದ್ದು ಕಂಡುಬರುತ್ತದೆ.

ಪ್ರಭುವಿನ ಸಾನಿಧ್ಯದಲ್ಲಿ ಅನೇಕ ಪುಣ್ಯದ ಕಾರ್ಯಗಳು ಜರುಗುತ್ತಿದ್ದವು. ಅಲ್ಲಿ ಅನೇಕ ಭಕ್ತರು ಸೇರಿ ಧರ್ಮ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು.

ಪ್ರಭುವು ತಮ್ಮ ಸಮಾಧಿಗೆ ಮಹೂರ್ತವನ್ನು ನಿಶ್ಚಯಿಸಿದರು, ಅದು ಸರಿಯಾಗಿ ಅವರ ಜನ್ಮ ತಿಥಿಯಾದ "ಮಾಘ ಬಹಳ ತ್ರೇಯೋದಶಿ" ಎಂದು ಈ ವಿಷಯವು ಎಲ್ಲ ಭಕ್ತರೆದುರಿಗೆ ತಿಳಿಸಲು ಮುಂದಿ ಶಿಷ್ಯರಿಗಷ್ಟೆ ತಿಳಿಸಿ ಸಮಾಧಿ ನಿರ್ಮಾಣ ಕಾರ್ಯಕ್ಕೆ ಆದೇಶ ನೀಡಿ ಹೀಗೆ ಹೇಳಿದರು, "ನಿವೆಲ್ಲಾ ನನ್ನ ಅಗಲಿಕೆಯಿಂದ ನೋಂದುಕೊಳ್ಳುವುದು ಬೇಡ ನಿಮ್ಮ ಜೊತೆ ಜೀವಿಸುವಾಗ ಯಾವ ರೀತಿಯಲ್ಲಿ ನಿಮ್ಮನ್ನು ರಕ್ಷಿಸುತ್ತಾ ಬಂದಿದ್ದಾನೆಯೇ, ಅದೇ ರೀತಿ ಈ ಶರೀರ ತ್ಯಜಿಸಿದ ನಂತರವೂ ನಿಮ್ಮ ಜೊತೆಯಲ್ಲಿಯೇ ಇರುತ್ತೇನೆ. ನನ್ನ ಸಮಾಧಿ ಸಜೀವವಾಗಿ ಇರುತ್ತದೆ. ನೀವು ಭಕ್ತಿಯಿಂದ ಪವಿತ್ರ ಮನದಿಂದ ಯಾವಾಗಲೂ ಕರೆದರು ನಾನು ಮಾತನಾಡುತ್ತೇನೆ ಎಂದು ಪ್ರಭುವುವಾಗ್ದಾನ ಮಾಡಿ ಭವಿಷ್ಯತ್ತಿನಲ್ಲಿ ತಾವು ಮತ್ತೊಂದು ರೂಪದಲ್ಲಿ ಬಂದು ನಿಮಗೆ ದರ್ಶನ ನೀಡುತ್ತೇನೆ. ಆ ಸ್ಥಳದಲ್ಲಿಯೇ ಒಳ್ಳೆಯ ಪುಣ್ಯಕ್ಷೇತ್ರವಾಗುವುದು ಮತ್ತು ಅಲ್ಲಿ ನಿತ್ಯವೂ ಅನ್ನದಾನ ನಡೆಯುವುದಲ್ಲದೇ ಸಂಗೀತಕಲೆಗಳಿಗೆ ಅಲ್ಲಿ ಪೋಷಣೆ ದೊರೆಯುತ್ತದೆ ಎಂದು ತಿಳಿಸಿ ಫಾಲ್ಗುಣ ಚತುರ್ದದಂದು ಸೋಮವಾರ ದಿನಾಂಕ: ೨-೩-೧೮೭೩ ಶಾಲಿವಾಹನ ಶಕೆ ೧೭೯೫ ರಂದು ಎಲ್ಲರೂ ನೋಡುತ್ತಿದ್ದಂತೆಯೇ ಪ್ರಭುವು ಆನಂದ ತಲ್ಲಿನರಾಗಿ ಸಮಾಧಿಯನ್ನು ಪ್ರವೇಶಿಸಿದರು. ಆ ಸಮಾಧಿಯ ಮೇಲ್ಭಾಗದಲ್ಲಿ ಶಿವಲಿಂಗ ಪ್ರತಿಷ್ಠಾಪನೆಯನ್ನು ಮಾಡಿದ ಭಕ್ತರು ದಿನಾಲೂ ಮೂರು ಹೊತ್ತು ಪೂಜೆ ಅರ್ಚನೆಗಳನ್ನು ಮತ್ತು ಮೂರು ಸಮಯಗಳಲ್ಲಿ ಪೂಜೆ ಆರತಿ ತೀರ್ಥ ಪ್ರಸಾದಗಳು ಡಂಕನಾಟಗಳು ನಡೆಯುತ್ತವೆ. ಪ್ರತಿ ವರ್ಷ ಫಾಲ್ಗುಣ ಶುದ್ಧ ಚತುರ್ದಶಿಯಿಂದ ಫಾಲ್ಗುಣ ಪಂಚಮಿಯುವರೆಗೂ ಅಂದರೆ ವಾರದ ವರೆಗೆ

ಜಾತ್ರೆ ಉತ್ಸವಗಳು ಭಕ್ತಿ-ಭಾವದಿಂದ ಜರುಗುತ್ತವೆ. ಚತುರ್ದಶಿಯಂದು ಭಜನೆ-ಕೀರ್ತನೆಗಳು ನಡೆಯುತ್ತವೆ. ಪೂರ್ಣಿಮೆಯೆಂದು ಗ್ರಾಮದಿಂದ ದೇವಾಲಯಕ್ಕೆ ಪಲ್ಲಕ್ಕಿ ಬರುತ್ತದೆ. ಕೃಷ್ಣಪಾಡ್ಯಮಿಯೆಂದು ಲೀಲೋತ್ಸವಗಳು ಗೋಪಾಲ ಕೋಲಾಟ ಮುಂತಾದ ಕಾರ್ಯಗಳು ಉತ್ಸಾಹದಿಂದ ನಡೆಯುತ್ತವೆ. ಮೂರನೆಯ ದಿನ ಬೆಳಗಿನ ಜಾವ ಅಗ್ನಿಪೂಜೆ, ರಾತ್ರಿ ರಥೋತ್ಸವ ಜರುಗುತ್ತದೆ. ಬಹುಶ ಪಂಚಮಿಯ ದಿನ ಪಲ್ಲಕ್ಕಿ ಗ್ರಾಮಕ್ಕೆ ಸೇರುತ್ತವೆ.

ಚಾಂಗಲೇರ ವೀರಭದ್ರೇಶ್ವರ-೧೫

ಜಗತ್ತಿನ ಎಲ್ಲಾ ಮಾನವ ಸಮಾಜದಲ್ಲಿಯ ಒಂದಲ್ಲ ಒಂದು ರೀತಿಯಲ್ಲಿ ರೂಢಿವಾಗಿರುವ ಸಂಗತಿ ಎಂದರೆ ದೇವರಿಂದ ಈ ವಿಶ್ವದ ಎಲ್ಲಾ ಕಾರ್ಯಕಲಾಪಗಳು ನಡೆಯುತ್ತವೆ. ಮಾನವ ಜೀವಿಯ ಕೂಡಾ ದೇವರಿಂದಲೇ ದೈವ ಪ್ರೇರಣೆಯಂತೆ ನಡೆಯುವಂತಹನಾಗಿದ್ದಾನೆ. ನಂಬಿಕೊಂಡು ಜೀವನ ನಡೆಸುತ್ತಾ ಬಂದಿದ್ದೇನೆ. ಇಂತಹ ನಂಬಿಕೆ ಪ್ರತಿಯೊಂದು ಜನಾಂಗ ಪ್ರತಿಯೊಂದು ಧರ್ಮದಲ್ಲಿ ಇರುವುದನ್ನು ಕಾಣುತ್ತೇವೆ.

ದೇವನೊಬ್ಬ ನಾಮ ಹಲವು ಎನ್ನುವಂತೆ ವಿವಿಧ ವರ್ಗದ ಜನರು ಬೇರೆ ಬೇರೆ ಹೆಸರಿನಲ್ಲಿ ದೇವರನ್ನು ಒಲಿಸಿಕೊಳ್ಳಲು ಜಪ, ತಪ, ವಂದನೆ, ಪೂಜೆ, ನಮಾಜು, ಅಭಿಷೇಕ ಪುಣ್ಯಕ್ಷೇತ್ರಗಳ ದರ್ಶನ ಮುಂತಾದವುಗಳು ಮಾಡುತ್ತಾರೆ. ಇವುಗಳೆಲ್ಲದರ ಮೂಲ ಉದ್ದೇಶ ಒಂದೇ ಆಗಿರುತ್ತದೆ. ಅದೆಂದರೆ ಆ ದೇವರು ತಂತಮಗೆ ಒಳಿತನ್ನೇ ಮಾಡಲೆಂಬುದೇ ಮೇಲಿನವುಗಳ ಹಿನ್ನೆಲೆಯಾಗಿದೆ.

ಪುಣ್ಯಕೇತ್ರಗಳು ಜನರ ಹಿತಕ್ಕಾಗಿಯೇ ಇರುತ್ತವೆ. ಅಲ್ಲಿ ಎಲ್ಲಾ ವರ್ಗದ ಜನರಿಗೆ ಮುಕ್ತವಾದ ಪ್ರವೇಶವಿರುತ್ತದೆ. ಪ್ರವಚನ, ಭಜನೆ, ಕೀರ್ತನೆ, ಪ್ರಾರ್ಥನೆ, ಆರಾಧನೆ ಮೊದಲಾದವುಗಳು ಪುಣ್ಯಕ್ಷೇತ್ರಗಳಲ್ಲಿ ಜರುಗುತ್ತವೆ.

ಇಂಥಹ ಒಂದು ಪುಣ್ಯಕ್ಷೇತ್ರ ಬೀದರ ಜಿಲ್ಲೆಯಲ್ಲಿ ಬರುವ ಹುಮನಾಬಾದ ತಾಲೂಕಿನಲ್ಲಿ ಬರುವ ಚಾಂಗಲೇರಾ ವೀರಭದ್ರೇಶ್ವರ ದೇವಸ್ಥಾನ ಬರುವುದು.

ಸುಂದರ ಪ್ರಕೃತಿ ತಮ್ಮ ತಾಣದ ನಡುವೆ ಅವತಾರಿ ವೀರಭದ್ರನ ಪುಣ್ಯಕ್ಷೇತ್ರ ಚಾಂಗಲೇರಾ ಗ್ರಾಮ ಪ್ರವೇಶಿಸುತ್ತಲೇ ಪೂರ್ವದೆಡೆಗೆ ವಿಶಾಲವಾದ ಮುಖ್ಯದ್ವಾರ ಭಕ್ತಾದಿಗಳನ್ನು ಸ್ವಾಗತಿಸುತ್ತದೆ. ಮುಂದೆ ಸ್ವಲ್ಪ ದೂರ ನಡೆಯುತ್ತಲೆ ಭಕ್ತರ ಪಾದತೋಯಿಸಿ ಮಡಿಮಾಡಿ ಗುಡಿಗೆ ಕಳುಹಿಲೆಂಬಂತೆ ದೇವಾಲಯದ ಸ್ನಾನ ಕೊಳವಿದೆ. ಗುಂಡ ದಾಟುತ್ತಲೆ ಸುಮಾರು ೪೦ ಎಕರೆ ಮೈದಾನ ಪ್ರಕೃತಿ ಮಾತೆಯ ಜೊತೆಗೆ ಜನರೂ ಕೈಜೋಡಿಸಿ ರಮ್ಯತೆಯನ್ನು ಹೆಚ್ಚಿಸಿದ್ದಾರೆ. ವಿಶಾಲವಾದ ಮೈದಾನದಲ್ಲಿ ಸುಮಾರು ನೂರಡಿಯ ಚೌಕದ ಹಜಾರಿನ ಪ್ರಾಂಗಣದ ಸುತ್ತ ಮುತ್ತ

ಒಂದಿಷ್ಟು ಚಿಕ್ಕ ಪುಟ್ಟ ಗುಡಿಗಳು. ವೀರಭದ್ರನ ಗರ್ಭಗುಡಿಯ ಮುಂದೆಯೇ ಚಿಕ್ಕದಾದ ಅಗ್ನಿಕುಂಡ ಅದರ ಹಿಂದೆ ಸ್ವಲ್ಪ ಸರಿದರೇ ಚಿಕ್ಕದಾದ ನೀರಿನ ಝರಿ ಹೀಗೆ ಎಲ್ಲವೂ ಅಚ್ಚುಕಟ್ಟಾಗಿ ಕಂಡುಬಂದು ಭಕ್ತರ ಭಕ್ತಿಗೆ ಪೋಷಕವಾಗಿ ನಿಂತಿವೆ.

ಹಾಗೆಯೇ ಒಂದು ದೇವಸ್ಥಾನ ಪುಣ್ಯಕ್ಷೇತ್ರವಾಗ ಬೇಕಾದರೆ ಆ ದೇವರ ಬಗ್ಗೆ ಸತ್ಯಕ್ಕೆ ಹತ್ತಿರವಾಗುವಂತಹ ಹಿನ್ನೆಲೆ ಹೊಂದಿರಬೇಕು. ಆ ದೇವರ ಪವಾಡಗಳು ಮತ್ತು ನಮ್ಮ ತಪ್ಪುಗಳಿಗೆ ಮಾರ್ಗಗಳು ತೋರಿಸಬೇಕು. ನಮ್ಮ ಪಾಪಗಳಿಗೆ ಮುಕ್ತಿ ನೀಡಬೇಕು. ಆಗ ಮಾತ್ರ ನಮ್ಮ ಆ ದೇವರ ಬಗ್ಗೆ ನಂಬಿಕೆ ಹುಟ್ಟುಕೊಳ್ಳುತ್ತದೆ. ಇಂತಹ ನಂಬಿಕೆಯ ದೇವರು ಚಾಂಗಲೇರಾ ವೀರಭದ್ರ ಪುಣ್ಯಕ್ಷೇತ್ರವೂ ಒಂದಾಗಿದೆ.

ವೀರಭದ್ರನ ಪ್ರತಿಷ್ಠಾಪನೆಯ ಹಿಂದೆ ಒಂದು ಐತಿಹ್ಯವಿದೆ. ಈಗಲೂ ಅದನ್ನು ಭಯಭಕ್ತಿಯಿಂದ ಹೇಳಿಕೊಳ್ಳುತ್ತಿರುತ್ತಾರೆ. ಈ ಭಾಗ ಸಂಪನ್ನತೆಯ ಸಮೃದ್ಧಿ ನಾಡು, ಇಲ್ಲಿಯ ಪ್ರಾಕೃತಿಕ ಸಂಪನ್ಮೂಲವೇ ಹಾಗೆ ಕೃಷಿ ಇಲ್ಲಿಯ ತುಂಬು ಜೀವನಕ್ಕೆ ಜೀವನಾಡಿ. ದೇಶಮುಖರ ಮನೆತನ ತುಂಬು ಶ್ರೀಮಂತಿಕೆಯಿಂದ ಕೂಡಿ ಪರೋಪಕಾರ ಪ್ರಸಾದವನ್ನು ನಂಬಿಕೊಂಡು ಬರುತ್ತಿದ್ದ ಮನೆತನ ಅವರ ಆಳುಮಗನೊಬ್ಬ ಕುಂಟಿ ಹೊಡೆಯುವಾಗ ಭಾರದ ಹೆಚ್ಚಳಕ್ಕಾಗಿ ದಿನವೂ ಕಲ್ಲೊಂದನ್ನು ಕುಂಟಿಯ ಮೇಲೆ ಇಕ್ಕುತ್ತಿದ್ದ ಸೂಕ್ತ ಆಕಾರ ಭಾರವನ್ನು ಗಮನಿಸಿದ್ದ ಆತ ಕಲ್ಲೊಂದನ್ನು ಆಯ್ದು ಇಡುತ್ತಿದ್ದವನಿಗೆ ಆಶ್ಚರ್ಯವೆನಿಸಿದ್ದೇನೆಂದರೆ, ತಾನು ಹಿಂದಿನ ಕುಂಟಿ ತಂದುಬಿದ್ದ ಜಾಗದಲ್ಲಿ ಇಂದೆ ಮೊದಲ ದಿನಕಲ್ಲನ್ನೆತ್ತಿ ಕೊಂಡ ಸ್ಥಳದಲ್ಲಿಯೇ ಇರುತ್ತಿತ್ತು. ಅವನು ದಿನವೂ ತರುವುದು ಕಲ್ಲು ಮತ್ತೆ ಅದೇ ಮೂಲ ಸ್ಥಳದಲ್ಲಿ ಸಾಧ್ಧಿನಾಂತರಗೊಳ್ಳುವುದು, ಅವನಿಗೊಂಡು ವಿಚಿತ್ರವೇ ಎನಿಸಿದ್ದಿತು. ಹೀಗೆಯೇ ಹೀಗೆ ಹೇಳಿದನಂತೆ ನಿನ್ನ ಹೊಲದಲ್ಲಿ ನಾನಿದ್ದೇನೆ, ನಿನ್ನ ಆಳು ಮಗ ಕುಂಟಿ ಭಾರಕ್ಕಾಗಿ ಉಪಯೋಗಿಸುತ್ತಿರುವ ಕಲ್ಲು ಬೇರೆನೂ ಅಲ್ಲ ನಾನೇ ಅದನ್ನು ಪ್ರತಿಷ್ಠಾಪಿಸು ನಾನು ಸಂಪನ್ನಗೊಳ್ಳುತ್ತೇನೆ.

ಕನಸಿನ ಹೊತ್ತ ವೀರಭದ್ರನ ಆಜ್ಞೆಗೆ ಪ್ರೇರಕೆಂಬಂತೆ ದೇಶಮುಖರ ಆಳು ಮಗಲಾನುಕಂಡ ಕಲ್ಲಿನ ವಿಚಿತ್ರ ಅನುಭವ ಹೇಳಿಕೊಂಡ, ದೇಶಮುಖರಿಗೆ ಕನಸು ನಿಜವೆನಿಸಿ, ಮುಂದೆ ಕೆಲವೇ ದಿನಗಳಲ್ಲಿ ಸಕಲ ವಾದ್ಯ ವೈಭವಗಳಿಂದ ಊರಿನಿಂದ ಒಂದು ಕಿ.ಮೀ. ದೂರವಿರುವ ದೇಶಮುಖರ ಹೊಲಕ್ಕೆ ಬಂದು ಅವತಾರಿ ವೀರಭದ್ರನ ಇಂದಿನವರೆಗೂ ಜನ ವೀರಭದ್ರನನ್ನು ಭಯ ಭಕ್ತಿಯಿಂದ ಕಂಡು ಜಾತ್ರೆ ಮತ್ತೀತರ ಕಾರ್ಯಕ್ರಮಗಳ ಮೂಲಕ ಹರಕೆಯನ್ನು ಸಲ್ಲಿಸುತ್ತ ಬರುತ್ತಿದ್ದಾರೆ. ಎಲ್ಲಾ ವಿಶೇಷವಾಗಿ ಹರಕೆವು ಮುಡುಮ ಶಪಥ್ ಮೂಲಕ ನೆಲ ಅಳಿಯುವ ಹರಿಕೆ ಹೆಚ್ಚಾಗಿ ಮಾಡಿ ಇದು ಜಾತ್ರೆ ಇಲ್ಲವೇ ಇತರ ನಿಯಮದಲ್ಲಿ ಕೂಡಾ ನಡೆಯುವುದುಂಟು.

ಅನುಭವ ಮಂಟಪ-೧೩

ಬೀದರ ಜಿಲ್ಲೆಯಲ್ಲಿ ಬರುವ ಪುಣ್ಯಕ್ಷೇತ್ರಗಳಲ್ಲಿ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪ ಕೂಡಾ ಒಂದಾಗಿದೆ. ಬೀದರ ನಗರದಿಂದ ಸುಮಾರು ೮೦ ಕಿ.ಮೀ. ದೂರದಲ್ಲಿರುವ ಇದು ಐತಿಹಾಸಿಕ ಅವಶೇಷಗಳನ್ನು ಹೊಂದಿದೆ. ಇಲ್ಲಿ ಅಸಂಖ್ಯಾತ ಭಕ್ತರನ್ನು ಬರಮಾಡಿಕೊಳ್ಳುವ ಸುಂದರ ಪಟ್ಟಣ ಇದಾಗಿದೆ. ಬೀದರ ಜಿಲ್ಲೆಯ ಐದು ತಾಲೂಕುಗಳಲ್ಲಿ ಇದು ಒಂದು ೧೦ ನೇ ಶತಮಾನದ ಉತ್ತರಾರ್ಧದಲ್ಲಿ ಚಾಲುಕ್ಯರು ಮಾನಖೇಡದಿಂದ ಇಲ್ಲಿಗೆ ತಮ್ಮ ರಾಜ್ಯಧಾನಿಯನ್ನು ವರ್ಗಾಯಿಸಿದ ನಂತರವೇ ಇದಕ್ಕೆ ಐತಿಹಾಸಿಕ ಪ್ರಾಮುಖ್ಯತೆ ಬಂದಿದ್ದು, ಅಂದು ಇದು ಸಂಪತ್ಭರಿತವಾದ ನಾಡಾಗಿ ವೈಭವದಿಂದ ಮೆರೆದಿತ್ತು.

ಕಲ್ಯಾಣ ಭಾರತದಲ್ಲೇ ಸುಪ್ರಸಿದ್ಧ ಹೆಸರು ೧೨ನೇ ಶತಮಾನದಲ್ಲಿ ಬಸವ, ಚನ್ನಬಸವ, ಅಲ್ಲಮಪ್ರಭು, ಅಕ್ಕನವರು ಅನುಭವ ಮಂಟಪವನ್ನು ನಿರ್ಮಿಸಿ, ಸಕಲ ಜೀವಿಗಳಿಗೆ ಲೇಸನ್ನೇ ಬೆಳೆಸಿದ ಸತ್ಯ, ಶುದ್ಧ, ಕಾಯಕ, ಭೋದಿಸಿದ ಕೇಂದ್ರಸ್ಥಳ, ಜಾತಿಗಳ ಬೇಲಿಯನ್ನು ಕಿತ್ತಿ ಬಯಸಿದ ಸತ್ಯ, ಅಶುದ್ಧ, ಕಾಯಕ ಭೋದಿಸಿದ ಕೇಂದ್ರಸ್ಥಳ ಮಾನವ ಜನಾಂಗ ಉದ್ಧಾರ ಮಾಡಿ ಧರ್ಮಭೂಮಿ, ಬದುಕು, ಸಾಹಿತ್ಯ ಕಲೆಗಳನ್ನು ಕುರಿತು ಚಿಂತಿಸಿ ಅನುಭಾವದ ನುಡಿಮುತ್ತುಗಳಿಂದ ವಚನ ಸಾಹಿತ್ಯ ಸೃಷ್ಟಿಸಿದ ಅಮರ ಸಾಹಿತ್ಯಗಳು, ಶಿವಶರಣರು ಮಾಡಿದರು, ನುಡಿದಂತೆ ನಡಿಯುವುದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು, ಜನರ ಜೀವನ ಹಸನುಗೊಳಿಸಲು ಜ್ಞಾನ, ದಾಸೋಹ ಮಾಡಿದ ಮಹಾನುಭಾವಿಗಳು ಬೆಳಗಿಸಿದ ಈ ಪುಣ್ಯಕ್ಷೇತ್ರ ಕಲ್ಯಾಣವಾಗಿದೆ. ಮಾನವ ಕುಲ ಕೋಟಿಗೆ ಭಕ್ತಿ, ಶ್ರದ್ಧೆ ಮತ್ತು ಪ್ರಾಮಾಣಿಕ ದುಡಿಮೆ ಕಲಿಸಿಕೊಡುವುದರೊಂದಿಗೆ "ಶಾಂತಿ, ಸಹಬಾಳ್ವೆ" ಸಮಾನತೆಯನ್ನು ಮೊದಲಿಗೆ ತೋರಿಸಿಕೊಟ್ಟಿದ್ದು ಕಲ್ಯಾಣ ನಾಡು.

ಪುಣ್ಯಕ್ಷೇತ್ರಗಳು ಎನ್ನುವ ಪದ ಸತ್ಕರ್ಮ, ಸನ್ಮಾರ್ಗದಿಂದ ದೊರೆಯುವ ಫಲವೆಂದು ಹೇಳಲಾಗಿದೆ. ಹಾಗಾದರೆ ಸತ್ಕರ್ಮ ಮತ್ತು ಸನ್ಮಾರ್ಗಗಳೆಂದರೇನು ಎನ್ನುವ ಪ್ರಶ್ನೆ ಮೂಡುತ್ತದೆ. ತಾನು ಮಾಡುವ ಕಾಯಕ ಯಾವುದಾಗಿದ್ದರು ಅಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆಯನ್ನು ಬೆಳೆಸಿಕೊಳ್ಳಬೇಕೆಂಬ ಆಶಯವಿದೆ. ಜೊತೆಗೆ ತನ್ನ ಜೊತೆ ಇದ್ದವರನ್ನು

ಬೆಳೆಯಬೇಕೆನ್ನುವ ಹಂಬಲದಿಂದ ಕಾಯಕವನ್ನು ಮಾಡಬೇಕು. ತನಗಲ್ಲದೇ ಬೇರೊಬ್ಬರಿಗೆ ಉಪಕಾರವಾಗದ ಬದುಕು ನಿಜವಾದ ಬದುಕಾಗಲಾರದೆಂಬ ಭಾವ ಸತ್ಕರ್ಮದಲ್ಲಿ ಅಡಗಿದೆ. ನಿತ್ಯವು ಕರ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡುವುದು ಇಲ್ಲಿಯ ವಿಶೇಷ. ಸನ್ಮಾರ್ಗ ಸತ್ಕರ್ಮದ ದಿಕ್ಸೂಚಿ, ಒಳ್ಳೆಯ ಕೆಲಸ ಮಾಡಬೇಕಾದರೆ ಅದಕ್ಕೊಪ್ಪುವ ಮಾರ್ಗದಲ್ಲಿಯೇ ನಡೆಯಬೇಕಾಗುತ್ತದೆ. ನಡೆ ನುಡಿಗಳನ್ನು ಶುದ್ಧವಾಗಿಟ್ಟುಕೊಂಡು ನಿತ್ಯ ಜ್ಞಾನಯೋಗಬೇಕಾದಾಗ ಮಾರ್ಗವೇ ಸನ್ಮಾರ್ಗ. ಇಡೀ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣ, ಶರಣೆಯರು ಈ ಪುಣ್ಯ ನೆಲವಾದ ಬೀದರ ಜಿಲ್ಲೆ ಬಸವಕಲ್ಯಾಣದಲ್ಲಿರುವ ಅನುಭವ ಮಂಟಪವು ಮಾದರಿಯ ಪುಣ್ಯಕ್ಷೇತ್ರವಾಗಿದೆ, ಪ್ರಶಾಂತವಾದ ಪ್ರಕೃತಿಯ ಮಡಿಲಲ್ಲಿ ನಿಂತ ಈ ಬೃಹತ್ತಾದ ಅನುಭವ ಮಂಟಪ ಪ್ರವೇಶಿಸಿದಾಗ ಶೂನ್ಯಪೀಠ ಸಂಪಾದಿಸಿದ ಶ್ರೀ ಅಲ್ಲಮಪ್ರಭುಗಳು ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಹಾಗೂ ಅನೇಕ ಶರಣರಾದ ಬಸವಣ್ಣ, ಅಕ್ಕಮಹಾದೇವಿ, ಸಿದ್ದರಾಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಆಯ್ದಕ್ಕಿ ಮಾರಯ್ಯ, ಹರಳಯ್ಯ, ಕಕ್ಕಯ್ಯ, ಅಕ್ಕ ನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ ಹೀಗೆ ಇನ್ನೂ ಸಾವಿರಾರು ಶರಣರು ಕುಳಿತು ವಿಚಾರಗೋಷ್ಠಿ ನಡೆಸಿದ ಈ ಸ್ಥಳದಲ್ಲಿ ನಿಂತಾಗ ಭಕ್ತಿರಸದಲ್ಲಿ ಮಿಂದಂತೆ ಅನುಭವವಾಗುತ್ತದೆ.

ಎಲ್ಲಾ ಪುಣ್ಯಕ್ಷೇತ್ರಗಳ ಹಾಗೆಯೇ ಪವಾಡಗಳು, ಮಹಿಮೆಗಳು ಇಲ್ಲಿ ಕಾಣುವುದಿಲ್ಲ. ನಾವು ದೇವರ ಕೃಪೆ ಪಡೆಯಬೇಕಾದರೆ ನಮ್ಮ ಕಾಯಕದಿಂದ ಮಾತ್ರ ಸಾಧ್ಯವೆಂಬುವುದು ಶಿವಶರಣರ ಮಾತು. ಇಲ್ಲಿರುವ ಶಿವಶರಣರೆಲ್ಲ ಸಹ ಜನ ಸಾಮಾನ್ಯರ ಹಾಗೆ ಅವರು ಮನುಷ್ಯರು. ಆದರೆ ಇವರಲ್ಲಿ ದೇವರ ಸ್ವರೂಪ ಕಾಣುತ್ತೇವೆ. ಇವರು ಜ್ಞಾನಜ್ಯೋತಿಯಿಂದ ಇಡೀ ನಮ್ಮ ಸಮಾಜದಲ್ಲೇ ಬದಲಾವಣೆ ತಂದಂತಹ ಮಹಾನ ವ್ಯಕ್ತಿಗಳು, ಈ ಮಹಾನ ವ್ಯಕ್ತಿಗಳಿಂದಲೇ ಅನುಭವ ಮಂಟಪ ಪುಣ್ಯಕ್ಷೇತ್ರವಾಯಿತು. ಮಹಾನ ಶಿವಶರಣರು ಯಾವುದೇ ನಂಬಿಕೆ, ಮೂಢ ನಂಬಿಕೆಗೆ ಬೆಲೆ ಕೊಡದೇ ಮತ್ತು ಹಿಂದೆ ನಡೆದ ಜೀವನ ಮತ್ತು ಮುಂದೆ ನಡೆಯುವ ಜೀವನಕ್ಕಿಂತ ವಾಸ್ತವ ಬದುಕಿಗಾಗಿ ಬೆಲೆ ನೀಡುತ್ತಿದ್ದರು. ಇವರುಗಳ ಒಂದು ತತ್ವಗಳು, ಸತ್ಕರ್ಮ ಮತ್ತು ಸನ್ಮಾರ್ಗ ಮತ್ತು ಪಾಪ-ಪುಣ್ಯ ಇವುಗಳಲ್ಲಿ ಮಾತ್ರ ನೋಡಬಹುದು. ಇವರಲ್ಲಿ ಉಪವಾಸ ಮಾಡುವುದು, ಹರಕೆ ಹೊತ್ತುವುದು ಇವುಗಳಿಗೆಲ್ಲಾ

ನಂಬಿಕೆ ಇಲ್ಲ. ಇವುಗಳಿಗೆಲ್ಲಕ್ಕಿಂತ ಮೀರಿದ್ದು, ಮಾನವನು ಮಾಡುವ ಕಾಯಕ ಯಾವುದಾಗಿದ್ದರೂ ಅವರಲ್ಲಿ ಭಕ್ತಿ, ಶ್ರದ್ಧೆ ನಿಷ್ಠೆಗಳನ್ನು ಬೆಳೆಸಿ ಕೊಳ್ಳಬೇಕೆಂಬುವುದು ಇವರ ಹಿತವಚನಗಳಾಗಿದ್ದವು. ನಾವು ಮಾಡುವ ಕಾಯಕದಲ್ಲಿ ಮತ್ತು ನಮ್ಮ ನಡೆ-ನುಡಿಗಳು ಶುದ್ಧವಾಗಿರಬೇಕು, ಶುದ್ಧವಾಗಿಟ್ಟುಕೊಂಡು ತನಗಲ್ಲದೇ ಬೇರೊಬ್ಬರಿಗೆ ಉಪಕಾರವಾಗಬೇಕು, ಆಗ ಮಾತ್ರ ನಮ್ಮ ಪಾಪ ಕರ್ಮಗಳು ದೂರವಾಗಿ ಪುಣ್ಯ ಸಿಗುವುದು ಎಂಬುವುದು ಈ ಪುಣ್ಯಕ್ಷೇತ್ರದ ಮಹಿಮೆ.

೧೨ನೇ ಶತಮಾನದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಹಲವು ವೈವಿದ್ಯಮಯ, ಸಂಪ್ರದಾಯ ಆಚರಣೆಗಳು ಆಳವಾಗಿ ಬೇರು ಬಿಟ್ಟಿದವು. ಮನುಷ್ಯ ಮನುಷ್ಯರಲ್ಲಿ ಜಾತಿಯ ಅಡ್ಡ ಗೋಡೆಗಳನ್ನು ಕಟ್ಟಿ ಒಬ್ಬರನ್ನೊಬ್ಬರು ನೋಡದ ಪರಿಸ್ಥಿತಿ ಇತ್ತು. ಸಾಮಾಜಿಕ ಜೀವನದಲ್ಲಿ ಅರಸ ಮತ್ತು ಮಂತ್ರಿ ಪ್ರಮುಖರಾಗಿದ್ದರು. ಅರಸರಿಗೆ ಉಪದೇಶ ಹೇಳುವ ಪುರೋಹಿತಶಾಹಿ ವರ್ಗ, ಯಾವ ಕೆಲಸವಿಲ್ಲದೇ ಉಂಡು ಸುಖಲೋಲುಪತೆಯಲಿ ತೇಲಿಬಿತ್ತು, ಧರ್ಮರಾಜನ ಆಶ್ರಯಕ್ಕೆ ಪೂರಕವಾದ ಮತ್ತು ಗುರುವಿನ ಒಪ್ಪಂದದ ಕೇಂದ್ರವಾಗಿತ್ತು. ದೇವರು ಮನೆ, ಹೊಲ, ಹಾದಿ, ಬಯಲು, ಕಾಲು, ಕೈಗೊಂದರಂತೆ ತುಂಬಿ ಹೋಗಿದ್ದವು. ದೇವರು ಮತ್ತು ಧರ್ಮದ ಹೆಸರಿನಲ್ಲಿ ರಾಜರು, ಪುರೋಹಿತರು ನಿರಂತರ ಶೋಷಣೆ ಮಾಡುತ್ತಿದ್ದರು. ಸಮಾಜದಲ್ಲಿ ಸಾಮಾನ್ಯರ ಸ್ಥಿತಿ ಹಿನಾಯ ಮತ್ತು ಚಿಂತಾಜನಕವಾಗಿತ್ತು. ಇಂತಹ ವಿಶಮ ಸಮಾಜದಲ್ಲಿ ಪರಿಸರದಲ್ಲಿ ಶರಣರು ಉದಯಿಸಿ ಬಂದರು, ಬಸವ, ಅಲ್ಲಮಪ್ರಭು, ಚನ್ನಬಸವ, ಅಕ್ಕಮಹಾದೇವಿ, ಸಿದ್ದರಾಮ, ಅಂಬಿಗರ ಚೌಡಯ್ಯ, ಸಮಗಾರ ಹರಳಯ್ಯ, ಡೊಹರ ಕಕ್ಕಯ್ಯ ಮುಂತಾದವರು ಬೇರೆ ಬೇರೆ ಪ್ರದೇಶದಲ್ಲಿ ಜನಿಸಿದರು, ಅವರೆಲ್ಲ ಅನುಭವಿಸಿದ ನೋವು ಮತ್ತು ಹೋರಾಟ ಒಂದೇ ಬಗೆಯಾಗಿತ್ತು. ಅಂದಿನ ಸಾಂದರ್ಭಿಕ ಒತ್ತಡದ ಕಾರಣದಿಂದಲೇ ಬಸವಣ್ಣನವರು ಸ್ಥಾಪಿಸಿದ ಕಲ್ಯಾಣದ ಅನುಭವ ಮಂಟಪದಲ್ಲಿ ಎಲ್ಲರೂ ಬಂದು ಸೇರಿದರು, ಅವರೆಲ್ಲರ ಚಿಂತನೆಗೆ ಗ್ರಾಸವಾದದ್ದು, ಮತ್ತು ಹೋರಾಟಕ್ಕೆ ಗಟ್ಟಿತನ ಬರಲು ಅಂದಿನ ಸಾಮಾಜಿಕ ಪರಿಸರವೇ ಹೊಣೆಯಾಗಿತ್ತು, ಧರ್ಮದ ಮತ್ತು ಸಮಾಜದ ಅವೈಜ್ಞಾನಿಕ ಕಂದಾಚಾರಗಳನ್ನು ಧಿಕ್ಕರಿಸಿದ ಬಸವಣ್ಣನವರು ವೈರಾಗ್ಯ ನಿಧಿಯಾಗಿ ಉಪದೇಶ ನೀಡುತ್ತಾ ಹೋರಾಡುತ್ತ ಬಂದು, ಅಲ್ಲಮಪ್ರಭು, ಬಸವಣ್ಣನ

ಬೆನ್ನ ಬೆಳಕಾಗಿ ಬೆಳೆದ ಚನ್ನಬಸವ ಸ್ವಾನುಭಾವದಿಂದ ಹೋರಾಟಕ್ಕಿಳಿದು ಅಕ್ಕ ಮಹಾದೇವಿ ಪರಿಸರದ ಒಡನಾಟದಿಂದಲೇ ಪ್ರಜ್ಞೆ ಬೆಳೆಸಿಕೊಂಡು ಕಾಯಕ ಜೀವಿಗಳಾದ ಚೌಡಯ್ಯ, ಹರಳಯ್ಯ ಮುಂತಾದ ಶರಣರೆಲ್ಲರು ಸಮಾಜದ ಪರಿವರ್ತನೆಯ ತುಡಿತದಲ್ಲಿ ಕಲ್ಯಾಣಕ್ಕೆ ಸೇರಿದರು. ಅನುಭವ ಮಂಟಪದಲ್ಲಿ ಪಾಲ್ಗೊಂಡು ಸಮಾಜದ ವಿಷಮತೆಗಾಗಿ ಹೋರಾಟದ ಕಹಳೆ ಊದಿದರು.

"ಅನುಭವ ಮಂಟಪವೆಂದರೆ ಕಲ್ಲು ಮಣ್ಣಿನಿಂದ ಕಟ್ಟಿದ್ದಲ್ಲ, ಮಾನವರ ಹೃದಯಲ್ಲಿ ಕಟ್ಟಿದ್ದು, ವಿವಿಧ ಜನಾಂಗಗಳ ಜನರನ್ನು ಒಂದೇ ಹೃದಯದವರನ್ನಾಗಿ ಬೆಸೆದಿದ್ದು, ಕಲ್ಲು ಮಣ್ಣಿನಿಂದ ಕಟ್ಟಿದ್ದು, ಪ್ರಕೃತಿಯ ವಿಕೋಪಕ್ಕೆ ತುತ್ತಾಗುವುದು, ಮಳೆ ಗಾಳಿಗೆ ಶಿಥಿಲವಾಗುತ್ತದೆ ಎಂದು ಸ್ಥಾವರ ಕಳೆವುಂಟು, ಜಂಗಮ ಕಳಿವಿಲ್ಲ ಎಂದವರು ಸಾಮಾನ್ಯ ಜನರ ಹೃದಯ ಮಂಟಪವನ್ನು ಕಟ್ಟಿಸಿದರು. ಅನುಭಾವಿಗಳ ಗೋಷ್ಠಿಗಳನ್ನು ನಡೆಸಿದರು".

ಸ್ಥಾವರ ಮಂಟಪ ಸ್ಥಿರವಾದುದಲ್ಲ, ಜಂಗಮ ಮಂಟಪ ಚಲನಶೀಲವಾದದ್ದು, ಜಡತ್ವ ಮೀರಿ ಚೈತನ್ಯತ್ವ ಸಾರುವುದು ಜಡವಸ್ತುಗಳನ್ನು ಬೆಳೆಸಿ ಕಟ್ಟಿರುವುದಕ್ಕೆ ಅಂತ್ಯವಿದೆ. ಜಂಗಮವಾದುದಕ್ಕೆ ಅಂತ್ಯವಿಲ್ಲ, ಅನುಭವಿಸಿದಷ್ಟು ಅಧಿಕವಾಗುತ್ತದೆ, ವಿಶಾಲ ತತ್ವವನ್ನು ಬೆಳೆಸುತ್ತದೆ, ಜಡ ವಸ್ತುಗಳ ಕಟ್ಟಡವನ್ನು ತಿರಸ್ಕರಿಸಿ ಚಲನಶೀಲವಾದ ಜ್ಞಾನಾತ್ಮಕ, ವಿಚಾರಾತ್ಮಕ ಗೋಷ್ಠಿಯೇ ಅನುಭವ ಮಂಟಪದ ಮಹಿಮೆಯಿಂದ ಸಾಧ್ಯವಾಯಿತು.

"ಅನುಭವ ಮಂಟಪ ಪುಣ್ಯ ಕ್ಷೇತ್ರವು" ಇಡೀ ಮಾನವ ಕುಲವನ್ನೇ ಅಥವಾ ಮಾನವ ಜನಾಂಗವನ್ನೇ ಒಂದೆಡೆ ಕೂಡಿಸುವುದೇ ಅನುಭವ ಮಂಟಪದ ಮಹತ್ವವಾಗಿತ್ತು. ಕೂಡಿ ಮಾಡುವ ಕಾರ್ಯಗಳೆಲ್ಲ ಆಯಾ ಜನಾಂಗಗಳಲ್ಲೆ ನಡೆಯುತ್ತಿದ್ದವು. ಒಂದು ಜಾತಿಯನ್ನು ಇನ್ನೊಂದು ಜಾತಿಯೊಂದಿಗೆ ಮಾತನಾಡುವುದು, ಕೂಡುವುದು, ನಿಷೇಧವಿತ್ತು. ಅದಕ್ಕಾಗಿ ವಿಧಿ ನಿಯುಮಗಳಿದ್ದವು. ಅವುಗಳನ್ನು ಮೀರಿ ನಡೆದವರಿಗೆ ಘೋರ ಶಿಕ್ಷೆಗಳಿದ್ದವು. ಆಳುವವನಿಗೊಂದು ಆಳಿಸಿಕೊಳ್ಳುವವನಿಗೊಂದು ನೀತಿ ರೂಢಿಯಲ್ಲಿತ್ತು. ಇಂತಹ ರೂಡಿಗಥ ಆಚರಣೆಯಲ್ಲಿ ಚದುರಿದ ಜನರನ್ನು ಕೂಡಿಸಿದ ಕೇಂದ್ರವೇ ಅನುಭವ ಮಂಟಪ.

ಮಾನವ ಕುಲದ ಉದ್ಧಾರಕ್ಕೆ ಸಂಜೀವನಿಯಾದ ವಚನಗಳು ಬದುಕಿನ ಉನ್ನತ ಮೌಲ್ಯ ಮತ್ತು ಸಾಹಿತ್ಯದ ಮೌಲ್ಯವನ್ನು ಜಗತ್ತಿಗೆ ಎತ್ತಿ ತೋರಿಸುತ್ತವೆ. ವಿಚಾರ ಕ್ರಾಂತಿಗೆ ಯಾವತ್ತು ನಾಂದಿ ಹಾಡುತ್ತಲಿವೆ,

ಕುಲವೇನೋ ಆವರಿಂದ, ಕುಲವೇನೋ ಕೊಲ್ಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ, ವಿಪ್ರ ಮೊದಲು, ಅಂತ್ಯಜ್ಯ ಕಡೆಯಾಗಿ, ಶಿವಭಕ್ತ ಆದವರೆಲ್ಲಾ ಒಂದೆಂಬುವ ಕ್ರಾಂತಿಕಾರಿ ಧೋರಣೆಯನ್ನು ಮೊದಲಿಗೆ ಸಾರಿದರು. ದೇವನೊಬ್ಬ ನಾಮ ಹಲವು, ಆಚಾರವೇ ಸ್ವರ್ಗ, ಅನಾಚರವೇ ನರಕ, ಇಲ್ಲಿ ಸಲ್ಲವವರು, ಅಲ್ಲಿ ಸಲ್ಲುವರಯ್ಯ ಮುಂತಾದ ನುಡಿ ಮುತ್ತುಗಳಿಂದ ದೇವರ ಅಸ್ತಿತ್ವವನ್ನೇ ಅಳ್ಳಾಡಿಸುವರು. ಎಂದು ಕೇಳಿದ ಅರ್ಥವಾಗುವ ಮಾತುಗಳು ಜನರ ಹೃದಯವನ್ನು ಆಕರ್ಷಿಸಿದವು. ಶರಣರ ಮಾತು ಕೇಳಿದ ಜನ ದೂರ ದೂರದಿಂದ ಕಲ್ಯಾಣಕ್ಕೆ ಬರತೊಡಗಿದರು, ಕಲ್ಯಾಣ ಮಾನವ ಜನಾಂಗದ ಸರ್ವತೋಮುಖ ಬೆಳವಣಿಗೆ, ಕಲ್ಯಾಣ ಕೇಂದ್ರವಾಗಿತ್ತು. ಜನರಲ್ಲಿ ಬೇರು ಬಿಟ್ಟಿರುವ ಅನೀತಿ ಆಚರಣೆಗಳನ್ನು ಉಗ್ರವಾಗಿ ಖಂಡಿಸಿದರು. ಆಚಾರ, ವಿಚಾರಕ್ಕೆ ಪ್ರಾಮುಖ್ಯತೆ ಕೊಟ್ಟರು, ನೈತಿಕ ತಳಹದಿಯ ಮೇಲೆ ಸಮಾಜ ನಿರ್ಮಿಸಲು ಮುಂದಾದರು, ಯಾವ ಜಾತಿಯವನೇ ಆಗಲಿ ಒಂದು ಕಾಯಕವನ್ನು ಮಾಡಬೇಕು, ಹುಟ್ಟಿನಿಂದ ಯಾರೂ ಮೇಲು ಕೀಳಲ್ಲ, ಅನುಭವ, ಪ್ರತಿಭೆ, ಪರಿಶ್ರಮ, ಪಾಂಡಿತ್ಯದಿಂದ ವ್ಯಕ್ತಿಗೆ ಶ್ರೇಷ್ಠತೆ ಬರುತ್ತದೆ.

ಶರಣರು ರಚಿಸಿದ ಅನುಭವ ಮಂಟಪ ವಿನೂತವಾದದ್ದು, ದೇವರ ಒಲುಮೆ ಬೇಕಾದರೆ ಏನು ಮಾಡಬೇಕು ಎಂಬುವುದನ್ನು ಅನುಭವ ಮಂಟಪ ಚೆನ್ನಾಗಿ ವಿವರಿಸುತ್ತದೆ. ಅಣ್ಣನವರೇ ಇದರ ಮೂಲ ಸೂತ್ರಧಾರರು, ಅವರದೇಯಾದ ಈ ಸೂತ್ರದ ಮೂಲ ಬೀಜ "ಭಕ್ತಿಯಲ್ಲಿದೆ" ಅನುಭವ ಮಂಟಪದಲ್ಲಿ ಭಕ್ತಿಯ ಸಂಗಮ ಕೂಡಲ ಸಂಗಮನೊಡನೆ ಬೆರೆತು, ಶರಣರ ಸಂಗಮದಲ್ಲಿ ಉಕ್ಕಿ ಹರಿದು ಜಗತ್ ಜ್ಯೋತಿಯಾಗಿ ಮೆರೆಯಿತು. ಬಸವಣ್ಣನವರು ಈ ಭಕ್ತಿ ಭಂಡಾರವನ್ನೇ ಮಾನವ ಕುಲದ ಉದ್ಧಾರಕ್ಕಾಗಿ ತೆರೆದಿಟ್ಟರು. ಅಹಮಿಕೆಯನ್ನು ತೊರೆದು ಸರ್ವಂತರಾಮಿ ಶಕ್ತಿಯಲ್ಲಿ ಕಾರಣ್ಯ ಪಡಿವುದೆ ಭಕ್ತಿ ಉಗಮಕ್ಕೆ ಮೂಲ. ಅಲ್ಲಿ ಸರ್ವಾ ಅರ್ಪಣೆ ಬುದ್ಧಿ ಇದೆ. ವಿನಯದ ಸಹಕಾರವಿದೆ, ಮರಹ ಇದೆ, ಅಧ್ಯಾತ್ಮದ ಅರಿವಿದೆ, ಆತ್ಮದ ಕಲ್ಯಾಣದೊಡನೆ ಲೋಕದ ಕಲ್ಯಾಣದ ಹಂಬಲವೂ ಅವರಲ್ಲಿತ್ತು. ಅನುಭವ ಮಂಟಪದಲ್ಲಿ ಮತ್ತು ಶರಣರ ಪ್ರಕಾರ ಪಾಪ ಪುಣ್ಯಗಳ ಬಗ್ಗೆ ಅವರ ನಿಲುವು ಅವರ ವಚನಗಳಲ್ಲಿ ನೋಡಬಹುದು.

ಅನುಭವ ಮಂಟಪದಲ್ಲಿ ಎಲ್ಲಾ ಶರಣರ ನಮ್ರತೆಯನ್ನು ವಿನಯವನ್ನು ಪ್ರತಿಫಲಿಸಿದರು ಅಣ್ಣನವರೇ ಹೇಳಿರುವಂತೆ "ಎನಗಿಂತ ಕಿರಿಯರಿಲ್ಲ,

ಶಿವಭಕ್ತರಿಗಿಂತ ಹಿರಿಯರಿಲ್ಲ'' ಎಂಬ ಸೂಕ್ತಿ ಶತಮಾನಗಳ ನಂತರವೂ ಪ್ರತಿಧ್ವನಿಸುತ್ತಲಿದೆ. ನಿಜ ಜೀವನದಲ್ಲಿ ನಿತ್ಯಾಚರಣೆಯಲ್ಲಿ ಅದನ್ನು ಅನುಭಾವ ಮಂಟಪದ ಶರಣರು ಅನುಕರಣೆ ಮಾಡಿದರು. ಹೀಗಾಗಿ ಅಂದು ಅನುಭವ ಮಂಟಪದಲ್ಲಿ ಮೇರೆದು ಇಂದಿಗೂ ``ಅಪ್ಪ, ಅಯ್ಯ, ಅಣ್ಣ, ಅಕ್ಕ, ತಾಯಿ, ತಮ್ಮ, ದೇವಿ, ನಾಮಧ್ಯೆಯಗಳು ಅನುಭವ ಮಂಟಪದ ಅತ್ಯುತ್ಕೃಷ್ಟ ಸಂಸ್ಕೃತಿಯನ್ನು ನೆಲೆಗೊಳಿಸಿವೆ.

ಅನುಭವ ಮಂಟಪದ ಪುಣ್ಯಕ್ಷೇತ್ರವು ಶಿವಶರಣರ ಒಂದೆಡೆ ಸಾಮೂಹಿಕ ಚರ್ಚೆಗೆ ಸೇರಲು ಅವಕಾಶ ಕಲ್ಪಿಸಿದರು. ಈ ಸಭೆಯನ್ನು ಶಿವತತ್ವ ಗೋಷ್ಠಿ, ವಚನ, ಮಂಟಪ, ಮಹಾಮನೆ, ವಿಶ್ವದ ``ಪ್ರಥಮ ಪಾರ್ಲಿಮೆಂಟ್'' ಎಂದು ಖ್ಯಾತಿ ಪಡೆದು, ವಿಶ್ವದಲ್ಲೇ ಮಾದರಿಯಾಗಿ ಈ ಅನುಭವ ಮಂಟಪದಿಂದ ನಮ್ಮ ಬೀದರ ಜಿಲ್ಲೆ ಇಡೀ ವಿಶ್ವದಲ್ಲೇ ಗುರಿತಿಸಲು ಕಾರಣವಾಯಿತು. ಈ ನಾಡಿನಲ್ಲಿ ಹುಟ್ಟಿದವರು ಪುಣ್ಯವಂತರು.

ಅಧ್ಯಾಯ–೪
ಸಮಾರೋಪ

ಅಧ್ಯಾಯ–೪

ಸಮಾರೋಪ

ಬೀದರ ಜಿಲ್ಲೆ ತನ್ನದೇಯಾದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಕಟ್ಟಡ ವಾಸ್ತುಶಿಲ್ಪ ಮಠ, ಮಂದಿರ, ಮಸೀದಿಗಳ ಕೇವಲ ಪುಣ್ಯಕ್ಷೇತ್ರಗಳಾಗಿರದೇ ಐತಿಹಾಸಿಕ ಧಾರ್ಮಿಕ ಸಮನ್ವಯದ ಜೀವಂತ ಸಾಕ್ಷಿಗಳಾಗಿವೆ. ವಿವಿಧ ಮತ ಪಂಥಗಳ ಈ ಸ್ಮಾರಕಗಳನ್ನು ನೋಡಲು ಬಂದ ಭಕ್ತರು ಇಲ್ಲಿಯ ಸಾಂಸ್ಕೃತಿಕ ಸ್ನೇಹವನ್ನು ವಿಕ್ಷೀಸಿ ಸಂತಸವನ್ನು ವ್ಯಕ್ತಪಡಿಸಿದ್ದಾರೆ.

ಶತಮಾನ ಐತಿಹ್ಯ ಪಡೆದ ಬೀದರ ವಿವಿಧ ಜನಾಂಗ ಸಂಸ್ಕೃತಿಗಳ ಸಮ್ಮಿಲನದ ಸಂಕೇತ ಹಿಂದು, ಮುಸ್ಲಿಂ ಬಾಂಧವ್ಯದ ಕೇಂದ್ರ, ಇಡೀ ನಮ್ಮ ದೇಶದಲ್ಲಿ ಹಿಂಧೂ ಮತ್ತು ಮುಸ್ಲಿಂ ಒಟ್ಟಿಗೆ ಸೇರಿ ಪೂಜೆ ಮಾಡುವಂತಹ ಪುಣ್ಯಕ್ಷೇತ್ರ ನಮ್ಮ ಬೀದರ ಜಿಲ್ಲೆಯಲ್ಲಿ ಅಷ್ಟೂರ ಅಲ್ಲಮಪ್ರಭು ಅಥವಾ ಅಷ್ಟೂರ ಚೌಖಂಡಿಯಲ್ಲಿ ಕಾಣಬಹುದು. ಈ ಒಂದು ಪುಣ್ಯಕ್ಷೇತ್ರ ತುಂಬಾ ಪ್ರಸಿದ್ಧಿ ಹೊಂದಿದೆ. ಈ ಕ್ಷೇತ್ರದಲ್ಲಿ ಹಿಂದೂ ಮತ್ತು ಮುಸ್ಲಿಂ ದೇವರು ಒಬ್ಬನೇಯಾಗಿದ್ದರಿಂದ ಇವೆರಡು ಮತಗಳು ಈ ಪುಣ್ಯಕ್ಷೇತ್ರದಿಂದ ಒಬ್ಬನೊಬ್ಬರು ಸೌಹಾರ್ದತೆಯತ್ತ ಸಹಬಾಳ್ವೆಯಿಂದ ಇರುತ್ತಾರೆ. ಈ ಊರಿನಲ್ಲಿ ನೋಡಿದಾಗ ಹಿಂದೂ ಮುಸ್ಲಿಮರ ಅಂತರವೇ ಗೊತ್ತಾಗುವುದಿಲ್ಲ. ಹೀಗಾಗಿ ನಮ್ಮ ದೇಶದಲ್ಲಿ ಜನರಲ್ಲಿ ನಂಬಿಕೆ ಎನ್ನುವುದು ತುಂಬಾ ಮುಖ್ಯವಾಗಿದೆ. ಏಕೆಂದರೆ, ಕೆಲವೊಂದು ಊರಿಗಳಿಗೆ ಹಿಂದೂ ಮುಸ್ಲಿಂ ಒಬ್ಬನೊಬ್ಬರು ನೋಡಿದರೆ ಆಗುವುದಿಲ್ಲ.

ಎಷ್ಟೋ ಕಡೆ ಹೊಡೆದಾಟ ಇವೆಲ್ಲವೂ ನೋಡುತ್ತೇವೆ. ಆದರೆ ಅಷ್ಟೂರು ಚೌಖಂಡಿಯಂತಹ ಪುಣ್ಯಕ್ಷೇತ್ರ ಎಲ್ಲಾ ಕಡೆ ಇದ್ದರೆ ನಮ್ಮ ದೇಶದಲ್ಲಿ ಮತಗಳಿಂದ ಹೊಡೆದಾಟ, ಹಿಂಸೆ ಎನ್ನುವುದೇ ಕಂಡುಬರುವುದಿಲ್ಲ. ನಾವುಗಳು ನಮ್ಮ ಹಿಂದಿನಿಂದ ಬಂದ ಸಂಪ್ರದಾಯವನ್ನು ತುಂಬ ಮಹತ್ವವಾಗಿ ಕಾಣುತ್ತಾರೆ. ಯಾವುದೇ ಪದ್ಧತಿ ರೂಢಿಯಲ್ಲಿರಲಿ, ಅದನ್ನು ಯಾವುದೇ ವಿಚಾರಣೆ ಮಾಡದೇ ಹಾಗೆಯೆ ನಂಬಿಕೆಯಿಂದ ಮುಂದುವರೆಸುತ್ತೇವೆ. ಧಾರ್ಮಿಕ ಹಿನ್ನಲೆಯಾಗಿದ್ದ ಯಾವುದೇ ವಿಷಯವಿರಲಿ ಭಯದಿಂದಲೋ ಅಥವಾ ಭಕ್ತಿಗೋಸ್ಕರವೋ ಏನೋ ಗೊತ್ತಿಲ್ಲ, ಆದರೆ ನಮ್ಮ ಜನರು ಮಾತ್ರ ಎಲ್ಲರೂ ಒಟ್ಟಿಗೆ ಸೇರುವುದು ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ

ಪುಣ್ಯಕ್ಷೇತ್ರಗಳು ಕೂಡಾ ನಮ್ಮ ಸಮಾಜದಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ಪುಣ್ಯಕ್ಷೇತ್ರಗಳು ಮತಭೇದಗಳನ್ನು ಹೋಗಲಾಡಿಸಲು ಕೆಲಸ ಮಾಡುತ್ತವೆ. ಅಂದಿನ ಸ್ಮಾರಕ, ಕಟ್ಟಡ, ಕಲೆ, ಸಾಹಿತ್ಯ, ಶಾಸನ, ಪುಣ್ಯಕ್ಷೇತ್ರಗಳು, ಮಸೀದಿಗಳು, ಇತಿಹಾಸದ ಸಾಕ್ಷಿ ಸಂಕೇತವಾಗಿ ಇಂದೂ ಕೂಡಾ ನೋಡಲು ಬೀದರ ಜಿಲ್ಲೆಯಲ್ಲಿ ಸಿಗುತ್ತವೆ.

ಐತಿಹಾಸಿಕವಾಗಿ ಬೀದರ ಜಿಲ್ಲೆಯ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಬಹಮನಿ ಬರೀದ್ ಶಾಹಿಗಳ ಕಾಲದಲ್ಲಿ ಮೆರೆದನಾಡಾಗಿದೆ. ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ ಅದರಲ್ಲೂ ಆರನೆ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಚಾಳುಕ್ಯ ಸಾಮ್ರಾಜ್ಯವು ಉನ್ನತಿ, ಸಮೃದ್ಧಿಯ ಶಿಖರವೇರಿತು. ಬಿಜ್ಜಳನ ಕಾಲದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಎಲ್ಲಾ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ಕಂಡ ಚಿರಸ್ಮರಣೀಯ ಕಾಲವಾಗಿತ್ತು. ಈತನ ಆಸ್ಥಾನದಲ್ಲಿ ಬಸವಣ್ಣನವರು ಕಲ್ಯಾಣದಲ್ಲಿ ಧಾರ್ಮಿಕ, ಸಾಮಾಜಿಕ, ಅಧ್ಯಾತ್ಮಿಕ ಕ್ರಾಂತಿ ಮಾಡಿದರು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ಹೋಗಲಾಡಿಸಲು ಯತ್ನಿಸಿದರು. ಕಲ್ಯಾಣ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಅನುಭವ ಮಂಟಪ ಸ್ಥಾಪನೆಯಾಯಿತು. ವಿಶ್ವದ ಪ್ರಥಮ ಪಾರ್ಲಿಮೆಂಟ್ ಎಂದು ಖ್ಯಾತಿ ಪಡೆಯಿತು. ಮತ್ತು ಇನ್ನೊಂದು ಮಹತ್ತರವಾದ ಬದಲಾವಣೆ ತಂದರು. ಅನೇಕ ಶತಮಾನಗಳಿಂದ ಸ್ತ್ರೀ ನಾಲ್ಕು ಗೋಡೆಯಲ್ಲಿ ಮೂಲೆಗುಂಪಾಗಿ ಇದ್ದವಳಿಗೆ ಸ್ತ್ರೀಯರಿಗೂ ಸಮಾನ ಸ್ವತಂತ್ರವನ್ನು ತಂದುಕೊಟ್ಟಿದ್ದು, ಹನ್ನೆರಡನೆಯ ಶತಮಾನದ ಬಸವಣ್ಣನವರು. ೨೦ನೇ ಶತಮಾನ ಬಂದರೂ ಸಹ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ ಇನ್ನೂ ದೂರವೇ ಉಳಿದಿವೆ. ಪುರುಷರೊಡನೆ ಸಮಾನ ಸ್ವಾತಂತ್ರವಿನ್ನೂ ಅವರಿಗೆ ಸಿಕ್ಕಿಲ್ಲ. ೨೦ನೇ ಶತಮಾನದಲ್ಲಿಯೇ ಈ ಪರಿಸ್ಥಿತಿ ಇರುವಾಗ ೮ ಶತಮಾನಗಳಷ್ಟು ಹಿಂದೆ ಯಾವ ಪರಿಸ್ಥಿತಿ ಇತ್ತು ಎಂಬುದನ್ನು ಕಲ್ಪಿಸಿಕೊಳ್ಳಬಹುದು. ೧೨ ನೇ ಶತಮಾನದಲ್ಲಿಯೇ ಸ್ತ್ರೀ-ಪುರುಷ ಸಮಾನತೆಯನ್ನು ಸಾಧಿಸಿದ ಬಸವಣ್ಣನವರ ಅಸೀಮ ಧೈರ್ಯವು ವೀರಶೈವ ಸಂಸ್ಕೃತಿಯ ಅಮೋಘ ತತ್ವವನ್ನು ಎತ್ತಿ ತೋರಿಸುತ್ತದೆ.

ಅನುಭವ ಮಂಟಪವೆಂದೆರೆ ಕಲ್ಲು ಮಣ್ಣಿನಿಂದ ಕಟ್ಟಿದ್ದಲ್ಲ ಮಾನವರು ಹೃದಯದಲ್ಲಿ ಕಟ್ಟಿದ್ದು, ವಿವಿಧ ಜನಾಂಗಗಳ ಜನರನ್ನು ಒಂದೇ

ಹೃದಯದವರನ್ನಾಗಿ ಬೆಸದಿದ್ದು, ಕಲ್ಲು ಮಣ್ಣಿನಿಂದ ಕಟ್ಟಿದ್ದು, ಪ್ರಕೃತಿಯ ವಿಕೋಪಕ್ಕೆ ತುತ್ತಾಗುವುದು, ಮಳೆ ಗಾಳಿಗೆ ಶಿಥಿಲವಾಗುತ್ತದೆಂದು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದವರು ಸಾಮಾನ್ಯ ಜನರ ಹೃದಯ ಮಂಟಪವನ್ನು ಕಟ್ಟಿದ್ದರು. ಅನುಭವ ಗೋಷ್ಠಿಗಳು ನಡೆಸಿದರು. ಹುಟ್ಟಿನಿಂದ ಯಾರೂ ಮೇಲು ಕೀಳಲ್ಲ, ಅನುಭವ, ಪ್ರತಿಭೆ, ಪರಿಶ್ರಮ, ಪಾಂಡಿತ್ಯದಿಂದ ವ್ಯಕ್ತಿಗೆ ಶ್ರೇಷ್ಠತೆ ಬರುತ್ತದೆ. ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ "ಮಾಣಿಕನಗರ"ದಲ್ಲಿ ಸಂತ ಮಾಣಿಕಪ್ರಭುಗಳು ನಮ್ಮ ನಾಡಿನಲ್ಲಿ ಇರುವುದು ನಮಗೊಂದು ದೇವರ ಕೊಡುಗೆಯೆಂದು ಹೇಳಬಹುದು. ಸರ್ವ ಧರ್ಮಗಳ ಸಮನ್ವಯ ಪತಾಕೆಯನ್ನು ಹಾರಿಸಿದರು. ದಕ್ಷಿಣೇಶ್ವರ, ಮಹಾಯೋಗಿ, ರಾಮಕೃಷ್ಣ ಪರಮಹಂಸರಂತೆ ಸರ್ವ ಧರ್ಮಗಳ ಸಮನ್ವಯಕ್ಕಾಗಿ ಈ ವಿಭಾಗದಲ್ಲಿ ಶ್ರೀ ಮಾಣಿಕಪ್ರಭುಗಳು ಶ್ರಮಿಸಿದ್ದನ್ನು ಕಾಣುತ್ತೇವೆ.

ಜಾತಿಯತೆ, ಜಾಡಕ್ಕೆ ಶ್ರೀ ಮಾಣಿಕ ಪಂಥ ರಾಮಬಾಣವಿದ್ದ ಹಾಗೆ. ಇಲ್ಲಿ ಭೇದ-ಭಾವಕ್ಕೆ ಎಡೆಯಿಲ್ಲ, ವಾದ ವಿವಾದಗಳ ತಂಟೆಯಿಲ್ಲ, ವಿವಿಧ ಧರ್ಮಗಳ ಸುಂದರ ಸಮನ್ವಯವನ್ನು ನಾವಿಲ್ಲಿ ದರ್ಶಿಸಬಹುದು. ಹಾಗೆಯೇ ಇಲ್ಲಿಯೇ ಬರುವ ಹುಮನಾಬಾದ ಊರಿನಲ್ಲಿರುವ ವೀರಭದ್ರೇಶ್ವರ ಪುಣ್ಯಕ್ಷೇತ್ರ ಕೂಡಾ ಪವಿತ್ರವಾದ ಪುಣ್ಯಕ್ಷೇತ್ರ ಇಲ್ಲಿ ಪ್ರತಿವೊಬ್ಬರು ತಮ್ಮ ಕಷ್ಟಗಳಿಗೆ ಪರಿಹಾರ ಸಿಗುತ್ತದೆ ಎಂಬ ದೃಢವಾದ ನಂಬಿಕೆ ಇದೆ. ಹಾಗೆಯೇ ಈವಾಗಲೂ ಸಹ ಈ ಪುಣ್ಯಕ್ಷೇತ್ರ ವಿವಿಧ ರೀತಿಯಲ್ಲಿ ಅಭಿವೃದ್ಧಿ ಕಾಣಿಸುತ್ತಿದೆ. ಇಲ್ಲಿ ನಡೆಯುವ ಜಾತ್ರೆಯಂತು ತುಂಬಾ ವಿಶೇಷವಾದದ್ದು, ನಮ್ಮ ದೇಶದ ಎಲ್ಲಾ ಕಡೆಯಿಂದ ಭಕ್ತರು ಬರುತ್ತಾರೆ. ಪ್ರಾಚೀನ ಕಾಲದಿಂದಲೂ ಬೀದರ ಜಿಲ್ಲೆ ಶರಣ, ಸಂತರ ಪವಿತ್ರವಾದ ಪುಣ್ಯಕ್ಷೇತ್ರ. ವೈರಾಗ್ಯ ಮೂರ್ತಿ ಅಲ್ಲಮಪ್ರಭು, ಭಕ್ತಿಭಂಡಾರಿ ಬಸವಣ್ಣ, ವಿರಕ್ತಿ ಸಿದ್ಧಿ ಅಕ್ಕಮಹಾದೇವಿ ಮುಂತಾದ ಶಿವ ವ್ಯಕ್ತಿತ್ವದ ಸಾಧಕರು ಈ ನೆಲದಲ್ಲಿ ನೆಲೆಸಿ ಕನ್ನಡ ನೆಲವನ್ನು ಕೈಲಾಸವನ್ನಾಗಿ ಮಾರ್ಪಡಿಸಿದರು. ಇಂತಹ ಮಹಾನ್ ವಿಭೂತಿ ಪುರುಷರ ಸಾಲಿನಲ್ಲಿ ಶ್ರೀ ಬಕ್ಕಪ್ರಭುಗಳು ಒಬ್ಬರು ೧೯ ನೇ ಶತಮಾನದ ಮೊದಲನೇ ಘಟ್ಟದಲ್ಲಿ ಜೀವಿಸಿದ ಬಕ್ಕಪ್ರಭುಗಳು ಒಬ್ಬ ಧಾರ್ಮಿಕ ಮಹಾಪುರುಷರಾಗಿ ಸಾಮಾಜಿಕ, ಐಕ್ಯತೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾನ್‌ಜೀವಿಗಳು, ಬಡವ, ದೀನ-ದಲಿತ, ದುರ್ಬಲ್ಯರ

[illegible]

[illegible]

ದು:ಖವನ್ನು ಹೋಗಲಾಡಿಸಿದರು. ಈ ನಮ್ಮ ನಾಡು ಪವಿತ್ರ, ಪುಣ್ಯಕ್ಷೇತ್ರವಾಗಿ ಮಾಡಿದರು. ಹಾಗೆಯೇ ಹುಮನಾಬಾದ ತಾಲೂಕಿನಲ್ಲಿ ಬರುವ ಚಾಂಗಲೇರಾ ಗ್ರಾಮದಲ್ಲಿರುವ ಅವತಾರಿ ವೀರಭದ್ರನ ಪುಣ್ಯಕ್ಷೇತ್ರವು ಮಹತ್ವಕ್ಷೇತ್ರ, ಇಲ್ಲಿ ಕೆಲವೊಂದು ವಿಷಯಗಳಲ್ಲಿ ಅಭಿವೃದ್ಧಿ ಹೊಂದಬೇಕಾಗಿದೆ. ಇಲ್ಲಿ ದೇವರ ಮಹಿಮೆ ತುಂಬಾ ಇದೆ. ಆದರೆ ಇಲ್ಲಿನ ನಡೆಸುತ್ತಿರುವ ವ್ಯವಸ್ಥೆಯಲ್ಲಿ ಬದಲಾವಣೆ ಕಾಣಬೇಕಾಗಿದೆ.

ಭಾಲ್ಕಿ ತಾಲೂಕಿನಲ್ಲಿ ಬರುವ ಮೈಲಾರ ಮಲ್ಲಣ್ಣ ಪುಣ್ಯಕ್ಷೇತ್ರವು ದಕ್ಷಿಣ ಕಾಶಿಯೆಂದೇ ಪ್ರಸಿದ್ಧಿ ಪಡೆದಿದೆ. ಇಲ್ಲಿ ಸುತ್ತ ಮುತ್ತ ಅನೇಕ ಚಿಕ್ಕ ಚಿಕ್ಕ ಮೂರ್ತಿಗಳು, ಗುಡಿಗಳು ಇವೆ, ಇವುಗಳಿಗೆಲ್ಲಾ ಒಂದು ಹಿನ್ನೆಲೆ ಇರಬಹುದು, ಸಾಕ್ಷಿಗಳು ಸಿಗಬಹುದು, ಆದರೆ ಇಲ್ಲಿ ಸಂಶೋಧನೆ ಆಗಬೇಕು. ಇಲ್ಲಿನ ಕ್ಷೇತ್ರ ತುಂಬ ಪವಿತ್ರ ಕ್ಷೇತ್ರ, ಆದರೆ ಈ ಕ್ಷೇತ್ರ ಮಹಿಮೆ ಇನ್ನೂ ಹೆಚ್ಚಿನ ಮಟ್ಟಿಗೆ ಪ್ರಸಿದ್ಧಿ ಹೊಂದಬೇಕಾದರೆ, ಇಲ್ಲಿಗೆ ಬರುವ ಭಕ್ತರಿಗೆ ಉಳಿದುಕೊಳ್ಳಲು ವ್ಯವಸ್ಥೆ ಇಲ್ಲ. ಇಲ್ಲಿ ಹಲವು ರೀತಿಯಾಗಿ ಅಭಿವೃದ್ಧಿಯಾಗಬೇಕಾಗಿದೆ. ಬೀದರ ಜಿಲ್ಲೆಯ ಅತ್ಯಂತ ಪವಿತ್ರವಾದ ಧಾರ್ಮಿಕ ಕ್ಷೇತ್ರ ಸ್ಥಳಗಳ ನಾಡಾಗಿದೆ. ಸಿಖ್ಖರ ಪವಿತ್ರ ಕ್ಷೇತ್ರ ಗುರುನಾನಕ ಬೀದರ ಜಿಲ್ಲೆ ಸಿಖ್ಖ ಜನರ ಪುಣ್ಯಕ್ಷೇತ್ರವಾಗಿದೆ. ಇದು ಬೀದರ ಜಿಲ್ಲೆಯನ್ನು ಎರಡನೇ ಪಂಜಾಬ್ ಎಂದು ಹೇಳಲಾಗಿದೆ. ಹಾಗೂ ನರಸಿಂಹ ಝುರನಾ ಹಿಂದುಗಳ ಪವಿತ್ರವಾದ ಕ್ಷೇತ್ರವಾಗಿದೆ. ಇಲ್ಲಿಗೆ ಸಾವಿರಾರು ಜನರು ಸದಾ ಬರುತ್ತಿರುತ್ತಾರೆ. ಹಾಗೂ ನರಸಿಂಹ ಝುರನಾ ಗವಿ ನೋಡಲು ಎಂತಹವರನ್ನು ಆಶ್ಚರ್ಯ ಮೂಡಿಸುತ್ತದೆ. ಪಾಪನಾಶ ಮಂದಿರ ಕೂಡ ಬೀದರ ಜಿಲ್ಲೆಯ ಅತ್ಯಂತ ಪ್ರಾಚೀನ ಕ್ಷೇತ್ರವಾಗಿದೆ. ಬೀದರ ಜಿಲ್ಲೆಯಲ್ಲಿ ಸಾಕ್ಷಾತ್ ದೇವರುಗಳು ಬಂದು ಹೋದ ಸಾಕ್ಷಿಗಳನ್ನು ಇಲ್ಲಿ ಗುರುತಿಸಬಹುದು.

ಸೂರ್ಯ, ಚಂದ್ರ ಇರುವ ತನಕ ಅವರು ಸ್ಥಾಪಿಸಿದಂತಹ ಸ್ಥಳಗಳ ಗುರುತು ಇಂದಿಗೂ ಬದಲಾವಣೆ ಹೊಂದುವುದಿಲ್ಲವೆಂದು ಹೇಳಿದ್ದಾರೆ. ಹೀಗಾಗಿ ಬೀದರ ಜಿಲ್ಲೆಯು ಧಾರ್ಮಿಕವಾಗಿ, ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ನಾಡಾಗಿದೆ. ಪುಣ್ಯಕ್ಷೇತ್ರಗಳು, ಮಸೀದಿಗಳು, ಕೋಟೆ, ಕಟ್ಟಡ, ವಾಸ್ತುಶಿಲ್ಪ ಎಲ್ಲವೂ ಸಾಕ್ಷಿ ಸಂಕೇತವಾಗಿ ನಿಂತಿವೆ.

ಅಧ್ಯಾಯ–೫

ಅನುಬಂಧ

ಗ್ರಂಥಋಣ

ವಕ್ತಾರರ ಪಟ್ಟಿ

ಪ್ರಮುಖ ಫೋಟೊಗಳು

ಗ್ರಂಥಋಣ

ಕ್ರ. ಸಂ.	ಲೇಖಕರ / ಸಂಪಾದಕರ ಹೆಸರು	ಗ್ರಂಥದ ಹೆಸರು	ಪ್ರಕಾಶನ / ಪ್ರಕಟಣ ವರ್ಷ
೧	ಡಾ. ಜಗನ್ನಾಥ ಹೆಬ್ಬಾಳೆ	ಬೀದರ ಜಿಲ್ಲಾ ದರ್ಶನ	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಬೀದರ-೧೯೯೭
೨	ಡಾ. ಎಂ.ಎಸ್. ಲಠ್ಠೆ	ಶ್ರೀ ಮಾಣಿಕಪ್ರಭು	ಪ್ರಕಾಶಕರು ಶ್ರೀ ಮಾಣಿಕಪ್ರಭು ಸಂಸ್ಥಾನ, ಮಾಣಿಕನಗರ-೨೦೦೨
೩	ಕು. ಸಂಗೀತಾ. ಎಸ್. ಹೊನ್ನಳ್ಳಿ	ಶ್ರೀ ಗುರು ಗಂಗಾಧರ ಬಕ್ಕಪ್ರಭು.	ಪ್ರಕಾಶಕರು ಶ್ರೀ ಗುರು ಗಂಗಾಧರ ಬಕ್ಕಪ್ರಭು ದೇವಾಲಯ ಕರಕನಳ್ಳಿ-೨೦೦೮
೪	ಡಾ. ಎಸ್.ಎಂ. ಹಿರೇಮಠ	ವೀರಶೈವ ಸಾಹಿತ್ಯ	ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡ ಬಸವಕಲ್ಯಾಣ ತಾಲೂಕಾ ಬೀದರ ಜಿಲ್ಲೆ-೧೯೯೬
೫	ಡಾ. ಜಗನ್ನಾಥ ಹೆಬ್ಬಾಳೆ	ಬೀದರ ಜಿಲ್ಲೆ ಸಾಹಿತ್ಯ ಅವಲೋಕನ.	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಬೀದರ ೧೯೯೮
೬	ಡಾ. ಜಗನ್ನಾಥ ಹೆಬ್ಬಾಳೆ	ಹೈದ್ರಾಬಾದ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ	ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು
೭	ದೇವುಪತ್ತರ್ ವರದಿಗಾರರು ಪ್ರಜಾವಾಣಿ	ಬೀದರ ಉತ್ಸವ ಸ್ಮರಣ ಸಂಚಿಕೆ ಬೀದರ	ಜಿಲ್ಲಾ ಆಡಳಿತ, ಬೀದರ ೨೦೦೬
೮	ಜಿಲ್ಲಾ ಸಂಸ್ಕೃತಿ ಪರಿಷತ್ ಬೀದರ.	ಬೀದರ ಉತ್ಸವ ಸ್ಮರಣ ಸಂಚಿಕೆ.	ಜಿಲ್ಲಾ ಆಡಳಿತ, ಬೀದರ ೨೦೦೯
೯	ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ.	ಭಾಲ್ಕಿ ತಾಲೂಕಾ ಪರಿಚಯ.	ಬೀದರ ಜಿಲ್ಲಾ ೭ನೇ ಕನ್ನಡ ಸಾಹಿತ್ಯ ಸಮ್ಮೇಳನ ಹಾರಕೂಡ ತಾ. ಬಸವಕಲ್ಯಾಣ ಜಿ. ಬೀದರ.
೧೦	ಬಸವರಾಜ ಸಬರದ	ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ	ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಧಾರವಾಡ-೧೯೮೨

ವಕ್ತಾರರ ಪಟ್ಟಿ

೧	ಹೆಸರು : ರಾಜು ಠಾಕೂರ ಊರು : ಮಂಗಲಪೇಟ ವಯಸ್ಸು: ೬೫ ಶಿಕ್ಷಣ : ಅಶಿಕ್ಷಿತ ಕಾಯಕ: ಕೂಲಿ.	೭. ಹೆಸರು : ಸಿದ್ರಾಮಪ್ಪ ಎಸ್. ಊರು : ಔರಾದ ವಯಸ್ಸು : ೪೦ ಶಿಕ್ಷಣ : ಎಸ್.ಎಸ್.ಎಲ್.ಸಿ. ಕಾಯಕ : ಒಕ್ಕಲುತನ.
೨	ಹೆಸರು : ಮನೋಜ ಊರು : ಚೌಬಾರಾ ವಯಸ್ಸು: ೪೦ ಶಿಕ್ಷಣ : ಬಿ.ಕಾಂ. ಕಾಯಕ: ಮಾರ್ಗದರ್ಶಕ (ಗೈಡ್).	೮. ಹೆಸರು : ಬಸವರಾಜ ಊರು : ಬಸವಕಲ್ಯಾಣ ವಯಸ್ಸು : ೩೦ ಶಿಕ್ಷಣ : ಬಿ.ಎ. ಕಾಯಕ : ಮಾರ್ಗದರ್ಶಕ (ಗೈಡ್)
೩	ಹೆಸರು : ಹೀರೇಶ ಊರು : ನೌಬಾದ ವಯಸ್ಸು: ೫೫ ಶಿಕ್ಷಣ : ಅಶಿಕ್ಷಿತ ಕಾಯಕ: ಪೂಜಾರಿ.	೯. ಹೆಸರು : ಸೋನಮ್ಮಾ ಊರು : ಹಳ್ಳಿಖೇಡ ವಯಸ್ಸು : ೪೦ ಶಿಕ್ಷಣ : ಅಶಿಕ್ಷಕಿ ಕಾಯಕ : ಗೃಹಿಣಿ
೪	ಹೆಸರು : ಗುರುಲಿಂಗಯ್ಯ ಊರು : ಹುಮನಾಬಾದ ವಯಸ್ಸು: ೬೦ ಶಿಕ್ಷಣ : ಅಶಿಕ್ಷಿತ ಕಾಯಕ: ಒಕ್ಕಲುತನ.	೧೦. ಹೆಸರು : ಶರಣಬಸಪ್ಪಾ ಊರು : ಹಳ್ಳಿಖೇಡ ವಯಸ್ಸು : ೪೮ ಶಿಕ್ಷಣ : ಅಶಿಕ್ಷಕಿತ ಕಾಯಕ : ಪೂಜಾರಿ
೫	ಹೆಸರು : ಲಿಂಗರಾಜು ಊರು : ಮೈಲಾರ ವಯಸ್ಸು: ೪೦ ಶಿಕ್ಷಣ : ಎಸ್.ಎಸ್.ಎಲ್.ಸಿ ಕಾಯಕ: ವ್ಯಾಪಾರ.	೧೦. ಹೆಸರು : ಜಗದೀಶ. ಊರು : ಘಾಟಬೋರಾಳ ವಯಸ್ಸು : ೪೫ ಶಿಕ್ಷಣ : ಎಸ್.ಎಸ್.ಎಲ್.ಸಿ. ಕಾಯಕ : ವ್ಯಾಪಾರಿ.
೬	ಹೆಸರು : ರಾಮದಾಸ ಊರು : ಕರಕನಳ್ಳಿ ವಯಸ್ಸು: ೩೦ ಶಿಕ್ಷಣ : ಅಶಿಕ್ಷಿತ ಕಾಯಕ: ಒಕ್ಕಲುತನ.	೧೧. ಹೆಸರು : ಧನರಾಜ ಊರು : ಕೂಡಲಸಂಗಮ ವಯಸ್ಸು : ೪೮ ಶಿಕ್ಷಣ : ಅಶಿಕ್ಷಿತ ಕಾಯಕ : ಪೂಜಾರಿ
೭	ಹೆಸರು : ನಾರಾಯಣ ಊರು : ಬೀದರ ವಯಸ್ಸು: ೪೫ ಶಿಕ್ಷಣ : ಅಶಿಕ್ಷಿತ ಕಾಯಕ: ಪೂಜಾರಿ	೧೨. ಹೆಸರು : ಶರಣಪ್ಪಾ ಊರು : ಚಾಂಗಲೇರ ವಯಸ್ಸು: ೪೦ ಶಿಕ್ಷಣ : ಎಸ್.ಎಸ್.ಎಲ್.ಸಿ. ಕಾಯಕ : ಪೂಜಾರಿ.



ಶ್ರೀ ನರಸಿಂಹ ಝರಣಿ ದೇವಸ್ಥಾನ



ಶ್ರೀ ಪಾಪನಾಶಲಿಂಗ ದೇವಸ್ಥಾನ



ಗುರುನಾನಕ ಝರಾ



ಅನುಭವ ಮಂಟಪ



ಶ್ರೀ ವೀರಭದ್ರೇಶ್ವರ ದೇವಾಲಯ



ಶ್ರೀ ಮಾಣಿಕ ಪ್ರಭು ದೇವಾಲಯ



ಕರಕನಳ್ಳಿಯ ಬಕ್ಕಪ್ರಭು ಪುಣ್ಯಕ್ಷೇತ್ರದ ಮಹಾದ್ವಾರ



ಚೌಖಂಡಿ (ಅಷ್ಟುರ ಹತ್ತಿರ ಇರುವ ಹಜರತ್ ಖಲಿಲುಲ್ಲಾ ಅವರ ಸಮಾಧಿ)